ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೧೦ ಮಾರ್ಚ್ ೫. ೧೯೮೯ ೧-೦೦

"ಮಾರ್ಕ್ಸ್‌ವಾದ ನನಗೆ ಕನಸುಳ್ಳ ನ... ಸದ-ಆತ್ಮಾನಂದ ನೀಡಿದೆ-ಎತ್ತ ಸಾಗಬೇಕೆಂಬ ಜ್ಞಾನ ನೀಡಿ ಮತ್ತು ಯಾವ ಉದ್ದೇಶಕ್ಕಾಗಿ ನಾನು ಬದುಕುತ್ತಿರುವೆನೋ ಅದರ ಅಂತಿಮ ಫಲಿತಾಂಶದ... ಪೂರ್ಣ ವಿಶ್ವಾಸ ನ...



ಎನ್.ಕೆ.ಕೃಷ್ಣಾಯಾರವರ ಪ್ರತಿಮೆ

ಪಶ್ಚಿಮ ಬಂಗಾಳ ಕಾಂಗ್ರೆ ಎಂ.ಎಲ್.ಎ.ಗಳಿಂದ
ಪ್ರಜಾಪ್ರಭುತ್ವ ತುಳಿದ ದುಷ್ಕೃತ್ಯ

ಫೆಬ್ರವರಿ 27ರಂದು ಪಶ್ಚಿಮಬಂಗಾಳ ವಿಧಾನ ಸಭೆಯ ಬಜೆಟ್ ಅಧಿವೇಶನದ ಆರಂಭದಲ್ಲಿ ಕಾಂಗ್ರೆ ಎಂ.ಎಲ್.ಎ.ಗಳು ಗೂಂಡಾಗಿರಿಯ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದರು. ರಾಜ್ಯಪಾಲ ಪ್ರೊ|| ನೂರುಲ್‌ಹಸನ್‌ರವರ ಮೇಲೆ ಬಿದ್ದು ಪ್ರಹಾರಗಳ ಸುರಿ ಮಳೆಗೈದರು. ಎಡ ರಂಗದ ಎಂ.ಎಲ್.ಗಳು ನಿರ್ವಾಹವಿಲ್ಲದೆ ರಾಜ್ಯಪಾಲರ ದೈಹಿಕ ರಕ್ಷಣೆಗೆ ಮಧ್ಯಪ್ರವೇಶಿಸಬೇಕಾಗಿ ಬಂತು.

ರಾಜ್ಯಪಾಲರು ಸಧನ ಪ್ರವೇಶಿಸುವ ಮೊದಲೇ ಕಾಂಗ್ರೆ ಎಂ.ಎಲ್.ಎ.ಗಳು ಅತ್ಯಂತ ಅಶಿಸ್ತಿನಿಂದ ಕೂಗಾಡುತ್ತಿದ್ದರು. ರಾಜ್ಯಪಾಲರು ಭಾಷಣ ಓದಲಾರಂಭಿಸಿದ ಕೂಡಲೇ ಸದನದಲ್ಲಿ ಕಾಂಗ್ರೆ ಮುಖಂಡ ಅಬ್ದುಸ್ ಸತ್ತಾರ್ ತಮ್ಮ ಭಾಷಣ ಓದಲಾರಂಭಿಸಿದರು. ಅವರ ಭಾಷಣ ಮುಗಿದ ಕೂಡಲೇ ಇತರ ಕಾಂಗ್ರೆಗಳು ಪ್ರೊ|| ಹಸನ್‌ರವರನ್ನು ಸುತ್ತುವರಿದು ಅವರು ಭಾಷಣ ಓದುವುದನ್ನು ತಡೆಯಲು ಪ್ರಯತ್ನಿಸಿದರು. ರಾಜ್ಯಪಾಲರು ವಿಚಲಿತರಾಗದ್ದನ್ನು ಕಂಡು ಕೆಲವು ಶಾಸಕರು ಭಾಷಣದ ಮುದ್ರಿತ ಪ್ರತಿಯನ್ನು ರಾಜ್ಯಪಾಲರ ಮುಖದತ್ತ ಎಸೆದರು. ಇನ್ನೊಬ್ಬ ಕಾಂಗ್ರೆ ಸದಸ್ಯ ಓದಲು ಬೆಳಕಿಗಾಗಿ ಇಟ್ಟದ್ದ ದೀಪವನ್ನು ಆರಿಸಿದರು. ಇದರಿಂದಲೂ ಪ್ರೊ|| ಹಸನ್ ವಿಚಲಿತರಾಗದ್ದನ್ನು ಕಂಡು ತಲೆಕೆಟ್ಟಂತಾದ ಕಾಂಗ್ರೆಗಳು ಎಲ್ಲರೆದುರೇ ರಾಜ್ಯಪಾಲರನ್ನು ಥಳಿಸಲಾರಂಭಿಸಿದರು.

ಇಷ್ಟರವರೆಗೂ ಆತಂಕದಿಂದ, ಆದರೂ ಅತ್ಯಂತ ಸಂಯಮದಿಂದ ಕಾಂಗ್ರೆ ದುಷ್ಕೃತ್ಯಗಳನ್ನು ನೋಡುತ್ತಿದ್ದ ಎಡರಂಗದ ಸದಸ್ಯರು ಈಗ ನಿರ್ವಾಹವಿಲ್ಲದೆ ಮಧ್ಯ ಪ್ರವೇಶಿಸಬೇಕಾಯಿತು. ಗೂಂಡಾಗಿರಿಯಲ್ಲಿ ತೊಡಗಿದ್ದ ಕಾಂಗ್ರೆ ಸದಸ್ಯರು ತಕ್ಷಣ ಕಾಲು ಕಿತ್ತರು. ನಂತರವೂ ರಾಜ್ಯಪಾಲರು ಸದನದಿಂದ ಹೊರಗೆ ಹೋಗುವುದನ್ನು ತಡೆಯುವ ಕಾಂಗ್ರೆಗಳ ಪ್ರಯತ್ನ ಎಡರಂಗ ಸದಸ್ಯರು ರಾಜ್ಯಪಾಲರ ಸುತ್ತ ರಚಿಸಿದ ವ್ಯೂಹದಿಂದಾಗಿ ವಿಫಲಗೊಂಡಿತು. ರಾಜ್ಯಪಾಲರು ಕಾರನ್ನು ಪ್ರವೇಶಿಸಿದ ಮೇಲೂ ಇಬ್ಬರು ಕಾಂಗ್ರೆಗಳು ಕಾರಿನ ಮೇಲೆ ಹತ್ತಿ ಕೂಗಾಡುತ್ತಾ ಕುಣಿಯಲಾರಂಭಿಸಿದರು. ಇನ್ನೊಬ್ಬರು "ಜ್ಯೋತಿ ಬಸು ಸರ್ಕಾರವನ್ನು ದಯವಿಟ್ಟು ವಜಾ ಮಾಡಿ" ಎಂದು ಗೋಗರೆದರೆ ಪತ್ರಿಕೆಗಳು ವರದಿ ಮಾಡಿವೆ.

ಕಾಂಗ್ರೆ ಸದಸ್ಯರು ಏಕೆ ಸದನದ ಹೊರಗಿನ ವರ್ತನೆಯನ್ನು ಒಳಗೂ ಕೂಡಾ ಇಷ್ಟೊಂದು ಹುಚ್ಚುತನದಿಂದ ವಿಸ್ತರಿಸಿದರು. ಅವರ ಪ್ರಕಾರ ಇದು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆಯಷ್ಟೆ. ಆದರೆ ಯಾರೂ ಇದನ್ನು ನಂಬುತ್ತಿಲ್ಲ. ಕೆಲವು ಕಾಂಗ್ರೆಗಳು ಪ್ರೊ|| ಹಸನ್‌ರವರತ್ತ "ನೀವು ಎಡರಂಗದ ಏಜೆಂಟರು" ಎಂದು ಕೂಗಾಡಿದರು.

ಪ್ರೊ||. ನೂರುಲ್ ಹಸನ್‌ರವರು ಕೇರಳದ ಅಥವಾ ಆಂಧ್ರಪ್ರದೇಶದ ರಾಜ್ಯಪಾಲರುಗಳಂತೆ. ಕೇಂದ್ರದ ಆಳುವ ಪಕ್ಷದ ನಿರ್ಲಜ್ಜ ಏಜೆಂಟರಂತೆ ವರ್ತಿಸದಿರುವುದು ಬಹುಶಃ ಕಾಂಗ್ರೆಗಳನ್ನು ಬಹಳ ಕುಪಿತರನ್ನಾಗಿ ಮಾಡಿರಬೇಕು. ಹೊರಗೆ ಜನಗಳ ನಡುವೆ ಹೋಗಲು ಮುಖವಿಲ್ಲ. ಒಳಗೆ ರಾಜ್ಯಪಾಲರ ಮೂಲಕ ಏನಾದರೂ ಮಾಡೋಣವೆಂದರೆ ಅದಕ್ಕೂ ಅವಕಾಶ ಕೊಡದಿದ್ದರೆ ಪಾಪ ಕಾಂಗ್ರೆಗಳಿಗೆ, ಮುಖ್ಯತಃ ಪಶ್ಚಿಮಬಂಗಾಳದ ಕಾಂಗ್ರೆಗಳಿಗೆ ಬೇರೇನು ತಾನೇ ಮಾಡಲು ಗೊತ್ತಿದೆ? ಇದೇ ಅವರಿಗೆ ಗೊತ್ತಿರುವ ಏಕೈಕ ಮಾರ್ಗ. ಹೊರಗೆ ಕಾಂಗ್ರೆನ ರಾಜ್ಯ ಮುಖ್ಯಸ್ಥ ಘನೀಖಾನ್‌ಚೌಧುರಿ ಮಾರ್ಕ್ಸ್‌ವಾದಿಗಳ ವಿರುದ್ಧ, ರಾಜ್ಯ ಪೊಲೀಸರ ವಿರುದ್ಧ ಬಂದೂಕು ಎತ್ತಿಕೊಳ್ಳಿ ಎಂದು ಒದರಾಡಿದ್ದರ ವಿಸ್ತರಣೆ ಸದನದೊಳಗಿನ ಈ ಅಭೂತಪೂರ್ವ ನಾಚಿಕೆಗೇಡು ಘಟನೆ.

ಕೇರಳದ ಮತ್ತು ಆಂಧ್ರದ ಜನತೆ ಕಾಂಗ್ರೆ ಏಜೆಂಟರಂತಿರುವ ರಾಜ್ಯಪಾಲರನ್ನು ವಾಪಸು ಪಡೆಯಬೇಕೆಂದು ಒತ್ತಾಯಿಸಿದರೂ ಕಿವಿಗೆ ಹಾಕಿಕೊಳ್ಳದೆ ಸುಸೂತ್ರವಾಗಿ ತನ್ನ ಕಾರ್ಯನಿರ್ವಹಿಸಿಕೊಂಡು ಬರುತ್ತಿದ್ದ ಪ್ರೊ|| ನೂರುಲ್ ಹಸನ್‌ರವರನ್ನು ಮುಖ್ಯಮಂತ್ರಿಗಳನ್ನು ಕೇಳದೆ ವರ್ಗ ಮಾಡಿದರೂ ತೃಪ್ತಿಯಾಗದಷ್ಟು ಕಾಂಗ್ರೆಗಳ ಪರಿಸ್ಥಿತಿ ರಾಜ್ಯದಲ್ಲಿ ಹದಗೆಟ್ಟಿರುವುದನ್ನು ಇದು ತೋರಿಸುತ್ತದೆ.

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಕಾಂಗ್ರೆಗಳ ಈ ದುಷ್ಟ ವರ್ತನೆಯನ್ನು ಬಲವಾಗಿ ಖಂಡಿಸಿ ಪ್ರಜಾಪ್ರಭುತ್ವವನ್ನು ಕಾಲ ಕೆಳಗೆ ಹೊಸಕಿ ಹಾಕುವ ಕಾಂಗ್ರೆಸ್(ಐ) ಪಕ್ಷದ ಪ್ರಯತ್ನಗಳನ್ನು ಖಂಡಿಸಬೇಕೆಂದು ದೇಶದ ಜನತೆಗೆ ಕರೆ ನೀಡಿದೆ.

ರಾಷ್ಟ್ರಪತಿ ಭಾಷಣವಲ್ಲ ಚುನಾವಣಾ ಪ್ರಣಾಳಿಕೆ

ಆರ್ಥಿಕ, ಸಾಮಾಜಿಕ, ರಾಜಕೀಯ ಎಲ್ಲಾ ರಂಗಗಳಲ್ಲೂ ದೇಶ ಗಂಭೀರ ಸನ್ನಿವೇಶ ಎದುರಿಸುತ್ತಿರುವಾಗ ಸಂಸತ್ತಿನ ಬಜೆಟ್ ಅಧಿವೇಶನದ ಆರಂಭದಲ್ಲಿ ರಾಷ್ಟ್ರಪತಿ ಭಾಷಣ ಎಲ್ಲವೂ ಚೆನ್ನಾಗಿದೆ, ದೇಶ ಆತ್ಮವಿಶ್ವಾಸದಿಂದ ಮುನ್ನಡೆಯುತ್ತಿದೆ ಎಂಬ ಭಾವನೆ ಸೃಷ್ಟಿಸಲು ವಿಫಲ ಪ್ರಯತ್ನ ನಡೆಸಿದೆ. ದೂರದರ್ಶನ, ರೇಡಿಯೋ ತನ್ನ ಕೈಯಲ್ಲಿರುವುದರಿಂದ ಜನರನ್ನು ಮೋಸ ಮಾಡಬಹುದು ಎಂಬ ಆಧಾರದ ಮೇಲೆ ಈ ಭಾಷಣವನ್ನು ಬರೆದಿರಬಹುದು.

ಇದುವರೆಗಿನ ಯಾವ ರಾಷ್ಟ್ರಪತಿ ಭಾಷಣವೂ ವಾಸ್ತವತೆಯಿಂದ ಇಷ್ಟೊಂದು ದೂರ ಹೋಗಿರಲಿಲ್ಲ. ಅದನ್ನು ರಾಷ್ಟ್ರಪತಿ ಭಾಷಣ ಎಂದು ಹೇಳುವುದಕ್ಕಿಂತ ಚುನಾವಣಾ ಪ್ರಣಾಳಿಕೆ ಎನ್ನುವುದೇ ವಾಸಿ. ಸರ್ಕಾರವನ್ನು ಸಾಮಾನ್ಯವಾಗಿ ದೂಷಿಸದ ಬೂರ್ಜ್ವಾ ಪತ್ರಿಕೆಗಳು ಕೂಡ ಇದನ್ನು ಟೀಕಿಸಿವೆ.

ಈಗ ರಾಷ್ಟ್ರಪತಿ ಭಾಷಣ ನಮ್ಮನ್ನೊಯ್ದು ಕಲ್ಪನಾ ಲೋಕದಿಂದಿಳಿದು ವಾಸ್ತವತೆಯ ನೆಲದಲ್ಲಿ ನಿಂತು ಪರಿಶೀಲಿಸೋಣ.

ಮೊತ್ತ ಮೊದಲ ಬಾರಿಗೆ ದೇಶದ ಆರ್ಥಿಕತೆಯಲ್ಲಿ 3.6% ವೃದ್ಧಿ ಕಂಡು ಬಂದಿದೆ- ಬರಗಾಲದ ವಿನಾಶವನ್ನು ಮೀರಿ- ಎಂದು ಹೆಮ್ಮೆಯಿಂದ ಸರ್ಕಾರ ಹೇಳಿಕೊಂಡಿದೆ. ಆದರೆ ಈ ವೃದ್ಧಿಗೆ ಬಹುಪಾಲು ಬಿಂದಿರುವುದು ಸಾರ್ವಜನಿಕ ಆಡಳಿತ ಮತ್ತು ರಕ್ಷಣಾ ವಲಯಗಳಿಂದ (9.1%) ಹಾಗೂ ಬ್ಯಾಂಕಿಂಗ್ ಮತ್ತು ವಾಣಿಜ್ಯದಿಂದ (6.2 %) ಈ ಅಂಶವನ್ನು ಮರೆ ಮಾಚಲಾಗಿದೆ.

ತಲಾ ಆಹಾರ ಧಾನ್ಯ ಪೂರೈಕೆ 394.9 ಗ್ರಾಂನಿಂದ 465 .5 ಗ್ರಾಂಗೆ ಏರಿದೆ ಎಂದು ಭಾಷಣ ಹೇಳಿದೆ. ಆದರೆ 1961ರಲ್ಲಿ ಇದು 468 ಗ್ರಾಂ ಆಗಿತ್ತು ಎಂಬುದನ್ನು ಹೇಳಿಲ್ಲ. ಅದೇ ರೀತಿ ದ್ವಿದಳ ಧಾನ್ಯಗಳ ತಲಾ ಪೂರೈಕೆ 195 0ರಲ್ಲಿ 60.7 ಗ್ರಾಂ ಇದ್ದದ್ದು 1987ರಲ್ಲಿ 36.2 ಗ್ರಾಂಗೆ ಇಳಿಯಿತು. ಅದೇ ತಲಾ ಬಟ್ಟೆ ಪೂರೈಕೆ 195 5 -5 6ರಲ್ಲಿ 14.4 ಮೀ. ಇದ್ದದ್ದು 1987ರಲ್ಲಿ 10.65 ಮೀಟರಿಗಿಳಿದಿದೆ. ಭಾರತದಲ್ಲಿ ಭೂಮಿಯ ಉತ್ಪಾದಕತೆ ವಿಶ್ವದಲ್ಲೇ ಅತಿ ಸುಮಾರಾಗಿ ಅತಿ ಕಡಿಮೆ.

ಉದ್ಯೋಗಾವಕಾಶ ಏರಿದೆ ಎಂದೂ ಹೇಳಲಾಗಿದೆ. ಆದರೆ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ದಾಖಲಾದ ನಿರುದ್ಯೋಗಿಗಳ ಸಂಖ್ಯೆ 3.2 ಕೋಟಿ. ಇದರ ಎರಡು ಪಟ್ಟು ನಿರುದ್ಯೋಗಿಗಳು, ಅರೆ ಉದ್ಯೋಗಿಗಳು ಹಳ್ಳಿಗಳಲ್ಲಿ ಇದ್ದಾರೆ.

ಬಡತನದ ವಿರುದ್ಧ ತೀವ್ರ ಹಲ್ಲೆ ಮಾಡಲಾಗಿದೆ ಎಂಬ ಮಾತುಕೂಡಾ ವಾಸ್ತವವಲ್ಲ. ಬೆಲೆಯೇರಿಕೆ ಎರಡಂಕಕ್ಕೆ ಬಂದಿದೆ. ವಿದೇಶಿ ಸಾಲ ಹೊರೆಯ ಸ್ಥಿತಿಯಂತೂ ಹದಗೆಡುತ್ತಾ ಸಾಗಿದೆ. 60 ಶತಕೋಟಿ ಡಾಲರ್ ಎಂದು ಅಂದಾಜು ಮಾಡಲಾಗಿದೆ. ಒಟ್ಟು ರಫ್ತಿನ 35 % ಸಾಲದ ಸೇವೆಯ ಬಾಬ್ತು ಕಳಕೊಳ್ಳುತ್ತಿದ್ದೇವೆ.

ನಿರುದ್ಯೋಗ ನಿರ್ಮೂಲನೆ, ಬಡತನದಿಂದ ಉದ್ಧಾರ, ಬಡವರ ಬಗ್ಗೆ ಸಹಾನುಭೂತಿ ತೋರಿರುವ ರಾಷ್ಟ್ರಪತಿ ಭಾಷಣದಲ್ಲಿ ಭೂಸುಧಾರಣೆಯ ಬಗೆಯಾಗಲಿ, ಬಹುಪಾಲು ಹರಿಜನ-ಗಿರಿಜನರಿರುವ ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿಯ ಬಗ್ಗೆ ಕೇಂದ್ರೀಯ ಶಾಸನದ ಬಗೆಯಾಗಲಿ ಪ್ರಸ್ತಾಪವೇ ಇಲ್ಲ!

ಶಿಕ್ಷಣ ಮತ್ತು ಮಹಿಳಾ ಅಭಿವೃದ್ಧಿಯ ಬಗ್ಗೆ ಕೂಡ ಕೇವಲ ಮಾತುಗಳಿವೆಯಷ್ಟೆ. ಪಂಚಾಯತಿ ರಾಜ್ಯ ಬಲಗೊಳಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸುವ ಬಗ್ಗೆ ರಾಷ್ಟ್ರಪತಿಗಳ ಭಾಷಣದಲ್ಲಿ ಬಹಳ ಮಾತಿದೆ. ಆದರೆ ಪಂಚಾಯಿತಿಗಳು ಚೆನ್ನಾಗಿ ನಡೆಯುತ್ತಿರುವುದು ಎಡ ನೇತೃತ್ವದ ರಾಜ್ಯಗಳಲ್ಲಷ್ಟೆ. ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ವಿಸ್ತರಣೆ ಮಾತಂತೂ ಇರಲಿ, ವರ್ಷಾನುಗಟ್ಟಲೆ ಪಂಚಾಯತುಗಳಿಗೆ ಚುನಾವಣೆಗಳೇ ನಡೆದಿಲ್ಲ.

ರಾಜ್ಯಗಳ ಸ್ವಾಯತ್ತತೆಯ ಮೇಲೆ ಇನ್ನಷ್ಟು ಮಿತಿಯೇರಲಾಗುತ್ತಿದೆ.

8ನೇ ಪುಟಕ್ಕೆ

ಒಳಪುಟಗಳಲ್ಲಿ

ಚುನಾವಣಾ ವರ್ಷದ ಬಜೆಟ್

ನಿರೀಕ್ಷಿಸಿದಂತೆ ಫೆಬ್ರವರಿ 28ರಂದು ಹಣಕಾಸು ಮಂತ್ರಿ ಚವ್ಹಾಣರು 1989-90ರ ಚುನಾವಣಾ ವರ್ಷದ ಬಜೆಟ್ ಮಂಡಿಸಿದರು. ಕೆಲವು ವಿಭಾಗಗಳಿಗೆ ಕೆಲವು ರಿಯಾಯ್ತಿಗಳನ್ನು ನೀಡಿದಂತೆ ಮಾಡಿ ವಾಸ್ತವವಾಗಿ ದೊಡ್ಡ ಗುತ್ತೇದಾರಿಗಳಿಗೆ ದೊಡ್ಡ ರಿಯಾಯ್ತಿಗಳನ್ನು ನೀಡಿರುವ ಬಜೆಟ್ ಇದು.

"ಜವಾಹರಲಾಲ್ ನೆಹರೂ ಉದ್ಯೋಗ ಯೋಜನೆ" ಹಣಕಾಸು ಮಂತ್ರಿಗಳು ಗ್ರಾಮೀಣ ಜನತೆಗೆ ನೀಡಿದ ದೊಡ್ಡ ಕೊಡುಗೆ ಎಂದು ಕಾಂಗ್ರೆ ಎಂ.ಪಿ.ಗಳು ಹಾಡಿ ಹೊಗಳಿದ್ದಾರೆ. ಪ್ರತಿಯೊಂದು ಗ್ರಾಮೀಣ ಕುಟುಂಬದ ಒಬ್ಬನಿಗೆ ಉದ್ಯೋಗ ಕೊಡುವ ಭರವಸೆ ನೀಡುವ ಯೋಜನೆಯಿದು. ಆದರೆ ಇಂತಹ ಭರವಸೆ ಇದುವರೆಗೆ ಯಾವುದೂ ಈಡೇರಿಲ್ಲ. ಇದು ಜನಗಳ ಅನುಭವ. ನಗರದ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ದಾಖಲಾದ 3 ಕೋಟಿ ನಿರುದ್ಯೋಗಿಗಳನ್ನು ಬಜೆಟ್ ಗಮನಕ್ಕೇ ತಂಗೊಂಡಿಲ್ಲ.


ಆಹಾರ, ಬಟ್ಟೆಯ ಮೇಲೆ ಸಹಾಯಧನವೂ ಸೇರಿದಂತೆ ಗ್ರಾಮೀಣ ಪ್ರದೇಶಗಳಿಗಾಗಿ ಮೀಸಲಿಟ್ಟ 9374 ಕೋಟಿ ರೂ. ಕೂಡಾ ಚುನಾವಣಾ ವರ್ಷದ ಕೊಡುಗೆ. ಈಗಾಗಲೇ ಬಡತನ-ವಿರೋಧಿ ಕಾರ್ಯಕ್ರಮಗಳಿಗಾಗಿ ಸಾವಿರಾರು ಕೋಟಿ ರೂ. ಖರ್ಚಾಗಿದೆ. ಆದರೆ ನಿರುದ್ಯೋಗ, ಬಡತನದ ಸ್ಥಿತಿಯಲ್ಲಿ ಸುಧಾರಣೆಯೇನೂ ಕಂಡುಬಂದಿಲ್ಲ.

ರಾಜೀವ್ ಸರ್ಕಾರ ಶ್ರೀಮಂತರ ಪರವಾದ ಸರ್ಕಾರವೆಂಬ ಅಂಶ ಹೆಚ್ಚೆಚ್ಚು ಮಂದಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಅರಿವಾಗುತ್ತಾ ಬಂದಿತ್ತು. ಈ ಇಮೇಜನ್ನು ಅಳಿಸಿಹಾಕುವುದು ಚುನಾವಣಾ ವರ್ಷದಲ್ಲಿ ಅನಿವಾರ್ಯ. ಒಂದೆಡೆ ಈ ಪ್ರಯತ್ನ ನಡೆಯುತ್ತಿದ್ದಂತೆ ಅತ್ತ ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್.ನ ಕೋಪಕ್ಕೆ ಪಾತ್ರವಾಗದಂತೆ ನೋಡಿಕೊಳ್ಳಬೇಕು. ಈ ಸಾಮ್ರಾಜ್ಯಶಾಹೀ ಸಂಸ್ಥೆಗಳು ಹೇರಿದ ಆಮದು ಉದಾರೀಕರಣ ನೀತಿಯಲ್ಲಿ ಯಾವ ಬದಲಾವಣೆಯನ್ನೂ ಈ ಬಜೆಟ್ ಸೂಚಿಸಿಲ್ಲ. ಕೆಲವು ಉಚ್ಚ ತಂತ್ರಜ್ಞಾನದ ಉತ್ಪಾದನೆಗಳ ಮೇಲೆ ಅಬಕಾರಿ ಸುಂಕ ಕಡಿತಗೊಳಿಸಲಾಗಿದೆ. ಇದರಿಂದ 120 ಕೋಟಿ ರೂ. ನಷ್ಟವಾಗಿದೆ. ಬಜೆಟ್‌ನ ಮಾರ್ಗಸ್ವರೂಪ ಇಲ್ಲಿ ಕಾಣುತ್ತದೆ.

ಬಡವರ ಉಪಯೋಗದ ಸರಕುಗಳ ಮೇಲೆ ಕರ ಹೇರಿಲ್ಲ ಎಂದು ಸರ್ಕಾರ ಹೇಳಿಕೊಂಡರೂ ಬಜೆಟ್ಟಿನ ಇತರ ಕ್ರಮಗಳು ಬೆಲೆಯೇರಿಕೆಗೆ ಕುಮ್ಮಕ್ಕು ಸುರಿದು ಅಂತಿಮವಾಗಿ ಬಡವರನ್ನೇ ಇನ್ನಷ್ಟು ಆಳಕ್ಕೆ ತಳ್ಳಲಿದೆ. ಸಿಮೆಂಟ್, ಅಲ್ಯೂಮಿನಿಯಂನ ಮೇಲಿನ ಹತೋಟಿಯ ರದ್ದು, ಉಕ್ಕಿನ ಬೆಲೆಯೇರಿಕೆ ಮುಂತಾದ ಕ್ರಮಗಳಿಂದ ಇನ್ನಷ್ಟು ಉದ್ದಿಮೆಗಳು ರೋಗಗ್ರಸ್ತವಾಗಬಹುದೆಂಬ ಭಯವನ್ನು ಪರಿಣತರು ವ್ಯಕ್ತಪಡಿಸಿದ್ದಾರೆ.

ಬಜೆಟ್ ಖೋತಾವನ್ನು ಮಿತಿಗೊಳಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ ಎಂದು ಹೇಳಲಾಗಿದೆ. ಆದರೆ ಇದು ವಾಸ್ತವತೆಗಿಂತ ಹೆಚ್ಚಾಗಿ ಕಾಗದದ ಮೇಲಿನ ಕಸರತ್ತು. ಕಳೆದ ಬಜೆಟ್ಟಿನಲ್ಲಿ ಸೂಚಿಸಿದ 7484

8ನೇ ಪುಟಕ್ಕೆ



ಜನತೆಯ ಕಲಾವಿದನ ಕೊಲೆಗೆ ದೇಶದ ಎಲ್ಲೆಡೆ ಪ್ರತಿಭಟನೆ

ಆಂಧ್ರಪ್ರದೇಶ

ಕಾ॥ ಸಫ್ದರ್ ಹಾಶ್ಮಿಯವರ ಕೊಲೆಗೆ ಆಂಧ್ರಪ್ರದೇಶದ 22 ಕೇಂದ್ರಗಳಲ್ಲಿ ಜನತೆ ತೀವ್ರ ಆಕ್ರೋಶ ವ್ಯಕ್ತಪಡಿಸಿತು. ಮೆರವಣಿಗೆ ಸಭೆಗಳು ನಡೆದವು. ಆಂಧ್ರ ಪ್ರಜಾನಾಟ್ಯ ಮಂಡಳಿಯ ಕರೆಯ ಮೇರೆಗೆ ಇವು ನಡೆದವು.

ಹೈದರಾಬಾದಿನ ಪ್ರತಿಭಟನೆಯಲ್ಲಿ ಕಾ॥ ಮಾಲಾಶ್ರೀ ಹಾಶ್ಮಿಯವರೂ ಭಾಗವಹಿಸಿದರು. ಪ್ರಜಾನಾಟ್ಯ ಮಂಡಳಿಯ ಮುತುವರ್ಜಿಯಿಂದ 9 ಸಾಂಸ್ಕೃತಿಕ ಸಂಘಟನೆಗಳು ಭಾಗವಹಿಸಿದ್ದವು. ಮಾಲಾಶ್ರೀಯವರು ಮಾತನಾಡಿ ಹಾಷ್ಮಿಯವರ ಬರ್ಬರ ಕೊಲೆಯ ಹಿಂದೆ ಕಾಂಗ್ರೆಸ್(ಐ)ನ ಕೈವಾಡವನ್ನು ಪುರಾವೆಗಳ ಮೂಲಕ ಅರಿವು ಮಾಡಿಕೊಡುತ್ತಾ "ಕಾಮ್ರೇಡ್ ಹಾಷ್ಮಿ ಬೆನ್ನೆಲುಬಾಗಿದ್ದ ಜನನಾಟ್ಯಮಂಚ್‌ನ ಸ್ಫೂರ್ತಿಯನ್ನು ಕಾಂಗ್ರೆಸ್(ಐ) ಗೂಂಡಾಗಳು ಎಂದೂ ಕೊಲ್ಲಲಾರರು ಎಂಬುದನ್ನು ಅವರು ತಿಳಿಯಬೇಕು" ಎಂದರು. ಈ ಸಮಾರಂಭದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು ಭಾಗವಹಿಸಿದ್ದರು.

ನೆಲ್ಲೂರು ಮತ್ತು ವಿಶಾಖಪಟ್ಟಣಗಳಲ್ಲಿ ವಿವಿಧ ಸಾಂಸ್ಕೃತಿಕ ಸಂಘಟನೆಗಳು ಸೇರಿಕೊಂಡು 5 00ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ಮೆರವಣಿಗೆ ನಡೆಸಿದರು. ಅದೇ ರೀತಿ ವಿಜಯವಾಡಾ, ವಾರಂಗಲ್ ಮುಂತಾದೆಡೆಯೂ ಪ್ರತಿಭಟನೆ ವ್ಯಕ್ತಪಟ್ಟಿತು.

ಆಂಧ್ರ ಪ್ರಜಾನಾಟ್ಯ ಮಂಡಳಿಯ ಸೆಕ್ರೆಟಾರಿಯೆಟ್ ಜನವರಿ 25 ರಂದು ಸಭೆ ಸೇರಿ ಕಾ॥ ಹಾಶ್ಮಿಯವರ ಜನ್ಮದಿನವಾದ ಏಪ್ರಿಲ್ 12ನ್ನು ಬೀದಿನಾಟ ದಿನವಾಗಿ ಆಚರಿಸಲು ನಿರ್ಧರಿಸಿತು. ಈ ಹಿಂದೆಯೇ ಚಾರ್ಲ್‌ಚಾಪ್ಲಿನ್ ಜನ್ಮದಿನ (ಏಪ್ರಿಲ್ 16)ವನ್ನು ಆಚರಿಸಲು ನಿರ್ಧರಿಸಲಾಗಿತ್ತು. ಆದ್ದರಿಂದ ಏಪ್ರಿಲ್ 12ರಿಂದ 16ರವರೆಗೆ ರಾಜ್ಯಾದ್ಯಂತ 600 ಸ್ಥಳಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ನಿರ್ಧರಿಸಿತು. ಮೊದಲ ದಿನದ ಹಣ ಸಂಗ್ರಹವನ್ನು ಸಫ್ದರ್ ಸ್ಮಾರಕ ನಿಧಿಗೆ ಕಳುಹಿಸಲಾಗುವುದು.

ಪಶ್ಚಿಮ ಬಂಗಾಳ

ಕಾ॥ ಹಾಶ್ಮಿ ಕೊಲೆ ಸುದ್ದಿ ಕೇಳಿದ ತಕ್ಷಣದಿಂದ ಇದುವರೆಗೂ ರಾಜ್ಯಾದ್ಯಂತ ರ್‍ಯಾಲಿಗಳು, ಸಭೆಗಳು, ಮೆರವಣಿಗೆಗಳು, ಬೀದಿನಾಟಕಗಳ ಮೂಲಕ ಜನ ತಮ್ಮ ಬಲವಾದ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ರಾಜ್ಯದ ಹದಿನೇಳು ಜಿಲ್ಲೆಗಳಲ್ಲಿ ಶ್ರದ್ಧಾಂಜಲಿ ಸಭೆಗಳು ನಡೆದಿವೆ. ಸಾಮೂಹಿಕ ಸಂಘಟನೆಗಳ ಸಮಾವೇಶಗಳ, ಸಮ್ಮೇಳನಗಳ ಸಭಾಂಗಣಗಳಿಗೆ ಹಾಶ್ಮಿ ಹೆಸರಿಟ್ಟು ಗೌರವಿಸಲಾಗಿದೆ. ಪಕ್ಷದ ರಾಜ್ಯ ಸಮಿತಿ ಪರವಾಗಿ ಕಾ॥ ಸರೋಜ್ ಮುಖರ್ಜಿ 5 0 ಸಾವಿರ ರೂ. ಸಫ್ದರ್ ಸ್ಮಾರಕ ನಿಧಿಗೆ ಅರ್ಪಿಸಿದ್ದಾರೆ.

ವಿವಿಧ ಸಾಂಸ್ಕೃತಿಕ ಗುಂಪುಗಳು ರಾಜ್ಯಾದ್ಯಂತ ಜನನಾಟ್ಯಮಂಚ್‌ನ ಬೀದಿ ನಾಟಕಗಳನ್ನು ಪ್ರದರ್ಶಿಸುತ್ತಿವೆ. ಸಿದ್ಧಾಂತ-ಭೇದವಿಲ್ಲದೆ ಎಲ್ಲಾ ಕಲಾವಿದರೂ ಹಾಷ್ಮಿಯವರ ಕೊಲೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಇವರಲ್ಲಿ ಪ್ರಸಿದ್ಧ ಚಲನ ಚಿತ್ರ ನಿರ್ದೇಶಕರಾದ ಸತ್ಯಜಿತ್ ರಾಯ್, ಮೃಣಾಲ್‌ಸೆನ್, ಗೌತಮ್ ಘೋಷ್, ನಾಟಕಕಾರರಾದ ಉತ್ಪಲ್‌ದತ್, ನೀಲಕಂಠ ಸೆನ್‌ಗುಪ್ತಾ, ಅಶೋಕ ಮುಖ್ಯೋಪಾಧ್ಯಾಯ ಮುಂತಾದವರೂ ಸೇರಿದ್ದಾರೆ.

ಮಾಲಾಯಶ್ರೀ ಹಾಗೂ ಜನನಾಟ್ಯ ಮಂಚ್‌ನ ತಂಡ ರಾಜ್ಯದ ಹಲವು ಭಾಗಗಳಲ್ಲಿ ಸಂಚರಿಸಿ 'ದಿ ಮೆಶೀನ್' ಮತ್ತು 'ಹಲ್ಲಾ ಬೋಲ್' ನಾಟಕಗಳನ್ನು ಆಡಿದ್ದಾರೆ. ಕಲಕತ್ತೆಯ ಯುವಭಾರತಿ ಕ್ರೀಡಾಂಗಣದಲ್ಲಿ 30ಸಾವಿರ ಮಂದಿ ಈ ನಾಟಕಗಳನ್ನು ವೀಕ್ಷಿಸಿದರು. ಮಲಶ್ರೀಯವರ ಕರೆಗೆ ಓಗೊಟ್ಟು ಜನ ಸ್ವಯಂ ಸ್ಫೂರ್ತಿಯಿಂದ ನಿಧಿಗೆ ಕೊಡುಗೆ ನೀಡಿದರು. ಮಾಲಾಶ್ರೀಯವರು ಕಲ್ಕತ್ತಾ ವಿಶ್ವವಿದ್ಯಾಲಯ, ಸಫ್ದರ್‌ಗೆ ನೀಡಿದ ಮರಣೋತ್ತರ ಗೌರವ ಡಾಕ್ಟರೇಟನ್ನು ಸ್ವೀಕರಿಸಿದರು.

ಪಂಜಾಬ್

ಜನವರಿ 28ರಂದು ಜಾಲಂಧರ್‌ನ ಗುರುನಾನಕ್ ಜಿಲ್ಲಾ ಗ್ರಂಥಾಲಯದಲ್ಲಿ ಲೇಖಕರು, ಕಲಾವಿದರು, ವಕೀಲರು ಇತ್ಯಾದಿ ಸಭೆ ಸೇರಿ ಕಾ॥ ಹಾಶ್ಮಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ದೆಹಲಿಯ ಹೊರವಲಯದಲ್ಲಿ ಹಾಷ್ಮಿಯವರ ಕೊಲೆ ಕೇವಲ ಆಕಸ್ಮಿಕವಲ್ಲ, ಹಿಂಸೆಯ ವಾತಾವರಣ ಸೃಷ್ಟಿಸುವ ಯೋಜಿತ ಪ್ರಯತ್ನ ಎಂದು ಭಾಷಣಕಾರರು ಎಚ್ಚರಿಸಿದರು. ಸರ್ವಾಧಿಕಾರ ಮತ್ತು ರಾಜಕೀಯ ಗೂಂಡಾಗಿರಿಯ ವಿರುದ್ಧ ಸಾಮೂಹಿಕ ಪ್ರಯತ್ನವೇ ಹಾಷ್ಮಿಯವರಿಗೆ ತಮ್ಮ ನಿಜವಾದ ಶ್ರದ್ಧಾಂಜಲಿಯೆಂದರು.

ತಮಿಳುನಾಡು

ತಮಿಳುನಾಡಿನ ಎಲ್ಲಾ ಜಿಲ್ಲೆಗಳಲ್ಲಿ ತಮಿಳುನಾಡು ಪ್ರಗತಿಪರ ಲೇಖಕರ ಸಂಘದ ಕರೆಯ ಮೇರೆಗೆ ಪ್ರತಿಭಟನಾ ಸಭೆಗಳು ನಡೆದವು. ಮಧುರೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಲೇಖಕರ, ರಾಜಕೀಯ ಪಕ್ಷಗಳ, ಕಾರ್ಮಿಕ ಸಂಘಗಳ ಹಾಗೂ ಇತರ ಸಾಮೂಹಿಕ ಸಂಘಟನೆಗಳ ಮುಖಂಡರು ಕೊಲೆಯನ್ನು ಖಂಡಿಸಿ ಕಾಂಗ್ರೆಸ್(ಐ) ಈ ಫ್ಯಾಸಿಸ್ಟ್ ವಿಧಾನಗಳಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡಲು ಬರುವುದಿಲ್ಲವೆಂದು ಎಚ್ಚರಿಸಿದರು. ಇದೇ ರೀತಿ ಮದ್ರಾಸ್, ತಿರುಚನಾಪಳ್ಳಿ, ತಂಜಾವೂರ್ ಮುಂತಾಡೆಗಳಲ್ಲಿ ಸಾರ್ವಜನಿಕ ಪ್ರತಿಭಟನೆ ವ್ಯಕ್ತಗೊಂಡಿತು.

ಮಧ್ಯಪ್ರದೇಶ

ರಾಜ್ಯಾದ್ಯಂತ ಅಭೂತಪೂರ್ವ ಪ್ರತಿಭಟನಾ ಕಾರ್ಯಾಚರಣೆಗಳು ಕಂಡು ಬಂದವು. ಭೋಪಾಲ್‌ನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ 'ಭಾರತ ಭವನ'ದ ನೌಕರರೂ ತಮ್ಮ ಸರ್ಕಾರ ಪರ ಅಧಿಕಾರಗಳನ್ನೂ ಲೆಕ್ಕಿಸದೆ ಭಾಗವಹಿಸಿದರು. ಗ್ವಾಲೀರ್‌ನಲ್ಲಿ ಪಂಜಿನ ಮೆರವಣಿಗೆ ನಡೆಯಿತು. 'ಶಿಲ್ಪಕಾರ್ ಮಂಚ್' ತಂಡ ಹಾಷ್ಮಿಯವರ 'ಸಮರಥ್‌ಕೋ ನಾಹಿ ದೋಷ್‌ಗೊಸಾಯಿ' ನಾಟಕ ಪ್ರದರ್ಶಿಸಿದರು. ದುರ್ಗ್‌ನಲ್ಲಿ ಇಪ್ಟಾತಂಡ ಹಾಷ್ಮಿಯವರ 'ಔರತ್' ನಾಟಕ ಪ್ರದರ್ಶಿಸಿದರು.

ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಸಾಧನೆಯೆಷ್ಟು?

ಭಾರತದ ಸಂವಿಧಾನ 1960ರೊಳಗೆ 6ರಿಂದ 11ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪುಕ್ಕಟೆ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ನಿರ್ದೇಶನ ನೀಡಿತ್ತು. ವಿವಿಧ ಸರ್ಕಾರಗಳು ಅದನ್ನು 1990ಕ್ಕೆ ವಿಸ್ತರಿಸಿದವು. ಹೊಸ ಶಿಕ್ಷಣ ನೀತಿ ತಂದ ರಾಜೀವ್ ಸರ್ಕಾರ ಅದನ್ನು 1995 ಕ್ಕೆ ಮುಂದೂಡಿತು. ಆದರೆ ಆಗಲಾದರೂ ಈ ನಿರ್ದೇಶನವನ್ನು ಕೇಂದ್ರ ಸರ್ಕಾರ ಪಾಲಿಸಬಲ್ಲುದೇ?

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್.ಸಿ.ಇ.ಆರ್.ಟಿ.) ಇತ್ತೀಚೆಗೆ ನಡೆಸಿದ ಶಿಕ್ಷಣ ಸರ್ವೆಯ ಪ್ರಕಾರ 6ರಿಂದ 11ವಯೋ ಗುಂಪಿನ 27% ಮಕ್ಕಳು ಶಾಲೆಯನ್ನೇ ಕಂಡಿಲ್ಲ. ಒಟ್ಟು ಯೋಜನೆಯ 1%ವಷ್ಟೇ ಮೀಸಲಿಟ್ಟಿರುವಾಗ 1995 ರೊಳಗೆ ಈ 27% ಮಂದಿಗೆ ಶಿಕ್ಷಣ ದೊರೆಯಬಲ್ಲುದೇ?

ಈ ಸರ್ವೆಯ ಇನ್ನು ಕೆಲವು ಅಂಕಿ-ಅಂಶಗಳು: ಒಂದನೇ ತರಗತಿಗೆ ಸೇರುವ ಪ್ರತಿ ನೂರು ಮಕ್ಕಳಲ್ಲಿ 5 ನೇ ತರಗತಿ ಬರುವಾಗ 49.2 ಮಾತ್ರ ಉಳಿದಿರುತ್ತಾರೆ. ಅಂದರೆ 11 ವರ್ಷ ವಯಸ್ಸಿನೊಳಗೆ ಅರ್ಧದಷ್ಟು ಮಕ್ಕಳು ಶಾಲಾ ವ್ಯವಸ್ಥೆಯ ಹೊರಗಿರುತ್ತಾರೆ.

- *6-14 ವಯೋ ಗುಂಪಿನಲ್ಲಿ 62% ಮಕ್ಕಳು ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನಿಂದ ಹೊರಗಿದ್ದಾರೆ.*
- *ಪ್ರಾಥಮಿಕ ಶಾಲೆಗಳಲ್ಲಿ 13.5 % ಕಟ್ಟಡಗಳೇ ಇಲ್ಲ. 7.69% ಕೋಣೆಗಳಿಲ್ಲ 38% ಒಂದೇ ಕೋಣೆಯ ಶಾಲೆಗಳು. ಅಂದರೆ 5 9% ಶಾಲೆಗಳಲ್ಲಿ 'ಆಪರೇಷನ್ ಬ್ಲಾಕ್ ಬೋರ್ಡ್' ಸಾರುವ ಸೌಲಭ್ಯಗಳೂ ಇಲ್ಲ.*

2628 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. 28% ಏಕ-ಶಿಕ್ಷಕ ಶಾಲೆಗಳು.

ಭೋಪಾಲ್ ತೀರ್ಪಿನ ವಿರುದ್ಧ ವಕೀಲರ ಪ್ರತಿಭಟನೆ

ಇತ್ತೀಚೆಗೆ ದೇಶದ ಅತ್ಯುಚ್ಚ ನ್ಯಾಯಾಲಯ ಭೋಪಾಲ್ ಅನಿಲ ದುರಂತದ ಬಗ್ಗೆ ನೀಡಿದ ತೀರ್ಪು ಜನಸಾಮಾನ್ಯರಿಗೆ ಮಾತ್ರವಲ್ಲ, ವಕೀಲ ವೃಂದಕ್ಕೂ ದೊಡ್ಡದೊಂದು ಆಘಾತ ಎಂದು ಅಖಿಲ ಭಾರತ ವಕೀಲರ ಸಂಘ ಒಂದು ಹೇಳಿಕೆಯಲ್ಲಿ ತಿಳಿಸಿದೆ.

ಸುಪ್ರೀಂ ಕೋರ್ಟಿನ ತೀರ್ಪಿನ ವೇಷದಲ್ಲಿ ಪರಿಹಾರದ ಮೊತ್ತವನ್ನು ಕೇಂದ್ರ ಸರ್ಕಾರವೇ ಮುಂದಿಟ್ಟಿದ್ದ ದಾವೆಗಳು 15 %ಕ್ಕಿಳಿಸಿದೆ ಮಾತ್ರವಲ್ಲ ಈ ಅರ್ಜಿ ಸುಪ್ರೀಂ ಕೋರ್ಟಿನ ಅಧಿಕಾರ ವ್ಯಾಪ್ತಿಯಲ್ಲಿಲ್ಲದ ಅರ್ಜಿಯೆಂದು ಸಂಘ ಅಭಿಪ್ರಾಯಪಟ್ಟಿದೆ. ಭಾರತ ಸರ್ಕಾರ 1985 ರಲ್ಲಿ ಒಂದು ಶಾಸನ ತಂದು ಈ ದುರಂತಕ್ಕೆ ಬಲಿಯಾದವರೆಲ್ಲರನ್ನು ಪ್ರತಿನಿಧಿಸುವ ಅಧಿಕಾರ ಪಡೆಯಿತು.

ಆದರೆ ಈ ರೀತಿ ನ್ಯಾಯಾಲಯದ ಕಲಾಪಗಳಿಗೆ ನೇರವಾಗಿ ಸಂಬಂಧಪಡದವರು ಇನ್ನು ಮುಂದೆ ಈ ಬಗ್ಗೆ ಯಾವುದೇ ದಾವೆಗಳ ಇತ್ಯರ್ಥಕ್ಕಾಗಿ ಕೇಳುವ ಹಕ್ಕನ್ನು ಒಂದು ತೀರ್ಪಿನ ಮೂಲಕ ಇಲ್ಲವಾಗಿಸಲು ನ್ಯಾಯಾಲಯಕ್ಕೆ ಯಾವ ಕಾನೂನು ಕೂಡಾ ಅಧಿಕಾರ ನೀಡಿಲ್ಲ ಎಂದು ತಿಳಿಸಿರುವ ಹೇಳಿಕೆ ತನ್ನ ಈ ತೀರ್ಪಿನ ಮೂಲಕ ಸುಪ್ರೀಂಕೋರ್ಟ್ ಶಾಸನ ರೂಪಿಸುವ ತನ್ನದಲ್ಲದ ಹಕ್ಕು ಚಲಾಯಿಸಿದೆ ಎಂದು ಹೇಳಿದೆ. ಈ ಹಕ್ಕು ಇರುವುದು ಶಾಸಕಾಂಗಕ್ಕೆ.

ಸರ್ಕಾರ ಬಹುರಾಷ್ಟ್ರೀಯ ಕಂಪೆನಿಯೊಂದರ ಜತೆಗೆ ನಡೆಸಿದಂತೆ ಕಾಣುವ ಕರಿ-ಮರೆಯ ವ್ಯವಹಾರದಲ್ಲಿ ನ್ಯಾಯಾಲಯ ಸಿಲುಕಿಕೊಂಡಿರುವುದಕ್ಕೆ ಸಂಘ ಬೇಸರ ವ್ಯಕ್ತಪಡಿಸಿದೆ.

ಸುಪ್ರೀಂಕೋರ್ಟಿನ ಕಾನೂನು ಬಾಹಿರ ಅರ್ಜಿಯ ವೇಷ ತೊಟ್ಟ ಈ ಅಭೂತಪೂರ್ವ ಶರಣಾಗತಿಯಿಂದ ನ್ಯಾಯವನ್ನು ರಕ್ಷಿಸಲು ತಮ್ಮ ದನಿಯೆತ್ತಬೇಕೆಂದು ಅಖಿಲ ಭಾರತ ವಕೀಲರ ಸಂಘ ವಕೀಲ ಬಾಂಧವರಿಗೆ ಮತ್ತು ಜನತೆಯ ಪ್ರತಿನಿಧಿಗಳಿಗೆ ಕರೆ ನೀಡಿದೆ.

ಮಾನಭಂಗ ಮೊಕದ್ದಮೆಯ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪನ್ನು ಬದಲಿಸಲು ಒತ್ತಾಯ

ಜನವರಿ 31, 1989ರಂದು ಸುಪ್ರೀಂ ಕೋರ್ಟಿನ ಒಂದು ಪೀಠ ಹೈಕೋರ್ಟು ಮಾನಭಂಗದ ಅಪಾದನೆಗೊಳಗಾದ ಇಬ್ಬರು ಪೊಲೀಸರಿಗೆ ವಿಧಿಸಿದ ಹತ್ತು ವರ್ಷಗಳ ಶಿಕ್ಷೆಯನ್ನು 5 ವರ್ಷಕ್ಕಿಳಿಸುವ ತೀರ್ಪು ನೀಡಿತು. ಇದಕ್ಕೆ ಅದು ಕೊಟ್ಟ ಕಾರಣ ಮಾನಭಂಗಕ್ಕೊಳಗಾದ ಮಹಿಳೆಯ "ಸಡಿಲ ವರ್ತನೆ, ಪ್ರಶ್ನಾರ್ಹ ಸ್ವಭಾವ". ಈ ತೀರ್ಪಿನ ವಿರುದ್ಧ ಅಖಿಲ ಭಾರತ ಪ್ರಜಾಪ್ರಭುತ್ವವಾದೀ ಮಹಿಳಾ ಸಂಘಟನೆಯ ಒಂದು ನಿಯೋಗ ಫೆಬ್ರವರಿ 14ರಂದು ದೇಶದ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ ಈ ತೀರ್ಪಿನ ಮರು ವಿಮರ್ಶೆಯಾಗಬೇಕೆಂದು ಒತ್ತಾಯಿಸುವ ಮನವಿಯನ್ನು ಅರ್ಪಿಸಿತು. ...ಳೆಯಿಂದ ನಿಯೋಗದ ವಿಚಾರಗಳನ್ನು ಕೇಳಿದ ಮುಖ್ಯ ನ್ಯಾಯಾಧೀಶರು ತಕ್ಷಣ ಈ ಬಗ್ಗೆ ತಾನೇನೂ ಟಿಪ್ಪಣಿ ಮಾಡುವುದಿಲ್ಲ ಎಂದರು.

ದೇಶದ ಅತ್ಯುಚ್ಚ ನ್ಯಾಯಾಲಯದ ಈ ತೀರ್ಪು ನ್ಯಾಯಕ್ಕಾಗಿ ಹೋರಾಟಗಳ ಮೇಲೆ ಗಂಭೀರ ಪ್ರಭಾವ ಬೀರಲಿದೆ ಎಂದು ಈ ಮನವಿ ತಿಳಿಸಿದೆ. ಕಾನೂನಿನ ಪ್ರಕಾರ ಮಾನಭಂಗ ಮೊಕದ್ದಮೆಯಲ್ಲಿ ಹಲ್ಲೆಗೊಳಗಾದವರ ಸ್ವಭಾವದ ಪ್ರಶ್ನೆ ಬರುವುದಿಲ್ಲ. ಆಕೆಯ ಒಪ್ಪಿಗೆ ಇತ್ತೇ ಇಲ್ಲವೇ ಎಂಬ ಪ್ರಶ್ನೆಯಷ್ಟೇ ಬರುತ್ತದೆ. ಪೊಲೀಸ್ ಕಸ್ಟಡಿಯಲ್ಲಿ ಇಂತಹ ಅಪರಾಧದ ಗಹನತೆಯನ್ನು ಮನಗಂಡ ಮೇಲೆ ಈ ಕಾನೂನನ್ನು ಮತ್ತಷ್ಟು ಬಿಗಿಗೊ... ತಾನು ನಿರಪರಾಧಿ ಎಂದು ಸಾಧಿಸುವ ಹೊಣೆ ಅಪಾದಿತನ ಮೇಲೆಯೇ ಇದೆ ಎಂದು ಹೇಳಲಾಗಿದೆ. ಒಂದು ದಶಕದ ಹಿಂದೆಯೇ ಈ ಬಗ್ಗೆ ಚರ್ಚೆ ನಡೆದು ತೀರ್ಮಾನವಾಗಿದ್ದರೂ ಸುಪ್ರೀಂ ಕೋರ್ಟು ಈಗ ಈ ರೀತಿಯ ತೀರ್ಪು ನೀಡಿರುವುದು ಅತ್ಯಂತ ಹಿಂದುಳಿದ, ಪಾಳೇಯಗಾರೀ ಮನೋಭಾವದ ದ್ಯೋತಕ ಎಂದು ಮನವಿ ಆತಂಕ ವ್ಯಕ್ತಪಡಿಸಿದೆ.

ಅತ್ಯಂತ ತೀವ್ರವಾಗಿ ಲೈಂಗಿಕ ಅಪರಾಧಗಳಿಗೆ ಬಲಿಯಾಗುವ ಅತ್ಯಂತ ದಲಿತ ಮಹಿಳೆಯರ ನಡುವೆ ಕೆಲಸ ಮಾಡುವ ಎ.ಐ.ಡಿ.ಡಬ್ಲ್ಯೂ.ಎ.ಗೆ ಇದು ಕೇವಲ ಕಾನೂನು ಪಾಯಿಂಟುಗಳ ಪ್ರಶ್ನೆಯಲ್ಲ. ದೇಶಾದ್ಯಂತ ಇಂತಹ ಅತ್ಯಾಚಾರಗಳು, ವಿಶೇಷವಾಗಿ ಕಾನೂನು ರಕ್ಷಕ ಪೊಲೀಸರಿಂದಲೇ ಅತ್ಯಾಚಾರಗಳು ಅಭೂತಪೂರ್ವ ಪ್ರಮಾಣದಲ್ಲಿ ಹೆಚ್ಚುತ್ತಿರುವಾಗ ಈ ರೀತಿಯ ತೀರ್ಪು ಅಪರಾಧಿಗಳಿಗೆ, ಅವರ ಆಶ್ರಯದಾತರಿಗೆ ಇನ್ನಷ್ಟು ಹುಮ್ಮಸ್ಸು ನೀಡಿ ನ್ಯಾಯಾಲಯಗಳ ಬಗ್ಗೆ ಮಹಿಳೆಯರಿಗಿರುವ ವಿಶ್ವಾಸವನ್ನು ಇನ್ನಷ್ಟು ಕುಂದಿಸುತ್ತದೆ ಎಂದಿರುವ ಈ ತೀರ್ಪಿನ ಮರುವಿಮರ್ಶೆಗೆ ಅಥವಾ ದೊಡ್ಡ ಪೀಠಕ್ಕೆ ಅದನ್ನು ಒಪ್ಪಿಸುವ ಕ್ರಮವನ್ನು ಮುಖ್ಯ ನ್ಯಾಯಾಧೀಶರು ತಕ್ಷಣ ಕೈಗೊಂಡರೆ ದೇಶದ ಮಹಿಳೆಯಲ್ಲಿ ಅತ್ಯುಚ್ಚ ನ್ಯಾಯಾಲಯದ ಬಗ್ಗೆ ಮತ್ತೆ ವಿಶ್ವಾಸ ಕುದುರಿಸಿದಂತಾಗುತ್ತದೆ ಎಂದು ಮನವಿ ಹೇಳಿದೆ.

ಸಫ್ದರ್ ಹಾಷ್ಮಿ ಸ್ಮಾರಕ ಟ್ರಸ್ಟ್

ಸಫ್ದರ್ ಹಾಷ್ಮಿ ಸ್ಮಾರಕ ಸಮಿತಿ

ರಾಷ್ಟ್ರೀಯ ಬೀದಿ ನಾಟಕ ರಂಗ ದಿನ
೧೨ ಏಪ್ರಿಲ್ ೧೯೮೯ (ಸಫ್ದರ್ ಜನ್ಮದಿನ)
ಸಫ್ದರ್ ಹಾಶ್ಮಿ ಸ್ಮಾರಕ ಸಾಂಸ್ಕೃತಿಕ ಉತ್ಸವ
೧೨-೧೬ ಏಪ್ರಿಲ್ ೧೯೮೯ ನವದೆಹಲಿಯಲ್ಲಿ

- ➢ ಬೀದಿ ನಾಟಕರಂಗ
- ➢ ಬೀದಿ ನಾಟಕ ರಂಗದ ಮೇಲೆ ವಿಚಾರ ಸಂಕಿರಣ, ಬೀದಿ ನಾಟಕಗಳ
- ➢ ಛಾಯಾಚಿತ್ರಗಳ ಪ್ರದರ್ಶನ
- ➢ ಶಾಸ್ತ್ರೀಯ ನೃತ್ಯ
- ➢ ಶಾಸ್ತ್ರೀಯ ಸಂಗೀತ ಸಭೆ
- ➢ ಕವಿ ಸಮ್ಮೇಳನ ಮತ್ತು ಮುಶಾಯಿರಾ
- ➢ ವರ್ಣಚಿತ್ರ, ಶಿಲ್ಪಗಳು, ಛಾಯಾಚಿತ್ರಗಳ ಪ್ರದರ್ಶನ ಮತ್ತು ಹರಾಜು
- ➢ ಪೂರ್ಣ ಪ್ರಮಾಣದ ಪ್ರೊಸೀನಿಯಂ ನಾಟಕ
- ➢ ಜನ ನಾಟ್ಯ ಮಂಚ್‌ಗೆ ಚಲಿಸುವ ರಂಗ
- ➢ ಮುಂದಿನ ವರ್ಷದ ಆರಂಭದಲ್ಲಿ ಜನ ಉತ್ಸವ
- ➢ ಸಾಂಸ್ಕೃತಿಕ ಮತ್ತು ತರಬೇತಿ ಕೇಂದ್ರದ ಸ್ಥಾಪನೆ

ಸೌಹಾರ್ದ ವ್ಯಕ್ತಪಡಿಸಲು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ರಕ್ಷಿಸಲು, ಎತ್ತಿ ಹಿಡಿಯಲು ಉದಾರ ದಾನ ನೀಡಿ

ದೇಣಿಗಳನ್ನು ಈ ವಿಳಾಸಕ್ಕೆ ಕಳುಹಿಸಿ:
ಸಫ್ದರ್ ಹಾಷ್ಮಿ ಸ್ಮಾರಕ ಟ್ರಸ್ಟ್
೮, ವಿಠ್ಠಲ್‌ಭಾಯಿ ಪಟೇಲ್ ಹೌಸ್
ನವದೆಹಲಿ-೧೧೦೦೦೧.

ಗುಲ್ಬರ್ಗಾ ಜಿಲ್ಲಾ ರೈತ ಸಮ್ಮೇಳನ

ಗುಲ್ಬರ್ಗಾ ಜಿಲ್ಲಾ ಸಮಿತಿ ನೀಡಿದ ಕರೆಯಂತೆ ಫೆಬ್ರವರಿ 10ರಿಂದ 16ನೇ ತಾರೀಖಿನವರೆಗೆ ಕೃಷಿ ಕೂಲಿಕಾರರು (ಗೈರಾಣಿ ಜಮೀನು ಸಾಗುವಳಿದಾರರು) ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾ ಪರಿಷತ್ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿ 17ರಂದು ಪಿಕೆಟಿಂಗ್ ನಡೆಸಿದರು. ಫೆಬ್ರವರಿ 17ರಂದು ಗುಲ್ಬರ್ಗಾದ ನೆಹರು ಗಂಜ್‌ನಿಂದ ಹೊರಟ ನೂರಾರು ರೈತರು ಈ ಪಿಕೆಟಿಂಗ್ ನಲ್ಲಿ ಪಾಲ್ಗೊಂಡರು.

ಫೆ. 18ರಂದು ನಡೆದ ಗುಲ್ಬರ್ಗಾ ಜಿಲ್ಲಾ ರೈತ ಸಮ್ಮೇಳನದಲ್ಲಿ ರಾಜ್ಯದ ರೈತ ಮುಖಂಡ ಕಾ॥ ಜಿ.ವಿ.ಶ್ರೀರಾಮರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಸಮ್ಮೇಳನದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ, ಅಮರ್ಜಾ ಯೋಜನೆ, ಬೆಣ್ಣೆ ತೊರೆ ಯೋಜನೆಗಳನ್ನು ಶೀಘ್ರದಲ್ಲೇ ಮುಗಿಸಬೇಕು. ಹಸಿಬರಗಾಲ ಪರಿಹಾರ, ಹಸಿರು ಕಾರ್ಡು, ಸಾಲಮನ್ನಾ, ಕೃಷಿ ಕೂಲಿಕಾರರಿಗೆ ಕನಿಷ್ಠ ವೇತನ ಜಾರಿ, ಗೈರಾಣಿ ಜಮೀನು ಉಳುಮೆ ಮಾಡಿರುವ ಬಡ ರೈತರಿಗೆ ಸಕ್ರಮಗೊಳಿಸಿ ಪಟ್ಟಾ ನೀಡಬೇಕು ಮುಂತಾದ ಬೇಡಿಕೆಗಳ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ನೂತನ ಜಿಲ್ಲಾ ಸಮಿತಿಗೆ ಕಾ॥ ಕಲ್ಲಪ್ಪ ಕಿರಣಗಿ (ಅಧ್ಯಕ್ಷ) ಬಾಬುಮಗಳಿ, ಬಸವರಾಜಮಂಡಿ, ಮತ್ತು ವೆಂಕೋಬ ರಾವ್ (ಉಪಾಧ್ಯಕ್ಷರು), ಮಾರುತಿ ಮಾನ್ಪಡೆ (ಕಾರ್ಯದರ್ಶಿ), ಚನ್ನಪ್ಪ ಆನೆಗುಂದಿ, ಮೇಘರಾಜ ಕಟಾರೆ, (ಸಹ ಕಾರ್ಯದರ್ಶಿ) ಅರುಣಕುಮಾರ ಮನೋಹರ (ಖಜಾಂಚಿ)ಯವರನ್ನೊಳಗೊಂಡ 25 ಜನರನ್ನು ಆಯ್ಕೆ ಮಾಡಲಾಯಿತು.

ಕುಷ್ಟಗಿ ತಾ॥ ಭೂಸಮಾವೇಶ ಹಾಗೂ ಸಮ್ಮೇಳನ

ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲಿ ಫೆಬ್ರವರಿ 22ರಂದು ಭೂಸಮಾವೇಶವನ್ನು ನಡಸಿ ಸಂಜೆ ಬಹಿರಂಗ ಸಭೆ ನಡೆಸಲಾಯಿತು. ಈ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಯಚೂರು ಜಿಲ್ಲಾ ಅಧ್ಯಕ್ಷ ಕಾ॥ ಪುರುಷೋತ್ತಮ ಕಲಾಲಬಂಡಿ, ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಡಾ॥ ಬಾಲಚಂದ್ರ, ತಾಲ್ಲೂಕು ಅಧ್ಯಕ್ಷ ವಿರೂಪಾಕ್ಷಹಿರೇಮಠ, ಆರ್.ಕೆ.ದೇಸಾಯಿಯವರು ಮಾತನಾಡಿದರು. ಫೆಬ್ರವರಿ 23ರಂದು ತಾಲ್ಲೂಕು 2ನೇ ಸಮ್ಮೇಳನ ಜರುಗಿತು. ಸುಮಾರು 300 ರೈತರು ಮೆರವಣಿಗೆ ಹಾಗೂ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು. ಹೊಸ ತಾಲ್ಲೂಕು ಸಮಿತಿಗೆ ಕಾ॥ ಆರ್.ಕೆ. ದೇಸಾಯಿ (ಅಧ್ಯಕ್ಷ) ರಾಚಪ್ಪ ತುರುಕಾ, ಮಳಿಯಪ್ಪ ವಜ್ಜಲ, ಈರಪ್ಪ ರಾಜೂರು (ಉಪಾಧ್ಯಕ್ಷರು) ಗ್ಯಾನಪ್ಪ ವದ್ದಿಗೇರಿ (ಪ್ರ. ಕಾರ್ಯದರ್ಶಿ) ವಿರೂಪಾಕ್ಷ ಹಿರೇಮಠ, ಶರಣಪ್ಪ ಪಟ್ಟಣಶೆಟ್ಟಿ ಎಸ್.ಜಿ.ರೋಣದ ಜಾಗೀರಗೂಡ ದೂರ, (ಸಹಕಾರ್ಯದರ್ಶಿಗಳು) ಮಲ್ಲಪ್ಪ ಹವಾಲ್ದಾರ (ಖಜಾಂಚಿ)ಯಾಗಿ ಆಯ್ಕೆಗೊಂಡರು.

ಮಾರ್ಚ್ 1ರಿಂದ 3ರವರೆಗೆ ರಾಯಚೂರು ಜಿಲ್ಲಾ ಸಮ್ಮೇಳನ ಕುಷ್ಟಗಿಯಲ್ಲಿ ಜರುಗಲಿದೆ.

ಶಿವಮೊಗ್ಗ ಜಿಲ್ಲಾ ಭೂಸಮಾವೇಶ

ಬಗುರ್ ಹುಕುಂ ಸಾಗುವಳಿ ಮಾಡುತ್ತಿರುವ ಕೃಷಿ ಕೂಲಿಕಾರರು ತಮ್ಮ ಭೂ ಸಮಸ್ಯೆ ಕನಿಷ್ಠ ಕೂಲಿಯ ಜಾರಿ, ಸೇವಾ ಸವಲತ್ತುಗಳನ್ನು ಪಡೆಯಲು ದೊಡ್ಡ ಪ್ರಮಾಣದಲ್ಲಿ ಆಂದೋಲನ ನಡೆಸಬೇಕೆಂದು ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಕಾ॥ ನಿತ್ಯಾನಂದಸ್ವಾಮಿಯವರು ಕರೆ ನೀಡಿದರು. ಅವರು ಫೆಬ್ರವರಿ 21ರಂದು ಶಿವಮೊಗ್ಗ ಜಿಲ್ಲೆ ಭದ್ರಾವತಿಯಲ್ಲಿ ನಡೆದ ಜಿಲ್ಲಾ ಭೂ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕಾ॥ ಎಸ್.ಬಿ.ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಸಂಚಾಲಕ ಕಾ॥ ನರಸಿಂಹಯ್ಯ ಜಿಲ್ಲೆಯ ಭೂಸಂಬಂಧ, ಬಗುರ್‌ಹುಕುಂ ಸಾಗುವಳಿ, ಕೃಷಿ ಕೂಲಿಕಾರರ ಕುರಿತು ಕರಡು ವರದಿ ಮಂಡಿಸಿದರು. ದ.ಕ.ಜಿಲ್ಲಾ ಮುಖಂಡ ಕಾ॥ ಅಬ್ರಹಂ ಕರ್ಕಡ, ಕಾ॥ ರಂಗೇಗೌಡ, ಜಿ. ಶೇಖರಪ್ಪ ಮಲರ್ ಸೆಲ್ವಂ ಮಾತನಾಡಿದರು.

ಶಿವಮೊಗ್ಗ ಜಿಲ್ಲಾ ಸಂಚಾಲಕರಾಗಿ ಕಾ॥ ನರಸಿಂಹಯ್ಯ ಸಹ ಸಂಚಾಲಕರಾಗಿ ಕಾ॥ ಜಿ.ಶೇಖರಪ್ಪ ಎಸ್.ಕೆ.ವರ್ಮರವರುಗಳನ್ನು ಆಯ್ಕೆ ಮಾಡಲಾಯಿತು. ಬಗರ್‌ಹುಕುಂ ಸಾಗುವಳಿ ರೈತರಿಗೆ ಸಾಗುವಳಿ ಚೀಟಿ, ಬೆಂಬಲಿತ ಬೆಲೆ, ಕೃಷಿ ಕೂಲಿಗಾರ ರೈತರಿಗೆ ಕೆಲಸದ ಭದ್ರತೆ, ಸಾಲ ಮಂಜೂರಾತಿ, ನಿವೇಶನ, ವಿವಿಧ ಯೋಜನೆಗಳ ಜಾತಿ, ಹಸಿರು ಕಾರ್ಡು, ಮುಂತಾದ ಬೇಡಿಕೆಗಳ ಠರಾವು ಅಂಗೀಕರಿಸಲಾಯಿತು.

ಗ್ರಾಮ ಘಟಕ ಸಮ್ಮೇಳನ

ರಾಯಚೂರು ಜಿಲ್ಲೆ ದೇವದುರ್ಗ ತಾ॥ ಜಾಲಹಳ್ಳಿ ಗ್ರಾಮ ಘಟಕ ಸಮ್ಮೇಳನ ಫೆ 10ರಂದು ನೆರವೇರಿತು. ರಾಜ್ಯ ಸಮಿತಿ ಸದಸ್ಯ ಕಾ॥ ಕರಿಯಪ್ಪ ಹಚ್ಚೊಳ್ಳಿ, ಯುವನಾಯಕ, ಕಾ॥ ಜಿ.ಬಸವರಾಜ, ಮುಂತಾದವರು ಮಾತನಾಡಿದರು. 400 ಜನ ರೈತರು ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದರು

ಶಹಾಪುರ ತಾ॥ ದ್ವಿತೀಯ ಸಮ್ಮೇಳನ

ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲೆಯ ಶಹಾಪುರ 2ನೇ ಸಮ್ಮೇಳನ ಕಾ॥ ನಾರಾಯಣರಾವ್ ಕುಲಕರ್ಣಿಯವರ ಧ್ವಜಾರೋಹಣ ಜಿಲ್ಲಾ ಅಧ್ಯಕ್ಷ ಕಾ॥ ಕಲ್ಲಪ್ಪ ಕಿರಣಗಿಯವರ ಉದ್ಘಾಟನೆಯೊಂದಿಗೆ ಆರಂಭವಾಯಿತು. ಬರಗಾಲದಿಂದ ಉಂಟಾಗಿರುವ ಭೀಕರ ಪರಿಸ್ಥಿತಿಯಲ್ಲಿ ರೈತರು ರೈತ ಸಂಘದೊಡನೆ ಕೈಜೋಡಿಸಿ ರಾಜೀವ್‌ಗಾಂಧಿ ಸರ್ಕಾರದ ದಿವಾಳಿಕೋರ ನೀತಿಯ ವಿರುದ್ಧ ಹೋರಾಡಬೇಕೆಂದು ಕಲ್ಲಪ್ಪಕಿರಣಗಿ ರೈತರಿಗೆ ಕರೆ ನೀಡಿದರು.

ತಾಲ್ಲೂಕು ಕಾರ್ಯದರ್ಶಿ ಕಾ॥ ಚನ್ನಪ್ಪ ಆನೆಗುಂದಿಯವರು ಕಳೆದ 3 ವರ್ಷಗಳ ಚಟುವಟಿಕೆಗಳ ವರದಿ ಹಾಗೂ ಮುಂದಿರುವ ಸವಾಲುಗಳ ಕುರಿತು ವರದಿ ಮಂಡಿಸಿದರು. ವಿದ್ಯಾರ್ಥಿ ಫೆಡರೇಷನ್‌ನ ಕಾ॥ ದೊಡ್ಡಪ್ಪ ಪಾಟೀಲ ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು. ನೂತನ ತಾಲ್ಲೂಕು ಸಮಿತಿಗೆ ಕಾ॥ ಕೇಶವರಾಜರಾಜರ್ (ಅಧ್ಯಕ್ಷ) ರಾಚಯಸ್ವಾಮಿ ನಿಂಗವಳ್ಳಿ, ಹಣಮಂತಶೆಟ್ಟಿ (ಉಪಾಧ್ಯಕ್ಷರು), ಚನ್ನಪ್ಪ ಆನೆಗುಂದಿ (ಕಾರ್ಯದರ್ಶಿ), ಗಂಗಾಧರ ಗುಡಗುಂಟೆ, ಸೈಯದ್ ಇಬ್ರಾಹಿಂ ಜಮಾದಾರ (ಸಹಕಾರ್ಯದರ್ಶಿ ಗಳು) ಅಯ್ಯಣ್ಣ (ಖಜಾಂಚಿ)ಯನ್ನೊಳ ಗೊಂಡ 15 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ಸರದಿ ಉಪವಾಸ ಸತ್ಯಾಗ್ರಹ

ಶಹಾಪುರ ತಾಲ್ಲೂಕು ರೈತ ಸಂಘ ರೈತರಿಗೆ ಬಾಧಿಸುತ್ತಿರುವ ಪ್ರಮುಖ 4 ಬೇಡಿಕೆಗಳನ್ನು ಒತ್ತಾಯಿಸಿ ಫೆಬ್ರವರಿ 14ರಿಂದ ರೈತರ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದೆ. ತೊಗರಿ ಬೆಳೆಗಾರರಿಗೆ ನ್ಯಾಯಬೆಲೆ, ಬರಪರಿಹಾರ, ಕಾಮಕಾರಿ ಪ್ರಾರಂಭಿಸಬೇಕು, ಗೈರಾಣಿ ಸಾಗುವಳಿ ರೈತರಿಗೆ ಪಟ್ಟಾ ನೀಡಬೇಕು ಮುಂತಾದ ಬೇಡಿಕೆಗಾಗಿ ನಡೆಯುತ್ತಿರುವ ಈ ಚಳುವಳಿಯ ನೇತೃತ್ವವನ್ನು ತಾಲ್ಲೂಕು ಕಾರ್ಯದರ್ಶಿ ಕಾ॥ ಚನ್ನಪ್ಪ ಆನೆಗುಂದಿ ಹಾಗೂ ದೇವಿಂದ್ರಪ್ಪಾ ಮಾಲಿಬಿರಾದಾರ ವಹಿಸಿದ್ದಾರೆ.

ಶೆಟ್ಟಿಕೇರಾ ಗ್ರಾಮ ಘಟಕ

ತಾಲ್ಲೂಕಿನ ಶೆಟ್ಟಿಕೇರಾ ಗ್ರಾಮ ಘಟಕದ ಉದ್ಘಾಟನೆಯನ್ನು ಫೆಬ್ರವರಿ 13ರಂದು ಕಾ॥ ಶಾಂತವೀರ ಪಾಟೀಲ ನೆರವೇರಿಸಿದರು. ಜಿಲ್ಲಾ ಕಾರ್ಯದರ್ಶಿ ಕಾ॥ ಕಲ್ಲಪ್ಪ ಕಿರಣಗಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಕೃಷ್ಣಾಮೇಲ್ದಂಡೆ ಕಾಲುವೆಯಲ್ಲಿ ಏಪ್ರಿಲ್ 15 ರವರೆವಿಗೆ ನೀರು ಬಿಡಬೇಕು ಬರದಿಂದ ವಲಸೆ ತಡೆಯಲು ಕಾಮಗಾರಿ ಆರಂಭಿಸಬೇಕು. ಮುಂತಾದ ಬೇಡಿಕೆಗಳ ಕುರಿತು ಸಭೆ ನಿರ್ಣಯ ಸ್ವೀಕರಿಸಿತು. ಗ್ರಾಮ ಘಟಕಕ್ಕೆ ಕಾ॥ ಭೀಮಣ್ಣ ಕಟ್ಟಿಮನಿ (ಅಧ್ಯಕ್ಷ) ಯಲ್ಲಪ್ಪ ದೊಡ್ಡಮನಿ (ಕಾರ್ಯದರ್ಶಿ)ಯಾಗಿರುವ ಪದಾಧಿಕಾರಿಗಳನ್ನು ಆರಿಸಲಾಯಿತು.

ಅಲ್ದಾಳ ಘಟಕ

ಸುರಪೂರ ತಾಲ್ಲೂಕಿನ ಅಲ್ದಾಳದಲ್ಲಿ ಗ್ರಾಮಘಟಕವನ್ನು ತಾಲ್ಲೂಕು ಸಂಚಾಲಕ ದೇವೀಂದ್ರ ಬಿರಾದಾರರವರು ಉದ್ಘಾಟಿಸಿದರು. ಹೆಚ್ಚು ಗ್ರಾಮಗಳಿಗೆ ರೈತಸಂಘದ ಚಟುವಟಿಕೆ ವಿಸ್ತರಿಸಿ ಸಂಘಟನೆಯನ್ನು ಬಲಿಷ್ಠವಾಗಿ ಬೆಳೆಸಲು ಅವರು ಕರೆ ನೀಡಿದರು. ಮಂಡಲ ಪಂಚಾಯ್ತಿ ಸದಸ್ಯ ಮಾನಪ್ಪ ಸಾಹುಕಾರ ಸಭೆ ಅಧ್ಯಕ್ಷತೆ ವಹಿಸಿದ್ದರು. ಘಟಕದ ಅಧ್ಯಕ್ಷರಾಗಿ ಕಾ॥ ಬಸವರಾಜ್ ಆನಸುರ, ಕಾರ್ಯದರ್ಶಿಯಾಗಿ ಕಾ॥ ಆನಂದಉದಾರ ಆಯ್ಕೆಯಾದರು.

ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. 3ನೇ ಸಮ್ಮೇಳನ

ರಾಜೀವ್ ದೀವಾಳಿ ನೀತಿ ವಿರುದ್ಧ ಹೋರಾಡಲು ಕರೆ

ರಾಜೀವ್ ಸರ್ಕಾರದ ಆಡಳಿತದಲ್ಲಿ ದೇಶದ ದುಡಿಯುವ ಕಾರ್ಮಿಕ ವರ್ಗ ನೂರಾರು ವರ್ಷಗಳಿಂದ ತನ್ನ ತ್ಯಾಗ ಬಲಿದಾನದಿಂದ ಹೋರಾಡಿ ಗಳಿಸಿದ ಹಕ್ಕು ಬಾಧ್ಯತೆಗಳನ್ನು ಕಳೆದುಕೊಂಡು ಮಿತಿ ಮೀರಿದ ಬೆಲೆ ಏರಿಕೆ, ನಿರುದ್ಯೋಗದಿಂದ ತತ್ತರಿಸಿದೆ ಎಂದು ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ॥. ಸಿ.ನಂಜುಂಡಪ್ಪನವರು ಆರೋಪಿಸಿದರು. ಅವರು ಫೆಬ್ರವರಿ 18ರಂದು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. 3ನೇ ಸಮ್ಮೇಳನವನ್ನು ನಗರದ ಪುರಭವನದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ವಿಶ್ವಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯ ಶರತ್ತುಗಳಿಗೆ ತಲೆಬಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದಲ್ಲಿ ಬಂಡವಾಳ ಹೂಡಲು ಅನುಮತಿ ನೀಡಿರುವ ರಾಜೀವ್‌ಗಾಂಧಿ ಕಾರ್ಮಿಕ ಹಕ್ಕುಗಳನ್ನು ಕಸಿದು ಕಾರ್ಮಿಕರ ಕಾಯ್ದೆ ಕಾನೂನುಗಳಿಗೆ ತಿದ್ದುಪಡಿ ತಂದು ಕಾರ್ಮಿಕರು ಸಂಘ ಕಟ್ಟಿಕೊಳ್ಳುವ ಹಕ್ಕು, ಸೌಲತ್ತಿಗಾಗಿ ಮುಷ್ಕರ ನಡೆಸುವುದನ್ನು ನಿರ್ಬಂಧಿಸುವ ಮುಂತಾದ ಕರಾಳ ಶಾಸನಗಳನ್ನು ತರಲಾಗುತ್ತಿದೆ. ಖಾಸಗೀಕರಣ, ಸ್ವಯಂ ಚಾಲೀಕರಣ, ಗಣಕೀಕರಣ ಮುಂತಾದ ರಂಗಗಳಲ್ಲಿ ಆಧುನಿಕ ತಂತ್ರಜ್ಞಾನದ ಪರಿಣಾಮವಾಗಿ ರೈಲ್ವೆ, ಬ್ಯಾಂಕ್ ಮುಂತಾದ ಉದ್ಯೋಗಾವಕಾಶಗಳು ನಿಂತು ಹೋಗಿದ್ದು 5 00 ರಷ್ಟು ದೊಡ್ಡ ಕೈಗಾರಿಕೆಗಳು ಸೇರಿದಂತೆ 1 ಲಕ್ಷದ 80 ಸಾವಿರ ಕೈಗಾರಿಕೆಗಳು ಮುಚ್ಚಿ ಕೋಟ್ಯಾಂತರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ ಎಂದರು. ಕಾರ್ಮಿಕ ವರ್ಗವನ್ನು ಜಾತೀಯ ಮತೀಯ ಹೆಸರಿನಲ್ಲಿ ವಿಭಜನೆ ಮಾಡಲು ಛಿದ್ರಕಾರಿ ಶಕ್ತಿಗಳು ನಡೆಸುವ ಎಲ್ಲಾ ಪ್ರಯತ್ನಗಳನ್ನು ಮಣ್ಣುಗೂಡಿಸಿ ದೇಶದ ಸಮಗ್ರತೆ ಐಕ್ಯತೆಯನ್ನೂ ಎತ್ತಿ ಹಿಡಿಯುವಂತೆ ಹಾಗೂ ಎಲ್ಲಾ ಕಾರ್ಮಿಕರನ್ನು ಒಳಗೊಂಡ ಐಕ್ಯ ಹೋರಾಟ ಮುನ್ನಡೆಸುವಂತೆ ಅವರು ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.

ಕಾರ್ಮಿಕ ವರ್ಗ ರಾಜಕೀಯದಿಂದ ದೂರವಿರಬೇಕೆಂಬ ಅರ್ಥವಿಲ್ಲದ ವಾದವನ್ನು ತಿರಸ್ಕರಿಸಿ ದುಡಿಯುವ ಜನತೆ ಅಧಿಕಾರ ಹಿಡಿಯುವ ಮೂಲಕ ತನ್ನ ಸಂಕಷ್ಟಗಳಿಗೆ ಮುಕ್ತಿ ಕಾಣಬೇಕೆಂದು ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿ.ಐ.ಟಿ.ಯು. ಅಧ್ಯಕ್ಷ ಕಾ॥ ಸೂರ್ಯನಾರಾಯಣರಾವ್ ಕರೆ ನೀಡಿದರು. ಪ್ರಾಂತ ರೈತ ಸಂಘದ ಕಾ॥ ಪಿ. ಜಗನ್ನಾಥ್, ವಕೀಲರ ಸಂಘದ ಕಾ॥ ಗೋಪಾಲಗೌಡ, ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷ ಕಾ॥ ನಾಗಮೋಹನದಾಸ್, ಮೈಕೋದ ವೀರಾಸ್ವಾಮಿ, ಬಿ.ಇ.ಎಫ್.ಐ.ನ ಕಾ॥ ಶೆಣೈ, ಎಲ್.ಐ.ಸಿ. ಮುಂತಾದ ಸಹೋದರ ಸಂಘಟನೆಗಳ ಗಣ್ಯರು ಶುಭಕೋರಿ ಮಾತನಾಡಿದರು.ಸಿ.ಐ.ಟಿ.ಯು. ರಾಜ್ಯ ನಾಯಕರಾದ ಕಾ॥ ಎನ್.ಕೆ.ಉಪಾಧ್ಯಾಯ ವಿ.ಜೆ. ಕೆ.ನಾಯರ್‌ರವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಬೆಂಗಳೂರು ಜಿಲ್ಲಾ ಸಂಚಾಲಕ ಕಾ॥ ನಾರಾಯಣರಾವ್‌ಭಾನುರವರು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ಮಂಡಲ ಪಂಚಾಯ್ತಿ ನೌಕರ ಸಂಘದ ಒತ್ತಾಯ

ಕರ್ನಾಟಕ ರಾಜ್ಯ ಮಂಡಲ ಪಂಚಾಯ್ತಿ ನೌಕರರ ಸಂಘದ ಬಿಜಾಪುರ ಜಿಲ್ಲಾ ಸಮಿತಿ ಜಿಲ್ಲಾಪರಿಷತ್‌ಗೂ ಹಾಗೂ ಸರ್ಕಾರಕ್ಕೆ ತಮ್ಮ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿ ಕೂಡಲೇ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿತು. ಫೆಬ್ರವರಿ 13ರಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಜಿಲ್ಲಾಪರಿಷತ್ ಉಪಾಧ್ಯಕ್ಷೆ ಶ್ರೀಮತಿ ಸುಮನ ಕೊಲ್ಹಾರ ಹಾಗೂ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವರು ಈ ಕುರಿತು ಜಿಲ್ಲಾಪರಿಷತ್ ಸಭೆಯಲ್ಲಿ ಚರ್ಚಿಸುವುದಾಗಿ ಆಶ್ವಾಸನೆ ನೀಡಿದ್ದರಿಂದ ಮುಂದೂಡಲಾಗಿತ್ತುಪ ಬೇಡಿಕೆಗಳ ಕುರಿತು ಶೀಘ್ರ ಕ್ರಮ ಕೈಗೊಳ್ಳದೇ ಹೋದರೆ ಹೋರಾಟಕ್ಕಿಳಿಯುವುದು ಅನಿವಾರ್ಯವಾಗುತ್ತದೆ ಎಂದು ಸಂಘದ ಸಹ ಸಂಚಾಲಕ ಕಾ॥ ಎ.ಎಚ್. ಹೊನ್ನಟಗಿಯವರು ತಿಳಿಸಿದ್ದಾರೆ.

ತೋಟ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿಗೊಳಿಸುವಲ್ಲಿನ ವಿಳಂಬ ನೀತಿಯನ್ನು ಪ್ರತಿಭಟಿಸಲು ಸಿ.ಐ.ಟಿ.ಯು . ರಾಜ್ಯ ಸಮಿತಿ ನೀಡಿದ ಕರೆಯಂತೆ ಸಕಲೇಶಪುರದ ವಿವಿಧ ತೋಟಗಳಿಂದ ಬಂದ 600ಕ್ಕೂ ಹೆಚ್ಚು ಕಾರ್ಮಿಕರು ಸಕಲೇಶಪುರದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ಉಪವಿಭಾಗಾಧಿಕಾರಿಯವರ ಕಛೇರಿ ಮುಂದೆ ಮತಪ್ರದರ್ಶನ ನಡೆಸಿ

ಹಾಸನದಲ್ಲಿ ಮಹಿಳಾ ಸಮಾವೇಶ

ಜನವರಿ 26ರಂದು ಹಾಸನ ನಗರದ ಸ್ಕೇಟರ್ಸ್ ಮೆಮೋರಿಯಲ್ ಹಾಲ್‌ನಲ್ಲಿ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಹಾಸನ ಜಿಲ್ಲಾ ಸಮಾವೇಶವು ಕಾ॥ ಚಂದ್ರಕಲಾರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಮಾವೇಶದ ಉದ್ಘಾಟನೆಯನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜ್ಯ ನಾಯಕಿ ಕಾ॥ ಎಂ.ಎಂ.ರಾಜಮ್ಮ ಮಾಡಿದರು.

ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾರ್ಯಕಾರಿ ಸಮಿತಿ ಸದಸ್ಯರು, ರಾಜ್ಯ ಸಂಚಾಲಕಿಯೂ ಆದ ಕಾ॥ ಹರಿಣಿ ಕಕ್ಕೇರಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಸಮಾವೇಶದಲ್ಲಿ ಜಿಲ್ಲೆಯ ಅನೇಕ ಭಾಗಗಳಿಂದ ಭಾಗವಹಿಸಿದ್ದ ಮಹಿಳೆಯರಲ್ಲಿ ಹೆಚ್ಚಿನವರು ಪ್ಲಾಂಟೇಷನ್ ಹಾಗೂ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ದುಡಿಯುವ ಮಹಿಳೆಯರಾಗಿದ್ದರು.

ಸಮಾವೇಶದಲ್ಲಿ ತಾವು ದುಡಿಯುವ ಸ್ಥಳದಲ್ಲಿರುವ ಕೊರತೆಗಳ ಬಗ್ಗೆ, ಸಂಘಟನೆಯ ಅವಶ್ಯಕತೆಯ ಬಗ್ಗೆ ಸಂಗಾತಿಗಳಾದ ಅಂಗಾಯಿ, ರೇಣುಕ, ಶಾಂತಮ್ಮ, ಮೀನಾಕ್ಷಿ, ಕುಂ೩: ಸಂಪಾ, ಅಪ್ಪಿ, ಕಲಾವತಿ, ವಾರಿಜ, ಗಿರಿಜಾ, ಕುಪ್ಪು, ಒಸೂರು ಗಿರಿಜಾ, ವನಜಾಕ್ಷಿ ಮತ್ತು ಮಂಗಳಾ ಮೊದಲಾದವರು ಭಾಗವಹಿಸಿ ಮಾತನಾಡಿದರು.

ಸುಮಾರು 65 0-700 ಮಹಿಳೆಯರು ಸೇರಿದ್ದ ಈ ಸಮಾವೇಶದಲ್ಲಿ ಸಂಗಾತಿಗಳಾದ ವಿ.ಎಂ.ವಿಜಯ ಸಂಚಾಲಕಿ, ಚಂದ್ರಕಲಾ ಸಹ ಸಂಚಾಲಕಿಯನೊಳಗೊಂಡ 15 ಸದಸ್ಯರಾಗಿರುವ ಒಂದು ಜಿಲ್ಲಾ ಸಂಘಟನಾ ಸಮಿತಿ ಯನ್ನು ಚುನಾಯಿಸಲಾಯ್ತು. ಸಮಾವೇಶಕ್ಕೆ ಸಿ.ಐ.ಟಿ.ಯು., ಡಿ.ವೈ.ಎಫ್.,ಐ./ಎಸ್.ಎಫ್.ಐ. ಸಂಗಾತಿಗಳು ಶುಭಕೋರಿ ಮಾತನಾಡಿದರು. ಕೊನೆಯಲ್ಲಿ ಸಂಗಾತಿ ಸೌಭಾಗ್ಯ ವಂದಿಸಿದರು.

ಹರಪ್ಪನಹಳ್ಳಿ ತಾ॥ ಸಮಾವೇಶ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಸಮಾವೇಶ ಡಿಸೆಂಬರ್ 17ರಂದು ಜರುಗಿತು. ರಾಜ್ಯ ಸಂಚಾಲಕಿ ಕಾ॥ ಹರಿಣಿ ಕಕ್ಕೇರಿಯವರು ಮುಖ್ಯ ಅತಿಥಿಗಳಾಗಿ ಈ ಸಮಾವೇಶದಲ್ಲಿ ಭಾಗವಹಿಸಿ ಮಹಿಳೆಯರ ಸಂಘಟನೆಯ ಅಗತ್ಯ ಮತ್ತು ಹೋರಾಟದ ಮಹತ್ವ ಕುರಿತು ಮಾತನಾಡಿದರು. ಜಿಲ್ಲಾ ಸಂಚಾಲಕಿಯರಾದ ಶ್ರೀಮತಿ ಪದ್ಮಾರವರು ಮಹಿಳೆಯ ಸ್ಥಿತಿಗತಿ ಬಗ್ಗೆ ಮಾತನಾಡಿದರು. ಎಸ್.ಎಚ್.ಯೋಗಿತಾರಿಂದ ಧ್ವಜಾರೋಹಣ ಹಾಗೂ ಸುಭದ್ರರವರ ಸ್ವಾಗತದೊಡನೆ ಪ್ರಾರಂಭವಾದ ಸಮಾವೇಶದ ಅಧ್ಯಕ್ಷತೆಯನ್ನು ದೇವಿರಮ್ಮ ವಹಿಸಿದ್ದರು. ಪುಷ್ಪರವರು ವರದಿಯನ್ನು ಮಂಡಿಸಿದರು. ಹರಪನಹಳ್ಳಿಯಲ್ಲಿ ಮಹಿಳೆಯರ ಶೌಚಾಲಯ ಸೌಕರ್ಯ ಒದಗಿಸಬೇಕು. ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಬೇಕೆಂಬ ಬೇಡಿಕೆಗಳ ನಿರ್ಣಯವನ್ನು ಸಮಾವೇಶ ಅಂಗೀಕರಿಸಿತು.

ಮಹಿಳಾ ಅಭಿವೃದ್
ಮತ

"ಮಹಿಳೆಯರಿಗಾಗಿ ರಾಷ್ಟ್ರೀಯ ಯೋಜನಾ ಕಣ್ನೋಟ- (1988-2000)" ಅಥವಾ ಚಿಕ್ಕದಾಗಿ ಎನ್.ಪಿ.ಪಿ. ಇದು ಕಳೆದ ವರ್ಷ ಪ್ರಧಾನಮಂತ್ರಿ ರಾಜೀವ್ ಗಾಂಧಿಯವರು ಭಾರತದ ಮಹಿಳೆಯರ ಸಮಸ್ಯೆಗಳನ್ನು ತಕ್ಷಣ ಪರಿಹರಿಸ ಬೇಕಾದುದರ ತುರ್ತನ್ನು ಮನಗಂಡು(!) ತರಾತುರಿಯಿಂದ ಸಂಸತ್ತಿನಲ್ಲಿ ಪಾಸು ಮಾಡಿಸಿಕೊಳ್ಳಲು ಯತ್ನಿಸಿದ ಈ ಶತಮಾನದ ಅಂತ್ಯದವರೆಗೆ ಮಹಿಳಾ ಅಭಿವೃದ್ಧಿಯ ಕಣ್ನೋಟ ನೀಡುತ್ತದೆನ್ನುವ ಯೋಜನೆಯೊಂದರ ಕರಡು.

ಈ 'ಮಹಾನ್ ಯೋಜನೆ' ಕುರಿತು ಮಾತನಾಡದೆ, ಮಹಿಳೆಯರ ಸಮಸ್ಯೆ ಗಳನ್ನು ಕುರಿತು ಮಾತನಾಡದೆ ಈಗ ನಮ್ಮ ಪ್ರಧಾನಮಂತ್ರಿಗಳ ಯಾವ ಭಾಷ ಣವೂ ಪೂರ್ಣಗೊಳ್ಳುವುದಿಲ್ಲ. ಈ ರಾಮಬಾಣದ ಒಂದು ಪರಿಶೀಲನೆ ಇದು.

ಮಹಿಳೆಯರ ಅಭಿವೃದ್ಧಿಯ ಕಣ್ನೋಟ ನೀಡುವ ಯೋಜನೆಗೂ ರಾಷ್ಟ್ರೀಯ ಅಭಿವೃದ್ಧಿಯ ಒಟ್ಟು ಕಣ್ನೋಟಕ್ಕೂ ಸಂಬಂಧವಿರಬೇಕು. ಭಾರ ತದ ಎಲ್ಲಾ ಮಹಿಳೆಯರ ಸಮಸ್ಯೆಗಳೂ ಒಂದೇ ತರಹೆಯವು ಅಲ್ಲ. 85 ಶೇಕಡಾ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವವರು. ಅವರ ಜೀವ, ಜೀವನ ಮತ್ತು ಸ್ಥಾನಮಾನಗಳನ್ನು ಕೃಷಿ, ನೀರಿನ ಮೂಲಗಳು, ಅರಣ್ಯ, ಭೂವಿತರಣೆ ಮತ್ತು ಭೂಮಿಯ ಉಪಯೋಗ ಕುರಿತಂತೆ ಸರ್ಕಾರದ ಧೋರಣೆಗಳು ಆಳವಾಗಿ ತಟ್ಟು ತ್ತವೆ. ಕೃಷಿ, ಕೈಗಾರಿಕೆ ಮತ್ತು ತಂತ್ರ ಜ್ಞಾನಕ್ಕೆ ಸಂಬಂಧಪಟ್ಟಂತೆ ಸರ್ಕಾರೀ ಧೋರಣೆಗಳಿಂದ ಉದ್ಯೋಗಾವಕಾಶಗಳ ಮೇಲಾಗುವ ಪರಿಣಾಮಗಳಿಗೂ ಮಹಿಳೆ ಯರ ಸ್ಥಾನಮಾನಗಳ ಬೆಳವಣಿಗೆಗೂ ನಿಕಟ ಸಂಬಂಧವಿದೆ. ಗ್ರಾಮೀಣ ಮಹಿಳೆ ಯರು, ವಿಶೇಷತಃ ಹರಿಜನ, ಗಿರಿಜನ ಮಹಿಳೆಯರ ವಿಷಯದಲ್ಲಂತೂ ಇದು ಹೆಚ್ಚು ನಿಜ. ಹಳ್ಳಿಯಲ್ಲಾಗಲಿ, ಪಟ್ಟಣ ದಲ್ಲಾಗಲೀ, ರೈತ ಕಸುಬುದಾರ ಕುಟುಂಬಗಳ ಮಹಿಳೆಯರ ಮೇಲೆ ಜವಳಿ ಉದ್ಯಮ, ವಿಜ್ಞಾನ-ತಂತ್ರಜ್ಞಾನ, ವಾಣಿಜ್ಯ, ಸಾಲ ಕುರಿತಾದ ಸರ್ಕಾರದ ಧೋರಣೆಗಳು ತೀವ್ರ ಪರಿಣಾಮ ಬೀರು ತ್ತವೆ.

ಹೀಗೆ ವಿಭಿನ್ನ ವಲಯಗಳಲ್ಲಿ ರಾಷ್ಟ್ರೀಯ ಅಭಿವೃದ್ಧಿಯ ಒಟ್ಟಾರೆ ಸರ್ಕಾರೀ ಧೋರಣೆಗಳಿಗೂ ಮಹಿಳೆಯ ರಿಗೂ ಇರುವ ಸಂಬಂಧವನ್ನು ಗಮನಿ ಸದ, ಪರಿಶೀಲಿಸಲು ನಿರಾಕರಿಸುವ ಯಾವುದೇ ಯೋಜನೆ ಕೇವಲ ಪ್ರಚಾರ ಕರಪತ್ರಗಳಲ್ಲೇ ಉಳಿಯುವ ಯೋಜನೆ ಯಾಗುತ್ತದೆ.

ಕರಡಿನ ಕುರುಡುತನ

ಭಾರತ ಸರ್ಕಾರದ ಈ ಎನ್.ಪಿ.ಪಿ.ನ ಕರಡಿನ ಅತ್ಯಂತ ದೊಡ್ಡ ಕೊರತೆಯೆಂದರೆ ಇದೇ ಎಂದು ದೇಶದ ಪ್ರಮುಖ ಮಹಿಳಾ ಸಂಘ ಟನೆಗಳೆಲ್ಲಾ ಒಮ್ಮತದಿಂದ ಬೊಟ್ಟು ಮಾಡಿ ತೋರಿಸಿವೆ. ಭಾರತದ ಬಹು ಪಾಲು ಮಹಿಳೆಯರ ಮುನ್ನಡೆ ಕುಂಠಿತ ಗೊಂಡಿರುವುದಕ್ಕೂ ಅವರ ಉದ್ಯೋಗ, ಆರೋಗ್ಯ, ಶಿಕ್ಷಣ, ಕಾನೂನು ಹಕ್ಕುಗಳು, ಭದ್ರತೆ ಮುಂತಾದವುಗಳನ್ನು ಕುರಿತ ಸರ್ಕಾ ರದ ಧೋರಣೆಗಳಿಗೂ ಇರುವ ನೇರ ಸಂಬಂಧವನ್ನು ಕಾಣಲು ಈ ಕರಡು ನಿರಾಕರಿಸುತ್ತದೆ.

ಕೆಲವು ಉದಾಹರಣೆ ನೀಡುವುದಾದರೆ ಕೃಷಿಯ ಆಧುನೀಕರಣ, ಜವಳಿ ಉದ್ದಿ ಮೆಯ ಆಧುನೀಕರಣ ಸಮಾಜದಲ್ಲಿನ ಅಸಮಾನತೆಗಳನ್ನು ಹೆಚ್ಚಿಸಿವೆ. ಆದರೆ ಇದು ಅತಿ ಹೆಚ್ಚಾಗಿ ತಟ್ಟಿರುವುದು ಈ ವಿಭಾಗಗಳ ಮಹಿಳೆಯರನ್ನು, ಅವರ ಉದ್ಯೋಗಾವಕಾಶಗಳನ್ನು ಕಿತ್ತುಕೊಂಡು. ಯಾಕೆಂದರೆ ರಿಟ್ರೆಂಚ್‌ಮೆಂಟ್‌ಗಳಿಗೆ ಮೊದಲ ಬಲಿ ಮಹಿಳೆಯರೇ. ರಫ್ತು ಆಧಾರಿತ ಅಭಿವೃದ್ಧಿ ತಂತ್ರ ಒಂದು ಶೋಷಣಾತ್ಮಕ ಆರ್ಥಿಕ ವ್ಯವಸ್ಥೆ ಹುಟ್ಟು ಹಾಕಿದೆ. ಇದೂ ಅತೀ ಹೆಚ್ಚಾಗಿ ತಟ್ಟಿರು ವುದು ಬಡ ಮಹಿಳೆಯರನ್ನೇ. ಭೂ ಸುಧಾರಣೆಯ ಅರೆಮನಸ್ಸಿನ ಜ್ಯಾರಿ, ನೀರು ಮುಂತಾದ ಪ್ರಾಕೃತಿಕ ಸಂಪನ್ಮೂಲ ಗಳ ಅಸಮ ವಿತರಣೆ ಹೆಚ್ಚಾಗಿ ಬಾಧಿಸಿ ರುವುದು ರೈತ ಮಹಿಳೆಯನ್ನು. ನಮ್ಮ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರ ಗಳನ್ನು ಅಪಾಯಕ್ಕೀಡು ಮಾಡಿರುವ ದಿಕ್ಕು ತಪ್ಪಿದ ಬೆಳವಣಿಗೆಯ ತಂತ್ರ ಹುಟ್ಟಿಸಿರುವ ಕೆಲವು ಸಮಾಜ-ಘಾತುಕ ಶಕ್ತಿಗಳಿಗೂ ಮಹಿಳೆಯರೇ ಮೊದಲ ಬಲಿ. ಅತ್ಯಾಚಾರ, ಮಾನಭಂಗ, ಕೊಲೆ, ಭ್ರೂಣ ಹತ್ಯೆ, ಮಹಿಳೆಯರ ಬಲಹೀನತೆಯನ್ನು ಮೆರೆಯಿಸಿ ಅವರನ್ನೊಂದು ಸರಕಾಗಿ ಮಾಡುವ ಜಾಹಿರಾತುಗಳು ತ್ವರಿತವಾಗಿ ಹೆಚ್ಚುತ್ತಿರುವುದು ಇದಕ್ಕೆ ಉದಾಹರಣೆ. ಇದಲ್ಲದೆ ಧರ್ಮ, ಕೋಮುಗಳ ಹೆಸ ನಲ್ಲಿ ಮಹಿಳೆಯರ ಮೇಲೆ ಹೇರುತ್ತಿ ರುವ ದಮನವನ್ನು ತಡೆಯುವ ಬದಲು ಇಂತಹ ಶಕ್ತಿಗಳೊಂದಿಗೇ ಸರ್ಕಾರ ರಾಜಿ ಮಾಡಿಕೊಳ್ಳುತ್ತದೆ. "ಮಹಿಳೆಯರ ಸಮಸ್ಯೆಗಳು ಸ್ಪಷ್ಟವಾ



ಮಹಿಳೆಯರ ಎಲ್ಲಾ ಸಮಸ್ಯೆಗಳನ್ನು ಕೇಂದ್ರದಿಂದ ಕೆಲಸ ಮಾಡುವ ಒಂದು ಸಂಸ್ಥೆ, ಕೆಲವು ಉಚ್ಚ ಅಧಿಕಾರಿ ಗಳ ನೇಮಕ, ಶಾಸಕಾಂಗಗಳಲ್ಲಿ ಕೆಲವು ಮಹಿಳೆಯರ ನೇಮಕ-ಇದರಿಂದ ಪರಿಹರಿಸಬಹುದೆಂದು ಎನ್.ಪಿ.ಪಿ. ನಂಬುವಂತೆ ಕಾಣುತ್ತದೆ. ಬಹುಶಃ ಭಾರತದ ಮಹಿಳೆಯರನ್ನು ಹಾಗೆಂದು ನಂಬಿಸಲು ಪ್ರಯತ್ನಿಸುತ್ತಿದೆ.

ಒಂದು ಸ್ವಯಂ ವಿಮರ್ಶೆ

ನಮ್ಮ ಪಕ್ಷ ಮಹಿಳೆಯರ ಸಮಸ್ಯೆ ಗಳು ಮತ್ತು ಮಹಿಳಾ ಆಂದೋಲನಕ್ಕೆ ಸಂಬಂಧಪಟ್ಟಂತೆ ಕೆಲವು ಮಾರ್ಗಚ್ಯುತಿ ಗಳನ್ನು ಗಮನಿಸಿದೆ. ವಿಶೇಷವಾಗಿ ದುಡಿ ಯುವ ಮಹಿಳೆಯರ ಸಮಸ್ಯೆಯನ್ನು ಕುರಿತಂತೆ ನಮ್ಮ ಕಾರ್ಮಿಕ ಸಂಘಗಳ ಹೇಯ ನಿಲುವು. ಈ ದೃಷ್ಟಿಕೋನ ಸುಮಾರಾಗಿ ಮಹಿಳೆಯರು ಕಾರ್ಮಿಕ ವರ್ಗದ ಭಾಗ ಎಂದು ಪರಿಗಣಿಸಲು ನಿರಾಕರಿಸುತ್ತದೆ. ವರ್ಷಗಳೇ ಕಳೆದರೂ ಕೆಲವು ರಾಜ್ಯಗಳನ್ನು ಬಿಟ್ಟರೆ ಬೇರೆಡೆ ಈ ವಿಷಯದಲ್ಲಿ ಗಮನಾರ್ಹ ಪ್ರಗತಿ ಆಗಿಲ್ಲ. ಆದರೆ ಮಹಾಧಿವೇಶನದಲ್ಲಿ ಇದರ ಪ್ರಸ್ತಾಪ ವಾಗಲಿ, ಟೀಕೆಯಾಗಲೀ ಕಂಡು ಬರಲೇ ಇಲ್ಲ. ಈ ಬಗ್ಗೆ ಒಂದೋ, ಎರಡೋ ಭಾಷಣ ಕೇಳಿ ಬಂತಷ್ಟೆ. ಅದೂ ಮಹಿಳಾ ಪ್ರತಿನಿಧಿಗಳಿಂದ. ಪುರುಷರು ಮೌನವಾಗಿ ದ್ದರು-ಸುಮಾರಾಗಿ ಈ ಸಮಸ್ಯೆಯೇ ಅಥವಾ ಈ ಆಂದೋಲನವೇ ಇಲ್ಲವೋ ಎಂಬಂತೆ. ಮಹಿಳೆಯರ ಸಂಘ ಟನೆ ಕೇವಲ ಮಹಿಳಾ ಕಮ್ಯೂನಿಸ್ಟರ ಕೆಲಸ ಮತ್ತು ಜವಾಬ್ದಾರಿ ಎಂದು ಬಹುಶಃ ಕೆಲವು ಪ್ರತಿನಿಧಿಗಳ ಪರಿಗಣನೆ. ಇದೊಂದು ಮಾರ್ಗಚ್ಯುತಿ.

"ಮಹಿಳೆಯರ ನಡುವೆ ಚಳುವಳಿ ಮತ್ತು ಪ್ರಚಾರದ ಕೆಲಸ, ಅವರ ಜಾಗೃತಿ ಹಾಗೂ ಅವರನ್ನು ಕ್ರಾಂತಿಕಾರೀ ಕೆಲಸದಲ್ಲಿ ತೊಡಗಿಸುವುದು ಒಂದು ಪ್ರಾಸಂಗಿಕ, ಗೌಣ ಕೆಲಸ, ಕೇವಲ ಮಹಿಳಾ ಸಂಗಾತಿ ಗಳಿಗೆ ಸಂಬಂಧಪಟ್ಟ ಸಂಗತಿಯೆಂದು ಕಾಣಲಾಗುತ್ತಿದೆ....ಇದು [illegible] ಇದೇ ನಿಜ ವಾದ ಪ್ರಶ್ನೆಯಾದ. ಫೆಮಿನಿಸಂನ ಒಂದು ಅವತಾರ" ಎಂದು ಲೆನಿನ್ ಈ ಮಾರ್ಗಚ್ಯುತಿಯನ್ನು ಖಂಡಿಸಿದ್ದಾರೆ.

-೧೩ನೇ ಮಹಾಧಿವೇಶನ ಕುರಿತ, ಪಿ.ಡಿ.ಸಂಪಾದಕೀಯದಿಂದ(ಜನವರಿ 22,1989)

ಸ್ವತಃ ಎನ್.ಪಿ.ಪಿ.ಯೇ ಹೀಗನ್ನುತ್ತಿದೆ........

ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳೆಯರ ಕುರಿತಾದ ಅಭಿವೃದ್ಧಿ ಯೋಜನೆಗಳನ್ನು ಅಭ್ಯಸಿಸಿದಾಗ ಹಲವು ರೀತಿಯ ಲೋಪ-ದೋಷಗಳನ್ನು ಕಾಣ ಬಹುದಾಗಿದೆ. ಅವುಗಳಲ್ಲಿ ಕೆಲವು-

- ಹೆಣ್ಣು ಮತ್ತು ಗಂಡುಗಳ ಅನುಪಾತದಲ್ಲಿ ಗಣನೀಯ ಸುಧಾರಣೆ ಕಂಡು ಬಂದರೂ ಈ ಶತಮಾನದ ಅಂತ್ಯದಲ್ಲಿ 5 0ಕೋಟಿ ಗಂಡಸರಿಗೆ 48 ಕೋಟಿ ಹೆಂಗಸರ ಪ್ರಮಾಣವಿರುವ ಸಾಧ್ಯತೆಗಳಿವೆ.
- ಅಮ್ನಿಯೋ ಸಿಂಥೆಸಿಸ್‌ನಂತಹ ವೈಜ್ಞಾನಿಕ ಬೆಳವಣಿಗೆಗಳು ಹುಟ್ಟುವ ಮಗುವಿನ ಲಿಂಗ ಪರೀಕ್ಷೆಯಂತಹ ಕೆಟ್ಟ ಪದ್ಧತಿಗೆ ಹಾದಿ ಹಾಕಿಕೊಡುತ್ತಿದ್ದು ಆ ಮೂಲಕ ಹೆಣ್ಣು ಕೂಸು ಹುಟ್ಟುವ ಮೊದಲೇ ಗರ್ಭಪಾತ ಮಾಡಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ.
- 35 ವರ್ಷಗಳೊಳಗೆ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಸಾಯುವುದು ಹೆಚ್ಚಾಗಿದೆ.
- 5 0% ಗರ್ಭಿಣಿಯರು ರಕ್ತ ಹೀನತೆ ಯಿಂದ ನರಳುತ್ತಿದ್ದಾರೆ. 15 -20% ಪ್ರಸವ ಕಾಲದಲ್ಲಿ ಸಾಯುತ್ತಾರೆ.

1981ರ ಜನಗಣತಿ ಪ್ರಕಾರ ಮಹಿಳೆಯರಲ್ಲಿ ವಿದ್ಯಾವಂತರ ಸಂಖ್ಯೆ ಕೇವಲ 24.8% (ಪುರುಷರಲ್ಲಿ 46.9%) 1975 -85 ರಲ್ಲಿ ಮಹಿಳೆಯರಲ್ಲಿ ಹೈಸ್ಕೂಲು ಮಟ್ಟದ ವಿದ್ಯಾಭ್ಯಾಸ ಬಹಳ ಮಟ್ಟಿಗೆ ಸ್ಥಗಿತಗೊಂಡಿದೆ ಎನ್ನಬಹುದು. ವಿಶ್ವವಿದ್ಯಾಲಯ, ತಾಂತ್ರಿಕ ಶಿಕ್ಷಣ ರಂಗದಲ್ಲಿ ತಾರತಮ್ಯ ಇನ್ನೂ ಹೆಚ್ಚು.

- ಉದ್ಯೋಗದ ಕ್ಷೇತ್ರದಲ್ಲೂ ಮಹಿಳೆಯರ ಪ್ರಮಾಣ 1981ರವರೆಗೆ ಗಣನೀಯವಾಗಿ ತಗ್ಗಿತ್ತು. 1981ರಲ್ಲಿ ಸ್ವಲ್ಪ ಮಟ್ಟಿನ ಬೆಳವಣಿಗೆ ಕಂಡು ಬಂತು. 89.5 % ಮಹಿಳೆಯರು (1981ರಲ್ಲಿ) ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿ ದ್ದಾರೆ. ಇದರಲ್ಲಿ 82.83% ಮಹಿಳೆ ಯರು ವ್ಯವಸಾಯ ಮತ್ತಿತರ ಉಪ ಕಸುಬುಗಳಲ್ಲಿದ್ದಾರೆ. ಸಂಘಟಿತ ವಲ ಯದಲ್ಲಿ ಕೇವಲ 13.3% ಸಾರ್ವಜನಿಕ ವಲಯದಲ್ಲಿ 11%, ಸಹಕಾರೀ ವಲಯ ದಲ್ಲಿ 17.8%.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಲ್ಪಟ್ಟ ಮಹಿಳೆಯರ ಸಂಖ್ಯೆ 197೦ದ 1986ರವರೆಗೆ 11.2 ಲಕ್ಷದಿಂದ 5 1 ಲಕ್ಷಕ್ಕೇರಿದೆ.

ಉನ್ನತ ಅಧಿಕಾರಿಗಳಲ್ಲಿ 15 993 ಪುರುಷರಿದ್ದರೆ ಮಹಿಳೆಯರ ಸಂಖ್ಯೆ 994 ಅಖಿಲಭಾರತ ಸೇವೆಗಳಲ್ಲಿ ಮಹಿಳೆ ಯರ ಸಂಖ್ಯೆ 5 .8% ಐ.ಪಿ.ಎಸ್.ನಲ್ಲಿ 2460 ಅಧಿಕಾರಿಗಳಲ್ಲಿ ಮಹಿಳೆಯರು 21% ಐ.ಎ.ಎಸ್. ಅಧಿಕಾರಿಗಳಲ್ಲಿ 4548 ರಲ್ಲಿ 339 ಮಹಿಳೆಯರು. ಮನೆಗೆಲಸ ವಲ್ಲದೆ ಮಹಿಳೆಯರು ಪ್ರತಿದಿನ 6.1ರಿಂದ 7.5 ಗಂಟೆ ಸಂಬಳರಹಿತ ಕೆಲಸ ಮಾಡುತ್ತಾರೆ. ಮನೆಗೆಲಸವಲ್ಲದೆ 12ಗಂಟೆ ವ್ಯವಸಾಯ ಕ್ಷೇತ್ರಗಳಲ್ಲಿ ಕೆಲಸ ಮಾಡು ತ್ತಾರೆ. ನೊಂದಾಯಿಸಿದ ಕಾರ್ಮಿಕ ಸಂಘ ಗಳಲ್ಲಿ ಮಹಿಳೆಯರ ಸಂಖ್ಯೆ ಕೇವಲ 7.5 % ಕಾರ್ಯಕಾರೀ ಮಂಡಳಿ ಸದಸ್ಯೆ ಯರ ಸಂಖ್ಯೆ 10%ಕ್ಕೂ ಕಡಿಮೆ.

- ಚುನಾವಣೆಗಳಲ್ಲಿ ಮಹಿಳಾ ಅಭ್ಯರ್ಥಿ ಗಳ ಸಂಖ್ಯೆ ಇಳಿಮುಖವಾಗುತ್ತಿದೆ ಅಥವಾ ಸ್ಥಗಿತಗೊಂಡಿದೆ. ಆದರೆ ಮತ ಚಲಾಯಿಸುವ ಮಹಿಳೆಯರ ಪ್ರಮಾಣ ಇಳಿದಿಲ್ಲ.
- ಐ.ಆರ್.ಡಿ.ಪಿ. ಯೋಜನೆಯಲ್ಲಿ 30% ಗ್ರಾಮೀಣ ಮಹಿಳೆಯರಿಗೆ ಪ್ರಯೋ ಜನ ಸಿಗಬೇಕೆಂಬ ಗುರಿಯಿತ್ತು. 1986 ರಲ್ಲಿ ನಿಜವಾಗಿ ಸಾಧಿಸಿದ್ದು ಕೇವಲ 13%.

ಅಂತರ್ರಾಷ್ಟ್ರೀಯ ಮಹಿಳಾ ದಶಕದ ನಂತರದ ಪರಿಸ್ಥಿತಿಯ ಅಧ್ಯಯನದಿಂದ ಈ ಅಂಶಗಳು ಕಂಡುಬಂದವು.

1. ಲಿಂಗ ಪ್ರಮಾಣದಲ್ಲಿ ಗಣನೀಯ ಇಳಿತ.
2. ಸರಾಸರಿ ಜೀವಿತಾವಧಿ ಬಹಳ ಕಡಿಮೆ.
3. ಹೆರಿಗೆಯ ಸಮಯದಲ್ಲಿ ಶಿಶು ಮರಣ ಸಂಖ್ಯೆಯಲ್ಲಿ ಹೆಚ್ಚಳ.
4. ಕೆಲಸದಲ್ಲಿ ಪಾಲು ಕಡಿಮೆಗೊಂಡದ್ದು.
5 . ವಿದ್ಯಾಹೀನತೆ.
6. ವಲಸೆಯಲ್ಲಿ ಹೆಚ್ಚಳ.

'ಮಹಿಳಾ ಸ್ಥಾನಮಾನ ಸಮಿತಿ'ಯ ಈ ವರದಿ ಸಂಸತ್ತಿನಲ್ಲಿಯೂ ಸಾಕಷ್ಟು ಗೊಂದಲ ಉಂಟು ಮಾಡಿ ಸಾಕಷ್ಟು ಚರ್ಚೆಯ ನಂತರ ಆರ್ಥಿಕ ಸ್ವಾವಲಂಬನೆ ಇಲ್ಲದೆ ಕೇವಲ ಸಂವಿಧಾನಾತ್ಮಕವಾಗಿ ಹಕ್ಕುಗಳನ್ನು ನೀಡುವುದರಿಂದ ನಿಜ ವಾದ ಅರ್ಥದಲ್ಲಿ ಏನೂ ಸಾಧಿಸಿದಂತಾ ಗುವುದಿಲ್ಲ ಎಂಬ ಅಂಶ ಬೆಳಕಿಗೆ ಬಂತು. ಇದರಿಂದ ಹೊರಬಂದ ಮಹ ತ್ವದ ಸಂಗತಿಯೆಂದರೆ "ರಾಷ್ಟ್ರೀಯ ಕಾರ್ಯ ಯೋಜನೆ" ಈ ಯೋಜನೆಯ "ವಿಶ್ವ ಮಹಿಳಾ ಯೋಜನೆ"ಯ ಸೂತ್ರದನ್ವಯ ಕೆಲಸ ಮಾಡುವಂತೆ ರೂಪಿಸಲಾಯಿತು.

ಹದಿಮೂರನೇ ಮಹಾಧಿವೇಶನದ ಕರೆ

ತಿರುವನಂತಪುರದಲ್ಲಿ ಜರುಗಿದ ಸಿ.ಪಿ.ಐ.(ಎಂ)೧೩ನೇ ಮಹಾಧಿವೇಶನ ಎನ್.ಪಿ.ಪಿ. ಬಗ್ಗೆ ಒಂದು ಪ್ರಸ್ತಾವ ಠರಾವು ಅಂಗೀಕರಿಸಿ ಈ ಯೋಜನೆ ಮಹಿಳೆಯರಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯ ಅಲೆಯನ್ನು ತಡೆಯಲು ಹೂಡಿದ ಸಿನಿಕತನದಿಂದ ಕೂಡಿದ ಕಸರತ್ತು ಎಂದು ಹೇಳಿತು.

ಮಹಿಳಾ ಸಂಘಟನೆಗಳು ಈ ಯೋಜನೆಯ ವಿರುದ್ಧ ಎತ್ತಿದ ಪ್ರಶ್ನೆಗಳನ್ನು ಬೆಂಬಲಿಸಿದ ಮಹಾಧಿವೇಶನ ಸರ್ಕಾರ ಈ ಯೋಜನೆಯನ್ನು ಯೋಜನಾ ಆಯೋಗ ಅಥವಾ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮುಂದಿಡದೆ ಮಹಿಳಾ ಅಭಿವೃದ್ಧಿಯ ಪ್ರಶ್ನೆಯನ್ನು ಅಂಚಿಗೆ ತಳ್ಳಿ, ಅದರ ಮಹತ್ವವನ್ನು ತಗ್ಗಿಸಿದೆ ಎಂದು ಖಂಡಿಸಿದೆ. ಸಾರ್ವತ್ರಿಕವಾಗಿ ಮಹಿಳೆಯರ ಸ್ಥಾನಮಾನ ಹದಗೆಡುತ್ತಿರುವುದು ರಾಷ್ಟ್ರೀಯ ಕಳವಳದ ಪ್ರಶ್ನೆಯಾಗಬೇಕಿತ್ತು. ಆದರೆ ಸರ್ಕಾರ ಅದನ್ನು ಕೇವಲ ಮಹಿಳೆಯರ ಸಾಮಾನ್ಯ ಪ್ರಶ್ನೆಯ ಮಟ್ಟಕ್ಕಿಳಿಸಿದೆ.

ಮಹಿಳೆಯರ ಸಮಾನತೆ ಮತ್ತು ಮಹಿಳೆಯರ ಇತರ ಬೇಡಿಕೆಗಳನ್ನು ಸರ್ವಸಾಮಾನ್ಯ ರಾಜಕೀಯ, ಸಾಮಾಜಿಕ ಹೋರಾಟದ ಭಾಗವಾಗಿ ಎತ್ತಿಕೊಳ್ಳಬೇಕೆಂದು ಮಹಾಧಿವೇಶನ ಎಲ್ಲಾ ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳಿಗೆ ಕರೆ ನೀಡಿತು.

...ಕಣ್ಣೋಟವೋ ಮೇಲೆ ಕಣ್ಣಿಟ್ಟ ತಂತ್ರವೋ

ಗಿವೆ. ಉತ್ತರಗಳೂ ಗೊತ್ತಿವೆ. ಆದರೆ ಅದರ ಜ್ಯಾರಿ ಮಾತ್ರ ಸಮಸ್ಯೆಯ ಅಂಚನ್ನು ತಲುಪಿಲ್ಲ" ಎಂದು ಸರಿಯಾಗಿಯೇ ಗುರುತಿಸುವ ಪಂಚವಾರ್ಷಿಕ ಯೋಜನೆಗಳ ವಿಶೇಷವಾಗಿ 6ನೇ ಯೋಜನೆಯ ನಂತರ ಗ್ರಾಮೀಣ ಮಹಿಳೆಯರನ್ನು ಕುರಿತಾದ-ಕಾರ್ಯಕ್ರಮಗಳ ವಿಫಲತೆಯನ್ನು ಕೂಡಾ ಸರಿಯಾಗಿಯೇ ಗುರುತಿಸುವ ಸರ್ಕಾರದ ಈ ಕರಡು ಯೋಜನೆ ಈ ವಿಫಲತೆಯ ಮೂಲ ಕಾಣಲು ನಿರಾಕರಿಸುತ್ತದೆ. ಇವು ಭಾರತ ಸರ್ಕಾರ ಒಟ್ಟು ದೇಶಕ್ಕೆ ಸಂಬಂಧಪಟ್ಟಂತೆ ಅನುಸರಿಸುತ್ತಾ ಬಂದ ಧೋರಣೆಗಳ ಒಟ್ಟು ಫಲವೇ ಹೊರತು, ಮಹಿಳೆಯರನ್ನು ಕುರಿತಂತೆ ರೂಪಿಸಿದ ನಿರ್ದಿಷ್ಟ ಯೋಜನೆಗಳ ವಿಫಲತೆ ಮಾತ್ರವೇ ಅಲ್ಲ.

ಆಮೇಲೆ ಹೆಚ್ಚಿನ ಉದ್ಯೋಗಾವಕಾಶಗಳ ಮೂಲಕ "ಆರ್ಥಿಕ ಸ್ವಾತಂತ್ರ್ಯ", ಸಂಘಟನೆ ಮತ್ತು ಬೆಂಬಲ ಸೇವಾ-ಸೌಲಭ್ಯಗಳ ಮೂಲಕ "ಸಾಮಾಜಿಕ ಶಕ್ತಿ" ಈ ಎರಡು ಅಂಶಗಳ ಸಮ್ಮಿಳನ ಮಹಿಳಾ ವಿಭಾಗದಲ್ಲಿ ಬೆಳವಣಿಗೆಯ ಅಡಿಗಲ್ಲಾಗಬೇಕು ಎಂದು ಭಾರತ ಸರ್ಕಾರವೇ ಹೇಳಿಕೊಂಡಿತ್ತು. ಆದರೆ ಈ

ಭೂಸುಧಾರಣೆ ಮತ್ತು ಭೂ ವಿತರಣೆಯಲ್ಲಿ ಕಾಂಗ್ರೆಸ್ (ಐ)ನ ಶೋಚನೀಯ ದಾಖಲೆಗಳ ಹಿನ್ನೆಲೆಯಲ್ಲಿ ಭೂಮಿಯ ಜಂಟಿ ಪಟ್ಟಾ ಕೊಡುವ ವಚನ ಕೇವಲ ಒಂದು ಅಪಹಾಸ್ಯ.

ಕರಡು ಕಣ್ಣೋಟದಲ್ಲಿ ಅದು ಕಾಣಿಸುತ್ತಿಲ್ಲ ಮಾತ್ರವಲ್ಲ, ಬದಲಾಗಿ ಈ ಎರಡು ಅಂಶಗಳನ್ನು ಪ್ರತ್ಯೇಕಗೊಳಿಸಲಾಗಿದೆ-ಮಹಿಳಾ ಅಭಿವೃದ್ಧಿ ಕಾರ್ಪೊರೇಷನ್‌ಗಳು ಮತ್ತು ಮಹಿಳಾ ಕಲ್ಯಾಣ ಮಂಡಳಿಗಳ ನಡುವೆ ಜವಾಬ್ದಾರಿಗಳನ್ನು ಹಂಚಿ ಪ್ರತ್ಯೇಕಿಸುವ ಮೂಲಕ.

ಕೇವಲ ಪ್ರಚಾರಕ್ಕಾಗಿ ?

ಈ ಕರಡು ಎನ್.ಪಿ.ಪಿ.ಯನ್ನು ಕೇವಲ ಪ್ರಚಾರದ ದಸ್ತಾವೇಜಿನ ಮಟ್ಟಕ್ಕಿಳಿಸಿ ಅಪ್ರಾಮಾಣಿಕಗೊಳಿಸುವ ಇನ್ನೊಂದು ಮುಖ್ಯ ಅಂಶವೆಂದರೆ ಅದು ಸೂಚಿಸಿದ ಪರಿಹಾರಗಳಿಗೆ ಹೆಚ್ಚಿನ ಹಣ ಮೀಸಲಿಡುವ ಅಗತ್ಯವಿಲ್ಲ ಎಂಬ ಅದರ ಅಭಿಪ್ರಾಯ.

ಈ ಕರಡು ಈ ಶತಮಾನದ ಅಂತ್ಯದೊಳಗೆ ಸಾಧಿಸಬೇಕಾದ ಗುರಿಗಳ ಪಟ್ಟಿ ಮಾಡುತ್ತದೆ. ಇವು ಅತ್ಯಂತ ಆಕರ್ಷಕ ಗುರಿಗಳು. ಮಹಿಳಾ ಅಭಿವೃದ್ಧಿ ಕಾರ್ಪೊರೇಷನ್‌ಗಳು. ತರಬೇತಿಗೆ ರಾಷ್ಟ್ರೀಯ ಅಪೆಕ್ಸ್ ಸಂಘಟನೆ. ಸಚಿವಾಲಯ/ಇಲಾಖೆಗಳಲ್ಲಿ ಮಹಿಳಾ ಸೆಲ್‌ಗಳು! ಆದರೆ ಕರಡು ಎನ್.ಪಿ.ಪಿ. ಪ್ರಕಾರ ಇವು ಯಾವುದಕ್ಕೂ ಹಣದ ಅಗತ್ಯವೇ ಇಲ್ಲ. ಈಗಾಗಲೇ ಆಗಿರುವ ಅನುಭವವೆಂದರೆ ಹಲವು ಯೋಜನೆಗಳಿಗೆ ಮೀಸಲಿಟ್ಟ ಹಣದಲ್ಲಿ 45-50% ಉಸ್ತುವಾರಿ ನೋಡಿಕೊಳ್ಳುವ, ಅವುಗಳನ್ನು ಮಂಜೂರು ಮಾಡುವ ವ್ಯವಸ್ಥೆಗೆ ಖರ್ಚಾಗುತ್ತದೆ. ಒಂದೆಡೆ ಇಂತಹ ಸಂಸ್ಥೆಗಳನ್ನು ಹೆಚ್ಚಿಸುವ ಶಿಫಾರಸು ನೀಡಿ, ಇನ್ನೊಂದೆಡೆ ಹೆಚ್ಚಿನ ಹಣ ಒದಗಿಸುವ ಅಗತ್ಯವಿಲ್ಲವೆಂದರೆ-ಈಗಿರುವ ಸೀಮಿತ ಹಣವನ್ನು ಕೇವಲ ಉಸ್ತುವಾರಿಗಾಗಿ ಬಳಸಿಬಿಟ್ಟು ಆಮೇಲೆ ಆ ಯೋಜನೆಗಳು ಯಾರನ್ನೂ ಅವಶ್ಯಕವಾಗಿ ಮುಟ್ಟಬೇಕಾಗಿತ್ತೋ ಆ ಮಹಿಳೆಯರಿಗೆ ಏನೂ ಇಲ್ಲ, ಉಸ್ತುವಾರಿ ಮಾಡಲು ಸಂಸ್ಥೆಗಳಿವೆ, ಉಸ್ತುವಾರಿ ಮಾಡಬೇಕಾದ ಕೆಲಸವೇ ಇಲ್ಲ!

ಕೇಂದ್ರೀಕರಣದತ್ತ

ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸುವ ವ್ಯವಸ್ಥೆಯ ಬಗ್ಗೆ ಎನ್.ಪಿ.ಪಿ. ಕರಡಿನ ಶಿಫಾರಸುಗಳ ಪ್ರಜಾಪ್ರಭುತ್ವ-ವಿರೋಧಿ ಸ್ವರೂಪ ಮಹಿಳಾ ಸಂಘಟನೆಗಳಿಂದ ತೀವ್ರ ವಿರೋಧಕ್ಕೊಳಗಾಗಿರುವ ಇನ್ನೊಂದು ಅಂಶ.

ಇದುವರೆಗಿನ ವಿಫಲತೆಯ ಕಾರಣಗಳನ್ನು ವಿಶ್ಲೇಷಿಸುವ ಬದಲು, ಯೋಜನಾ ಪ್ರಕ್ರಿಯೆಯನ್ನು ಹೆಚ್ಚೆಚ್ಚು ವಿಕೇಂದ್ರೀಕರಣಗೊಳಿಸಿ ಜನಸಾಮಾನ್ಯರು ಅದರಲ್ಲಿ ಪಾತ್ರ ವಹಿಸುವಂತೆ ಮಾಡಬೇಕೆಂಬ ಸಾರ್ವತ್ರಿಕ ಚರ್ಚೆಗಳನ್ನು ನಿರ್ಲಕ್ಷಿಸಿ ಅಧಿಕಾರಗಳ ಕೇಂದ್ರೀಕರಣದತ್ತ ಎನ್.ಪಿ.ಪಿ. ಒಲವು ತೋರಿದೆ.

ಈ ಬಗ್ಗೆ ಕರಡಿನಲ್ಲೇ ವಿರೋಧಾಭಾಸ ಕಾಣುತ್ತದೆ. ಒಂದೆಡೆ ವಿವಿಧ ಮಹಿಳಾ ಭಿವೃದ್ಧಿ ಯೋಜನೆಗಳ ಜವಾಬ್ದಾರಿಯನ್ನು ಸೂಕ್ತ ಸಂಸ್ಥೆಗಳಿಗೆ, ವಿವಿಧ ಮಟ್ಟದ ಸರ್ಕಾರಗಳಿಗೆ ಹಂಚಬೇಕೆಂದು ಹೇಳಿದರೆ, ಇನ್ನೊಂದೆಡೆ ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿ ಮತ್ತು ದೆಹಲಿಯಲ್ಲಿರುವ ಮಹಿಳಾ ಅಭಿವೃದ್ಧಿ ಕಾರ್ಪೊರೇಷನ್ ಇವೆಲ್ಲವನ್ನು ಜ್ಯಾರಿಗೊಳಿಸಲು ಪ್ರಧಾನ ಸಂಸ್ಥೆಗಳಾಗಬೇಕೆಂದು ಹೇಳುತ್ತದೆ!

ಮಹಿಳೆಯರ ಸಮಸ್ಯೆಗಳ ಸ್ವರೂಪ ಸ್ಥಳದಿಂದ ಸ್ಥಳಕ್ಕೆ ಸನ್ನಿವೇಶದಿಂದ ಸನ್ನಿವೇಶಕ್ಕೆ ಭಿನ್ನವಾಗುತ್ತದೆ. ದೇಶದ ಈ ಅಪಾರ ಭಿನ್ನತೆಯನ್ನು ಗಮನಿಸಿ ಸಂದರ್ಭಕ್ಕೆ ತಕ್ಕಂತೆ ಆಡಳಿತ ಸ್ಪಂದಿಸಬೇಕಾಗುತ್ತದೆ. ಇದು ಕಾಂಗ್ರೆಸ್(ಐ) ಕೂಡಾ ಸ್ವೀಕರಿಸುವ ನಿಲುವು. ಆದರೆ ಎನ್.ಪಿ.ಪಿ.ಗೆ ಇದು ಬೇಕಿಲ್ಲ. ಕೇಂದ್ರೀಯ ಹರಿಜನ-ಗಿರಿಜನ ಆಯುಕ್ತರ ನೇಮಕದಿಂದ ಈ ವಿಭಾಗಗಳ ಮೇಲೆ ನಡೆಯುವ ಅತ್ಯಾಚಾರಗಳು ಕಡಿಮೆಯಾಗಲಿಲ್ಲ, ಅಥವಾ ಅಪರಾಧಿಗಳಿಗೆ ಹೆಚ್ಚಿನ ಶಿಕ್ಷೆಯಾಗಿಲ್ಲ. ಆದ್ದರಿಂದ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಒಬ್ಬ ಆಯುಕ್ತರನ್ನು ನೇಮಿಸಿ ಮಹಿಳೆಯರನ್ನು ದಮನದಿಂದ ರಕ್ಷಿಸಬಹುದು ಎಂದು ಆಶಿಸುವುದು ಶುದ್ಧ ಮೂರ್ಖತನ-ನಮ್ಮ ದೇಶದ ಸಾಮಾಜಿಕ-ಆರ್ಥಿಕ ಸನ್ನಿವೇಶದಲ್ಲಿ.

ನಾಮಕರಣದ ಮೂಲಕ ವಿಧಾನ ಮಂಡಲಗಳು, ಸಂಸತ್ತು ಮತ್ತು ಇತರ ಆಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ



30% ಮೀಸಲಾತಿ ನೀಡಬೇಕೆಂಬ ಅದರ ಶಿಫಾರಸು ಕೂಡಾ ಅಧಿಕಾರಿಗಳ ಕೇಂದ್ರೀಕರಣದತ್ತ ಕೇಂದ್ರ ಸರ್ಕಾರದ ಪ್ರಯತ್ನಗಳ ಒಂದು ಭಾಗ.

ಅಪಾಯಕಾರಿ ಶಿಫಾರಸುಗಳು

ದೇಶದ ರಾಜಕೀಯ ಪ್ರತಿಕ್ರಿಯೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚಿಸುವ ಅಗತ್ಯ ಬಹಳವಿದೆ. ಆದರೆ ಕೇಂದ್ರ ಸರ್ಕಾರ ನಾಮಕರಣದ ಮೂಲಕ ಈ ಸಮಸ್ಯೆ ಪರಿಹರಿಸುವ ಸೂಚನೆ ಅತ್ಯಂತ ಅಪಾಯಕಾರಿ ಮತ್ತು ಸಂವಿಧಾನ ಬಾಹಿರ. ಇದುವರೆಗೆ ತನ್ನ 'ವೋಟು ಬ್ಯಾಂಕು'ಗಳಾಗಿದ್ದ ಜನವಿಭಾಗಗಳಿಂದಲೂ ವಿರೋಧ ಎದುರಿಸುತ್ತಿರುವ ಕಾಂಗ್ರೆಸ್(ಐ) ಮೀಸಲಾತಿ ಹೆಸರಿನಲ್ಲಿ, ಮಹಿಳೆಯರ ಹೆಸರಿನಲ್ಲಿ ತನ್ನ ಹಿಡಿತವನ್ನು ಹೇರಲು ಈ ಉಪಾಯ ಹೂಡಿದೆ ಎಂಬುದು ನಿಸ್ಸಂಶಯ. ಈ ಶಿಫಾರಸು ಮಹಿಳೆಯರು ರಾಜಕೀಯ ಪ್ರತಿಕ್ರಿಯೆಯಲ್ಲಿ ಹೆಚ್ಚೆಚ್ಚು ಭಾಗವಹಿಸಲು ಅವಕಾಶ ನೀಡುವ ಬದಲು ಬಹು ಪಾಲು ಮಹಿಳೆಯರನ್ನು ಪ್ರತಿನಿಧಿಸಲಾರದ ಪಟ್ಟಭದ್ರ ಹಿತಾಸಕ್ತಿಗಳಿಗೆ ಅವಕಾಶ ನೀಡಬಹುದಷ್ಟೆ. ಚುನಾವಣೆಗಳಿಲ್ಲದೆ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗ ವಹಿಸುವಿಕೆಯೆಂಬುದು ಕೇವಲ ವಂಚನೆ. ಮಹಿಳಾ ಕಾರ್ಮಿಕರಲ್ಲಿ 90%ದಷ್ಟು ಅಸಂಘಟಿತ ಕೈಗಾರಿಕೆಗಳಲ್ಲಿ ಇರುವುದರಿಂದ ಆ ವಲಯಕ್ಕೆ ಹೆಚ್ಚಿನ ಪ್ರೋತ್ಸಾಹ ತೋರಬೇಕು. ಹೇಗೆ ತೋರಬೇಕು ಎಂದು ಮಾತ್ರ ಎನ್.ಪಿ.ಪಿ. ಕರಡು ಹೇಳುವುದಿಲ್ಲ. ಈ ಪ್ರೋತ್ಸಾಹ ಹೇಗಿರಬಲ್ಲದು ಎಂಬುದಕ್ಕೆ ಒಂದು ಉದಾಹರಣೆಗೆ ನೋಡಬಹುದು. ರಫ್ತು ಹೆಚ್ಚಿಸಲು ಸರ್ಕಾರ "ರಫ್ತು ಪ್ರೋತ್ಸಾಹ ವಲಯ"ದಲ್ಲಿ ಮಾಲೀಕರಿಗೆ ಒದಗಿಸಿದ ಮುಖ್ಯ ಪ್ರೋತ್ಸಾಹವೆಂದರೆ ಕನಿಷ್ಠ ಕೂಲಿ ಕಾನೂನು ಅವರು ಪಾಲಿಸಬೇಕಾಗಿಲ್ಲ! ಇತ್ತೀಚೆಗೆ ಆಸ್ಪತ್ರೆ ಮತ್ತಿತರ ಸಂಸ್ಥೆಗಳ ಮಸೂದೆ ಖಾದಿ ಮತ್ತು ಗ್ರಾಮೋದ್ಯೋಗಗಳಲ್ಲಿ, ಇತರ ಕಲ್ಯಾಣ ಸಂಘಟನೆಗಳಲ್ಲಿ ಕಾರ್ಮಿಕ ರಿಗೆ ಲೇಬರ್ ಕಾನೂನುಗಳ ರಕ್ಷಣೆಯನ್ನು ನಿರಾಕರಿಸಿದೆ. ಈ ಅನುಭವದಿಂದ ಪಾಠ ಕಲಿಯುವುದಾದರೆ "ಅಸಂಘಟಿತ ವಲಯಕ್ಕೆ ಹೆಚ್ಚಿನ ಪ್ರೋತ್ಸಾಹ" ಎಂದರೆ ಅದು ಶೋಷಿತ ಮಹಿಳಾ ಕಾರ್ಮಿಕರ ಪರವಾಗಿ ಇರಲು ಸಾಧ್ಯವಿಲ್ಲ ಎಂಬುದು ಸ್ಪಷ್ಟ. "ಸ್ವಉದ್ಯೋಗಿ ಮಹಿಳೆಯರ ಕುರಿತು ರಾಷ್ಟ್ರೀಯ ಆಯೋಗದ ವರದಿ

ಮಹಿಳಾ ಕಾರ್ಮಿಕರಿಗೆ ಪಟ್ಟಭದ್ರ ಹಿತಾಸಕ್ತಿಗಳಿಂದ ರಕ್ಷಣೆ ಇಲ್ಲ ಎಂದು ಗಮನಿಸಿದೆ. ಇಂತಹ ವಲಯಕ್ಕೇ ಮಹಿಳಾ ಅಭಿವೃದ್ಧಿಯ ಹೆಸರಿನಲ್ಲಿ ಇನ್ನಷ್ಟು ಪ್ರೋತ್ಸಾಹ!

ಎದುರಿಸುತ್ತಿರುವ ಬಿಕ್ಕಟ್ಟಿನ ಬಗೆ ಅರಿವೇ ಇಲ್ಲದೆ, ಕ್ಲಿಷ್ಟ ಸಮಸ್ಯೆಗಳಿಗೆ ಬೇಗನೇ ಪರಿಹಾರ ಕಾಣುವ ಪ್ರಯತ್ನ-ಇದು ಎನ್.ಪಿ.ಪಿ.ಯ ಕರಡಿನ ಅಧ್ಯಯನ ಮಾಡಿದಾಗ ಕಂಡು ಬರುವ ಪ್ರಮುಖ ನಿರುದ್ಯೋಗ, ಅಸಮಾನತೆ, ಅಡಿಯಾಳುತನ ಶಕ್ತಿಶಾಲೀ ಪಟ್ಟಭದ್ರ ಹಿತಾಸಕ್ತಿಗಳಿಂದ ವಿರೋಧ-ಈ ಎಲ್ಲ ಕೇಂದ್ರದಿಂದ ಕೆಲಸ ಮಾಡುವ ಒಂದು ತರಬೇತಿ ಸಂಸ್ಥೆ. ಕೆಲವು ಉಚ್ಚ ಅಧಿಕಾರಿಗಳ ನೇಮಕ, ಶಾಸಕಾಂಗಗಳಲ್ಲಿ ಕೆಲವು ಮಹಿಳೆಯರನ್ನು ಸರ್ಕಾರ ನೇಮಿಸುವುದರಿಂದ ಪರಿಹರಿಸಬಹುದೆಂದು ನಂಬುವಂತೆ ಕಾಣುತ್ತದೆ. ಬಹುಶಃ ಭಾರತದ ಮಹಿಳೆಯರನ್ನು ಹಾಗೆಂದು ನಂಬಿಸಲು

ದೇಶ ಎಲ್ಲಾ ರಂಗಗಳಲ್ಲೂ ಪ್ರಯತ್ನಿಸುತ್ತಿದೆ ಎಂಬುದೇ ಸೂಕ್ತ.

ಜನವಾದೀ ಮಹಿಳೆಯರ ಒತ್ತಾಯ

ಕೇಂದ್ರ ಸರ್ಕಾರ ತನ್ನ ಮಹಿಳೆಯರ ಕುರಿತಾದ ರಾಷ್ಟ್ರೀಯ ಯೋಜನಾ ಕಣ್ಣೋಟ ಕರಡನ್ನು ತರಾತುರಿಯಿಂದ ಸಂಸತ್ತಿನಲ್ಲಿ ಅಂಗೀಕರಿಸುವ ಪ್ರಯತ್ನವನ್ನು ತಮ್ಮ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿ ವಿಫಲಗೊಳಿಸಿದ ಏಳು ರಾಷ್ಟ್ರಮಟ್ಟದ ಮಹಿಳಾ ಸಂಘಟನೆಗಳು ನವದೆಹಲಿಯಲ್ಲಿ ಆಗಸ್ಟ್ 22-23ರಂದು ಒಂದು ಸಮಾವೇಶ ನಡೆಸಿ ಎನ್.ಪಿ.ಪಿ. ಬಗ್ಗೆ ರಾಷ್ಟ್ರೀಯ ಚರ್ಚೆ ಆರಂಭಿಸಿದವು. ಈ ಸಮಾವೇಶದಲ್ಲಿ ಕೇಳಿಬಂದ ಮುಖ್ಯ ಒತ್ತಾಯಗಳು ಹೀಗಿದ್ದವು.

- ಭಾರತ ಸರ್ಕಾರದ ಒಟ್ಟಾರೆ ಧೋರಣೆಗಳಿಂದ ಪ್ರತ್ಯೇಕವಾಗಿ ಮಹಿಳೆಯರ ಸಮಸ್ಯೆಗಳನ್ನು ಕಾಣುವ ನಿಲುವು ಬಿಡಬೇಕು.
- ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಜ್ಯಾರಿಗೆ ಕೇಂದ್ರದಿಂದ ಪಂಚಾಯತ್ ಮಟ್ಟದವರೆಗೆ ವಿಕೇಂದ್ರೀಕೃತ ವ್ಯವಸ್ಥೆ. ರಾಷ್ಟ್ರಮಟ್ಟದಲ್ಲಿ ಮಹಿಳೆಯರ ಕುರಿತು ರಾಷ್ಟ್ರೀಯ ಆಯೋಗದ ರಚನೆ. ಜಿಲ್ಲಾ ಮಟ್ಟದವರೆಗೆ ಅದರ ಘಟಕಗಳು. ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಸಲಹಾ ಸಮಿತಿಗಳು.
- ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಹೆಚ್ಚಿಸಲು ತೀವ್ರಗಾಮೀ ಭೂಸುಧಾರಣೆ, ಮಹಿಳೆಯರಿಗೆ ಪಟ್ಟಾ ದೊರೆಯುವಂತೆ ಮಾಡಬೇಕು.
- ಒಟ್ಟು ಉದ್ದಿಮೆ ರಂಗದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶ ಒದಗಿಸುವ ನೀತಿಯ ಬದಲು ಅಸಂಘಟಿತ ವಲಯಕ್ಕೇ ಹೆಚ್ಚು ಪ್ರೋತ್ಸಾಹ ನೀಡುವ ನಿಲುವು ಬಿಡಬೇಕು. ಮುಖ್ಯವಾಗಿ ಗ್ರಾಮೀಣ ಮಹಿಳೆಯರಿಗೆ ಜವಳಿ ಉದ್ದಿಮೆ, ಹೈನುಗಾರಿಕೆ, ಗುಡಿ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ನಿರ್ಮಿಸಬೇಕು.
- ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು.
- ಎನ್.ಪಿ.ಪಿ.ಯ ಕರಡನ್ನು ಎಲ್ಲಾ ಭಾಷೆಗಳಿಗೆ ಅನುವಾದ ಮಾಡಿ, ಸಂಸತ್ತಿನಲ್ಲಿ ಮಂಡಿಸುವ ಮೊದಲು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಅದರ ಚರ್ಚೆಯಾಗಬೇಕು.
- ಮಕ್ಕಳ ಪಾಲನೆ ಎಂಟನೇ ಯೋಜನೆಯ ಕನಿಷ್ಟ ಆವಶ್ಯಕತೆ ಕಾರ್ಯಕ್ರಮದಲ್ಲಿ ಸೇರಬೇಕು.
- ಪುಕ್ಕಟೆ, ಕಡ್ಡಾಯ ಪ್ರಾಥಮಿಕ ಶಿಕ್ಷಣ ನಿರ್ದಿಷ್ಟ ಅವಧಿಯೊಳಗೆ ಜ್ಯಾರಿಯಾಗಬೇಕು.
- ಮಹಿಳೆಯರ ರಕ್ಷಣೆಯ ಕಾನೂನುಗಳ ಜ್ಯಾರಿ ಮತ್ತು ವಿವಿಧ ಮಟ್ಟದ ಯೋಜನಾ ಪ್ರಕ್ರಿಯೆಯಲ್ಲಿ ಮಹಿಳಾ ಸಂಘಟನೆಗಳಿಗೆ ಮಾನ್ಯತೆ.
- ಆಸ್ಪತ್ರೆ ಮತ್ತಿತರ ಸಂಸ್ಥೆಗಳ ಮಸೂದೆ, ಕೈಗಾರಿಕಾ ವಿವಾದ ಕಾರ್ಮಿಕ ಸಂಘಗಳ ಕಾನೂನುಗಳ ತಿದ್ದುಪಡಿ ಮಸೂದೆ ಇವೆಲ್ಲಾ ಕಾರ್ಮಿಕ-ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಮಸೂದೆಗಳನ್ನು ರದ್ದು ಮಾಡಬೇಕು.

ರಾಮಬಾಣದಲ್ಲಿ-ಚುನಾವಣಾ ದಾಳ

ಪಣಕ್ಕಿರುವ ಅಂಶ ಬಹಳ ದೊಡ್ಡದು-ಅವರಿಗೂ, ನಮಗೂ. ಅವರಿಗೆ-ಕೇಂದ್ರ ಸರ್ಕಾರ-ಅತ್ಯಂತ ದೊಡ್ಡ ಚುನಾವಣಾ ತೀರ್ಪು ಪಡೆದ ನಂತರದ ನಾಲ್ಕು ವರ್ಷಗಳಲ್ಲಿ ... ಬದಲಾಗಿದೆ. ಕಳೆದ ಬಾರಿ ಮತನೀಡಿ ಅಧಿಕಾರಕ್ಕೆ ತಂದವರಿಂದ ಬಹು ದೂರ ಹೋಗಿದೆ. ಈ ದೂರ ದಿನೇ-ದಿನೇ ಹೆಚ್ಚುತ್ತಿದೆ. ಮುಂದಿನ ಚುನಾವಣೆಗಳಲ್ಲಿ ಸೋಲಿನ ಭಯ ವಾಸ್ತವವಾಗುತ್ತಿದೆ.

ನಮಗೆ-ಬದಲಾವಣೆಗೆ ಬದ್ಧರಾದ ಮಹಿಳಾ ಸಂಘಟನೆಗಳಿಗೆ ನಮ್ಮ ಕೆಲಸ, ನಮ್ಮ ಹಕ್ಕುಗಳು, ನಮ್ಮ ಘನತೆಯ ಮೇಲೆ ಅಭೂತಪೂರ್ವ ಸರ್ವವ್ಯಾಪೀ ಹಲ್ಲೆಗಳ ನಾಲ್ಕು ವರ್ಷ. ಕೆಲವೊಮ್ಮೆ ಧರ್ಮದ ಹೆಸರಿನಲ್ಲಿ, ಸಂಪ್ರದಾಯದ ಹೆಸರಿನಲ್ಲಿ, ಆಧುನೀಕರಣದ ಹೆಸರಿನಲ್ಲಿ. ಇವೆಲ್ಲಾ ಹಲ್ಲೆಗಳ ಒಂದು ಸಾಮಾನ್ಯ ಅಂಶವೆಂದರೆ ಸರ್ಕಾರದ ಪಾತ್ರ- ನಾವು ಗಳಿಸಿದ ಅತ್ಯಲ್ಪ ಸಾಧನೆಗಳನ್ನೂ ಅಳಿಸಿ ಹಾಕುವಲ್ಲಿ ಅದರ ಶಾಮೀಲು.

ಅವರಿಗೆ- ತಮ್ಮ ಹಳೆಯ ದಾಖಲೆಗಳಿಗೆ ಬಣ್ಣ ಬಳಿಯುವ, ಹುಸಿ ಭರವಸೆ ನೀಡುವ, ಹೊಸದೆಂದು ಅನಿಸುವ ಕ್ರಮ, ಆರಂಭಿಸುವ ಸಮಯ.

ನಮಗೆ- ವಾಸ್ತವತೆಯನ್ನು ಪರಿಶೀಲಿಸುವ, ಐಕ್ಯತೆ ಬಲಪಡಿಸುವ, ನಮ್ಮ ಗುರಿಗಳನ್ನು ಸ್ಪಷ್ಟಗೊಳಿಸಿಕೊಳ್ಳುವ ಸಮಯ.

ಈ ಹಿನ್ನೆಲೆಯಲ್ಲಿ ಆಳುವ ಪಕ್ಷ ಸರ್ಕಾರೀ ಸಮೂಹ ಮಾಧ್ಯಮಗಳ ಮೂಲಕ ಎನ್.ಪಿ.ಪಿ. ಎಲ್ಲಾ ಸಮಸ್ಯೆಗಳಿಗೆ ರಾಮಬಾಣ ಎಂದು ಪ್ರಚಾರ ಪಡಿಸುವ ಯಾವ ಅವಕಾಶವನ್ನೂ ಬಿಡುತ್ತಿಲ್ಲ. ತಾನೇ ಸೃಷ್ಟಿಸಿದ ಸ್ಥಿತಿಯನ್ನು, ಅಂದರೆ ಮಹಿಳೆಯರ ಶೋಚನೀಯ ಸ್ಥಿತಿಯನ್ನೇ ಈಗ ಚುನಾವಣಾ ವೇದಿಕೆಯಾಗಿ ಬಳಸಿಕೊಳ್ಳುವ ಆ... ವರ್ಗದ ಸಿನಿಕತನಕ್ಕೆ ಮೇರೆಯೇ ಇಲ್ಲ.

ಎನ್.ಪಿ.ಪಿ.ಯ ಉದ್ದೇಶ ಮಹಿಳೆಯರತ್ತ ಎಸೆದಿರುವ ಚುನಾವಣಾ ಗಾಳವಲ್ಲದೆ ಮತ್ತೇನೂ ಅಲ್ಲ ಎಂಬುದು ಈಗ ಸ್ಪಷ್ಟ. ಆದ್ದರಿಂದಲೇ ಮಹಿಳಾ ಸಂಘಟನೆಗಳೊಂದಿಗೆ ಹೆಸರಿಗಾದರೂ ಮಾತುಕತೆ ನಡೆಸದೆ ಸಂಸತ್ತಿನಲ್ಲಿ ಅದನ್ನು ಪಾಸು ಮಾಡಿಸಿಕೊಳ್ಳುವ ತರಾತುರಿ.

ಎ.ಐ.ಡಿ.ಡಬ್ಲ್ಯು.ಎ. ಪತ್ರಿಕೆಯ 'ಇಕ್ವಾಲಿಟಿ' ಸಂಪಾದಕೀಯದಿಂದ

ಗೌರವ ಶಿಕ್ಷಕರ ಅಗೌರವ ಸ್ಥಿತಿ

ಸಾವಿರದಿಂದ ಲಕ್ಷಗಳವರೆಗೆ ಕ್ಯಾಪಿಟೇಶನ್ ಡೊನೇಷನ್ ಪಡೆದು ಶಿಕ್ಷಣವನ್ನ ವ್ಯಾಪಾರೀಕರಣಗೊಂಡು ಪ್ರತಿಷ್ಠಿತ ಶ್ರೀಮಂತ ವರ್ಗಕ್ಕೆ ಶಿಕ್ಷಣ ಸೀಮಿತಗೊಳ್ಳುತ್ತಿರುವ ಈ ಕಾಲದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಜಾತಿ-ಕೋಮುಗಳ ಆಧಾರದಲ್ಲಿ ಶಾಲಾ-ಕಾಲೇಜುಗಳನ್ನು ತೆರೆಯಲು ಬೇಕಾದಷ್ಟು ಹೂವಸೂರಿಗೆ ಅನುಮತಿ ನೀಡುವ ಸರ್ಕಾರದ ನೀತಿವೊಂದೆಡೆಯಾದರೆ ಸರ್ಕಾರಿಶಾಲೆ-ಕಾಲೇಜುಗಳಲ್ಲಿ ಸೇವಾ ಸೌಲಭ್ಯಗಳನ್ನು ಕ್ರಮೇಣವಾಗಿ ಕಡಿತಗೊಳಿಸಿ ನಿರ್ಗತಿಕ ಸ್ಥಿತಿಗೆ ದೂಡುತ್ತಿರುವುದು ಮತ್ತೊಂದೆಡೆ. ಸರ್ಕಾರಿ ಶಾಲೆ ಕಾಲೇಜುಗಳಿಗೆ ಕಟ್ಟಡದ ದುರಸ್ತಿ ಪ್ರಯೋಗಶಾಲೆ ಪಿಠೋಪಕರಣಗಳಿಗಂತೂ ಸರ್ಕಾರಿ ಬೊಕ್ಕಸ ಖಾಲಿಯಾಗಿದೆ. ಶಿಕ್ಷಕರ ಸ್ಥಿತಿ ಕೇಳುವವರಿಲ್ಲದಾಗಿದೆ. ಒಂದು ಅಂದಾಜಿನ ಪ್ರಕಾರ ಏಕೋಪಾಧ್ಯಾಯರಿರುವ ಶಾಲೆಗಳು ರಾಜ್ಯದಲ್ಲಿ ಹೆಚ್ಚು. ಮತ್ತೊಬ್ಬ ಶಿಕ್ಷಕರನ್ನು ನೇಮಿಸದೇ ಆದರೆ 16ರಿಂದ 20 ಸಾವಿರ ಶಿಕ್ಷಕರಿಗೆ ಸರ್ಕಾರ ಉದ್ಯೋಗ ನೀಡಬೇಕು. ಆದರೆ ನಿಜ ಪರಿಸ್ಥಿತಿ ಏನು ಇದಕ್ಕೊಂದು ಉದಾಹರಣೆ ಇಲ್ಲದೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನಲ್ಲಿ ಖಾಲಿ ಇದ್ದ ಶಿಕ್ಷಕರ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಲು ನಿರ್ಧರಿಸಿ ನೇಮಕ ಮಾಡಿಕೊಂಡಿತು. ಈ ಹುದ್ದೆಗೆ ವಿಶೇಷವಾದ ಸ್ಥಾನಮಾನ ಕಲ್ಪಿಸಿತು. ಗೌರವಶಿಕ್ಷಕರೆಂಬ ನಾಮಾಂಕಿತ ಹೊತ್ತು ತಾವು ಧಾರೆಯೆರೆವ ಶಿಕ್ಷಣಕ್ಕೆ ಅವರು ಪಡೆಯುವ ಸಂಬಳವೆಷ್ಟು ಗೊತ್ತೇ ಕೇವಲ 25 ರೂ.ಗಳು. ಇಷ್ಟೆಲ್ಲಾ ಕಷ್ಟಕಾರ್ಪಣ್ಯಗಳನ್ನೆದುರಿಸಿ ದುಡಿದ ಶಿಕ್ಷಕರ ಮಾರ್ಚ್ ತಿಂಗಳಿಂದ ಕೆಲಸಕ್ಕೆ ಬೇಡ! ಹೇಗಿದೆ ನಮ್ಮ ಘನ ಸರ್ಕಾರದ ಶಿಕ್ಷಣನೀತಿ.

ಕಳೆದ ಫೆಬ್ರವರಿ 3 ರಂದು ಹೊಸಪೇಟೆ ತಾಲ್ಲೂಕಿನ ಗೌರವ ಧನ ಶಿಕ್ಷಕರು ಸಭೆ ಸೇರಿ ತಮ್ಮ ಅಳಲನ್ನು ತೋಡಿಕೊಂಡ ರೀತಿ ಇದು. ಜಿಲ್ಲಾ ಗೌರವಧನ ಶಿಕ್ಷಕರ ಅಧ್ಯಕ್ಷ ಶ್ರೀಯುತ ವೈ. ಭೀಮಸೇನಾಚಾರ್‌ರವರು ಶಿಕ್ಷಕರ ಬಲಿಷ್ಠ ಸಂಘಟನೆ ಹಕ್ಕಿಗಾಗಿ ಹೋರಾಟಕ್ಕೆ ಕರೆ ನೀಡಿದರು. ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ದೇಶ್ವರ ಜಿಲ್ಲಾ ಪರಿಷತ್ ನೌಕರರ ಸಂಘದ ತಾಯಪ್ಪ, ಪ್ರಾಥಮಿಕ ಶಿಕ್ಷಕರ ಸಂಘದ ಕೃಷ್ಣಸ್ವಾಮಿ, ಸೈಫೆಂಡರಿ ನೌಕರ ಸಂಘದ ಜಂಬಯ್ಯ ನಾಯಕರವರು ಶಿಕ್ಷಕರ ಹೋರಾಟಕ್ಕೆ ತಮ್ಮ ಸಂಘಗಳ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಸಂಘದ ಶ್ರೀಯುತ ಎಸ್. ಅಶೋಕರವರು ಮೊದಲಿಗೆ ಎಲ್ಲರನ್ನು ಸ್ವಾಗತಿಸಿ ಶಿಕ್ಷಕರ ಸಮಸ್ಯೆ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದರು. ಶಿಕ್ಷಕರ ಸಂಘ ರೂಪಿಸುವ ಹೋರಾಟಕ್ಕೆ ಎಲ್ಲಾ ಹಂತದಲ್ಲೂ ನಿಂತು ಬೆಂಬಲಿಸುವುದಾಗಿ ಭಾಗವಹಿಸಿದ್ದ ಎಲ್ಲಾ ಸಹೋದರ ಸಂಘಗಳು ಆಶ್ವಾಸನೆ ನೀಡಿದವು. ಸಭೆಯಲ್ಲಿ ನೂತನ ಸಮಿತಿಯೊಂದನ್ನು ರಚಿಸಲಾಯಿತು.

ಸಂಘದ ಸಂಚಾಲಕರಾಗಿ ಎಸ್. ಅಶೋಕರವರನ್ನು ಹಾಗೂ ಸಹಸಂಚಾಲಕರಾಗಿ 6 ಮಂದಿಯನ್ನೊಳಗೊಂಡ 21 ಜನರ ಸಮಿತಿಯನ್ನು ರಚಿಸಲಾಯಿತು.

ರಾಮದುರ್ಗ ಚಾಲಕರ ಪ್ರದರ್ಶನ

ಬೆಳಗಾಂ ಜಿಲ್ಲೆಯ ರಾಮದುರ್ಗದ ಲಾರಿ, ಟ್ಯಾಕ್ಸಿ, ಟೆಂಪೋ, ಕಾರು ಚಾಲಕರು ಮತ್ತು ಸಹಾಯಕರು ಪಗಾರ ಮತ್ತು ತುಟ್ಟಿಭತ್ಯೆ ಹೆಚ್ಚಳಬೇಕೆಂದು ಹಾಗೂ ಕೆಲಸದ ಭದ್ರತೆ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಫೆಬ್ರವರಿ 6 ರಂದು ಆಕರ್ಷಕ ಮೆರವಣಿಗೆಯೊಂದನ್ನು ನಡೆಸಿದರು. ಕೆಂಬಾವುಟ ಹಿಡಿದು ಹೊರಟ ಮೆರವಣಿಗೆಯನ್ನು ರಾಮದುರ್ಗದ ಜನತೆ ಕುತೂಹಲದಿಂದ ವೀಕ್ಷಿಸಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಸಂಘದ ಅಧ್ಯಕ್ಷ ಕಾ॥ ವಿ.ಪಿ. ಕುಲಕರ್ಣಿ ಮಾತನಾಡಿದರು. ಬೇಡಿಗಳ ಮನವಿ ಪತ್ರವನ್ನು ತಹಸೀಲ್ದಾರ್‌ರವರಿಗೆ ಅರ್ಪಿಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಸಂಘದ ಕಾರ್ಯದರ್ಶಿ ಕಾ॥ ಪ್ರಕಾಶ ಮುನವಳ್ಳಿ, ದಿದಾಬಣ್ಣ, ಮುಲ್ಲಾ ಮುಂತಾದವರು ವಹಿಸಿದ್ದರು.

ಕೂಲಿ ಹೆಚ್ಚಳಕ್ಕಾಗಿ ನೇಕಾರರ ಸತ್ಯಾಗ್ರಹ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರ ಕೂಲಿಯನ್ನು ಶೇ. 30ರಷ್ಟು ಹೆಚ್ಚಿಸಬೇಕೆಂದು ಒತ್ತಾಯಿಸಿ ರಾಣೆಬೆನ್ನೂರು ನೇಕಾರರ ನಿಗಮದ ಸ್ಥಳೀಯ ಕಛೇರಿ ಎದುರು ಸಿ.ಐ.ಟಿ.ಯು. ನೇಕಾರ ಕಾರ್ಮಿಕ ಸಂಘ ಫೆಬ್ರವರಿ 23ರಂದು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿತು.

ಕೂಲಿ ಹೆಚ್ಚಳಕ್ಕಾಗಿ ತಮ್ಮ ಬೇಡಿಕೆ ಪಟ್ಟಿ ಸಲ್ಲಿಸಿ ಒಂದು ವರ್ಷವಾದರೂ ಆಡಳಿತ ವರ್ಗ ಮಾತುಕತೆ ನಡೆಸದಿರುವುದನ್ನು ಪ್ರತಿಭಟಿಸಿರುವ ಈ ಕಾರ್ಮಿಕರು ಇದೇ ಬೇಡಿಕೆ ಒತ್ತಾಯಿಸಿ ಹೋರಾಟ ನಡೆಸುತ್ತಿರುವ ಬಿಜಾಪುರ ನೇಕಾರರಿಗೆ ಬೆಂಬಲ ವ್ಯಕ್ತಪಡಿಸಿದೆ. ಮಹಿಳೆಯರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಈ ಧರಣಿಗೆ ಮೊದಲು ರಾಣೆಬೆನ್ನೂರಿನ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಸಂಘದ ಅಧ್ಯಕ್ಷ ಕಾ॥ ನಿತ್ಯಾನಂದಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಾ॥ ಎಸ್.ಎಫ್.ಕ್ಯಾದಗಿ ಸಹ ಕಾರ್ಯದರ್ಶಿ ಬಸವರಾಜ ಅಕಡಕರ ಮಾತನಾಡಿ ಆಡಳಿತ ವರ್ಗದ ನಿರ್ಲಕ್ಷ್ಯತನ ಧೋರಣೆ ಖಂಡಿಸಿದರು. ಇದೇ ಬೇಡಿಕೆ ಒತ್ತಾಯಿಸಿ ಈ ಹಿಂದೆ ಬೆಂಗಳೂರಿಗೆ ಜಾಥ ಬಂದು 'ಬೆಂಗಳೂರು ಚಲೋ' ನಡೆಸಿ ನಿಗಮದ ಕೇಂದ್ರ ಕಛೇರಿ ಎದುರು ಮತ ಪ್ರದರ್ಶನ ನಡೆಸಿರುವುದನ್ನು ಮನವಿಯಲ್ಲಿ ತಿಳಿಸಿ ಬಹಿರಂಗ ಸಭೆ ನಂತರ ನಿಗಮದ ಆಡಳಿತಾಧಿಕಾರಿ ಹಾಗೂ ತಾಲ್ಲೂಕು ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು. ಈ ಬೇಡಿಕೆಗಳ ಕುರಿತು ಕೂಡಲೇ ಕ್ರಮ ಕೈಗೊಂಡು ಇತ್ಯರ್ಥ ಮಾಡದಿದ್ದರೆ ನೇಕಾರರು ಅನಿವಾರ್ಯದಿಂದ ಮುಂದಿನ ಚಳುವಳಿಗೆ ಧುಮುಕಬೇಕಾಗುತ್ತದೆ ಎಂದು ಸಂಘದ ಅಧ್ಯಕ್ಷ ಕಾ॥ ನಿತ್ಯಾನಂದಸ್ವಾಮಿ ಎಚ್ಚರಿಸಿದ್ದಾರೆ.

ನಾಯಕರ ಮೇಲೆ ಗೂಂಡಾ ಹಲ್ಲೆ ಖಂಡನೆ

ಇತ್ತೀಚೆಗೆ ಶಿವಮೊಗ್ಗದಲ್ಲಿ ಹಮಾಲಿ ಕಾರ್ಮಿಕ ಸಂಘದ ಮುಖಂಡರ ಮೇಲೆ ಗೂಂಡಾಗಳು ತೀವ್ರ ರೀತಿಯ ಹಲ್ಲೆ ನಡೆಸಿರುವುದನ್ನು ಹರಿಹರದ ಸಮನ್ವಯ ಸಮಿತಿಯ ಸಂಚಾಲಕ ಕಾ॥ ನಿತ್ಯಾನಂದ ಸ್ವಾಮಿ ಖಂಡಿಸಿದ್ದಾರೆ. ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಂಡು ಸೂಕ್ತ ರಕ್ಷಣೆ ನೀಡಬೇಕೆಂದು ಸಮಿತಿಯು ಸರ್ಕಾರವನ್ನು ಒತ್ತಾಯಿಸಿದೆ.

ವಿದ್ಯುತ್ ಸೌಲಭ್ಯಕ್ಕೆ ಸಿ.ಪಿ.ಐ.(ಎಂ) ಒತ್ತಾಯ

ಬಂಟ್ವಾಳ ತಾಲ್ಲೂಕಿನ ನರಿಕೊಂಬು ಗ್ರಾಮ ಸಿನ್ನಿಪದ್ದು ಹರಿಜನ ಕಾಲೋನಿ ಮತ್ತು ಶಂಭೂರು ಗ್ರಾಮದ ಬೈಪಾಡಿಗೆ ವಿದ್ಯುತ್ ಲೈನು ಹಾಕಬೇಕೆಂದು ಸಿ.ಪಿ.ಐ.(ಎಂ) ತಾಲ್ಲೂಕು ಸಮಿತಿ ಒತ್ತಾಯಿಸಿದೆ.

ಈ ಹಿಂದುಳಿದ ಪ್ರದೇಶದ ರೈತರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಬೇಸಾಯಗಾರರ ಕೃಷಿಗೆ ಪಂಪುಸೆಟ್ ಬಳಸಲು ವಿದ್ಯುತ್ ಒದಗಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಫೆಬ್ರವರಿ 24ರಂದು ಮಂಗಳೂರಿನ ಸಹಾಯಕ ಕಮಿಷನರ್ ಶ್ರೀ ಎಸ್.ಸೋಮಶೇಖರ್ ಮೂಲಕ ಮಂಗಳೂರು ಉಪವಿಭಾಗ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತರಕ್ಷಣಾ ಸಮಿತಿಗೆ ಸಲ್ಲಿಸಲಾಯಿತು.

ಎಸ್.ಎಫ್.ಐ. ಸಮ್ಮೇಳನಗಳು

ರಾಮದುರ್ಗ ತಾ॥

ಜನವರಿ 21ರಂದು ರಾಮದುರ್ಗ ತಾಲ್ಲೂಕು ಸಮಾವೇಶವನ್ನು ಬೆಂಬಳಗಿ ಕಾಲೇಜು ಪ್ರಾಧ್ಯಾಪಕ ಎ.ಕೆ.ನವಲಗುಂದ ಉದ್ಘಾಟಿಸಿ ವಿದ್ಯಾರ್ಥಿ ಸಮಸ್ಯೆಗಳಿಗೆ ಎಸ್.ಎಫ್.ಐ. ಸ್ಪಂದಿಸುತ್ತಿರುವುದನ್ನು ಅಭಿನಂದಿಸಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಕರೆ ನೀಡಿದರು. ಸಮಾವೇಶಕ್ಕೆ ಸಿ.ಪಿ.ಐ.(ಎಂ) ಧುರೀಣ ಕಾ॥ ವಿ.ಪಿ.ಕುಲಕರ್ಣಿ, ಶಿಂಧೆ, ಮನಿಯಾರ್ ಮುಂತಾದವರು ಶುಭ ಕೋರಿದರು.

ನೂತನ ತಾ॥ ಘಟಕಕ್ಕೆ ಕಾ॥ ಕೆ.ಬಿ. ವಗ್ಗರ (ಅಧ್ಯಕ್ಷ) ಎ.ಎಸ್.ನಾಯ್ಕ (ಪ್ರ. ಕಾರ್ಯದರ್ಶಿ)ಯಾಗಿರುವ ಸಮಿತಿ ರಚಿಸಲಾಯಿತು.

ಜಮಖಂಡಿ ತಾ॥

ಜಮಖಂಡಿ ತಾಲ್ಲೂಕು ಪ್ರಥಮ ಸಮ್ಮೇಳನ ಡಿಸೆಂಬರ್ 25 ರಂದು ಯಶಸ್ವಿಯಾಗಿ ಜರುಗಿತು. ವಕೀಲರಾದ ಶ್ರೀ ಆರ್.ಡಿ.ಹಳಿಂಗಳಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಧಾರವಾಡ ಜಿಲ್ಲಾ ಅಧ್ಯಕ್ಷ ಕಾ॥ ಸಾಧಿಕ್ ಸೌದಾಗಾರ, ಪ್ರೊ॥ ಪಿ.ವ್ಹಿ.ವಜ್ರಮಟ ಮಾತನಾಡಿ ಮತೀಯ ಕೋಮುವಾದಿ ಶಕ್ತಿಗಳು ತಲೆಯೆತ್ತುತ್ತಿರುವುದನ್ನು ಖಂಡಿಸಿದರು. ವಕೀಲರಾದ ತುಂಗಳ ಹಾಗೂ ಜಿಲ್ಲಾ ಎಸ್.ಎಫ್.ಐ. ಅಧ್ಯಕ್ಷ ಕಾ॥ ಶ್ರೀಧರ್‌ರವರು ಮಾತನಾಡಿದರು. ಕೊನೆಯಲ್ಲಿ ಸಂಜಯ ಕರಮನೆ ವಂದಿಸಿದರು.

ನೂತನ ತಾಲ್ಲೂಕು ಸಮಿತಿಗೆ ಕಾ॥ ಮಾರುತಿ ಬಾಗಡೆ (ಅಧ್ಯಕ್ಷ) ಸಂಜಯ ಕದಮ, ಬಿ.ಬಿ.ಪುಕಾಳೆ (ಉಪಾಧ್ಯಕ್ಷರು) ಬಾಜೀರಾವಜಿಗತಾಪ (ಕಾರ್ಯದರ್ಶಿ) ಎಸ್. ಎಸ್.ಜಾದವ ಮತ್ತು ಗೋಕಾಕ (ಸಹ ಕಾರ್ಯದರ್ಶಿಗಳು) ಕಾ॥ ರವಿಹರಿಮನಿ (ಖಜಾಂಚಿ)ಯಾಗಿ ಆಯ್ಕೆ ಮಾಡಲಾಯಿತು.

ಡಿಸೆಂಬರ್ 28ರಂದು ಜಮಖಂಡಿಯಲ್ಲಿ ಪಿ.ಯು.ಸಿ. ಮಂಡಳಿ ರದ್ದು ಹಾಗೂ ಪರೀಕ್ಷೆ ಸುಗ್ರೀವಾಜ್ಞೆ ವಿರುದ್ಧ ತರಗತಿ ಬಹಿಷ್ಕರಿಸಿ ಬೃಹತ್ ರ್‍ಯಾಲಿ ನಡೆಸಿ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಮನವಿ ಅರ್ಪಿಸಿ ಬಹಿರಂಗ ಸಭೆ ನಡೆಸಿದರು.

ಜನವರಿ 19ರಂದು ಬನಹಟ್ಟಿಯಲ್ಲಿ ಶಾಲಾ ಕಾಲೇಜು ಬಹಿಷ್ಕರಿಸಿ ನಗರದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮೆರವಣಿಗೆ ಬಹಿರಂಗ ಸಭೆ ನಡೆಸಿದರು. ಅಧ್ಯಾಪಕರು, ಕಾರ್ಮಿಕ ನಾಯಕರು, ಯುವಜನ ಮುಖಂಡರು ಬಹಿರಂಗ ಸಭೆಯಲ್ಲಿ ಭಾಗವಹಿಸಿ ಸರ್ಕಾರದ ಶಿಕ್ಷಣ ನೀತಿಯನ್ನು ಖಂಡಿಸಿದರು.

ಬೆಲೆ ಏರಿಕೆ ವಿರುದ್ಧ ಡಿ.ವೈ.ಎಫ್.ಐ. ಪ್ರತಿಭಟನೆ

ಸಂಡೂರು ತಾಲ್ಲೂಕು ಸಮಿತಿ ಡಿ.ವೈಎಫ್.ಐ. ರಾಜ್ಯ ಸಮಿತಿ ಮತ್ತು ಜಿಲ್ಲಾ ಸಮಿತಿ ಕರೆಯ ಮೇರೆಗೆ ಫೆಬ್ರವರಿ 20ರಂದು ತೋರಣಗಲ್ಲಿನ ಡಿ.ವೈ.ಎಫ್.ಐ. ಕಾರ್ಮಿಕರೊಂದಿಗೆ ಉಪ ತಹಶೀಲ್ದಾರ್, ನಾಡ ಕಾರ್ಯಾಲಯ, ತೋರಣಗಲ್ಲು ಇವರಿಗೆ ಮನವಿ ಪತ್ರವನ್ನು ಸಲ್ಲಿಸಿ ಬೆಲೆಯೇರಿಕೆಯನ್ನು ವಾಪಸು ಪಡೆಯಬೇಕೆಂದು ಒತ್ತಾಯಿಸಿದರು.

ಮೈಸೂರು

ಫೆಬ್ರವರಿ 20ರಂದು ನಗರದ ಟೌನ್ ಹಾಲ್ ಮೈದಾನದಿಂದ ಮೆರವಣಿಗೆ ಹೊರಟು ಮುಖ್ಯ ಬೀದಿಗಳಲ್ಲಿ ಹಾದು ಜಿಲ್ಲಾಧಿಕಾರಿಗಳವರಿಗೆ ಮನವಿಯನ್ನು ಅರ್ಪಿಸಲಾಯಿತು. ನೆರೆದಿದ್ದ ಕಾರ್ಯಕರ್ತರನ್ನು ಮತ್ತು ಜನತೆಯನ್ನು ಉದ್ದೇಶಿಸಿ ಕಾ॥ ಜಾರ್ಜ್, ಸಾಂತಪ್ಪ, ಕಾರ್ಯದರ್ಶಿಗಳಾದ ಜೆ.ಜಯರಾಂ ಅವರು ಮಾತನಾಡಿ ಮುಂದಿನ ದಿನಗಳು ನಮಗೆಲ್ಲಾ ಕಷ್ಟಕರವಾಗಿರುವುದರಿಂದ ಬಲಿಷ್ಠವಾದ ತೀವ್ರ ರೀತಿಯ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ವಿಜಾಪುರ

ವಿಜಾಪುರದಲ್ಲಿ ಫೆಬ್ರವರಿ 20ರಂದು ಡಿ.ವೈ.ಎಫ್.ಐ. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪಡಿತರ ಕಡಿತ ಮತ್ತು ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲಾಯಿತು. ಮೆರವಣಿಗೆ ತೆಗೆದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪರಿಷತ್ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಲಾಯಿತು. ಈ ಮನವಿಯಲ್ಲಿ ಕೇಂದ್ರದ ಜನ-ವಿರೋಧಿ ನೀತಿಗಳಿಂದ ಜನರ ಸಂಕಷ್ಟ ಹೆಚ್ಚುತ್ತಿರುವುದನ್ನು, ಎಡ ನೇತೃತ್ವದ ರಾಜ್ಯ ಸರ್ಕಾರಗಳಂತೆ ಬೆಲೆ ಏರಿಕೆ ವಿರುದ್ಧ ಜನರನ್ನು ಸಂಘಟಿಸಿ ಹೋರಾಡದೆ ಪರಸ್ಪರ ಕಚ್ಚಾಟದಲ್ಲೇ ನಿರತರಾಗಿರುವ ರಾಜ್ಯ ಜನತಾದಳದ ಬಗ್ಗೆ ಜನರಲ್ಲಿ ಉಂಟಾಗುತ್ತಿರುವ ಬೇಸರವನ್ನು ವ್ಯಕ್ತಗೊಳಿಸಲಾಗಿತ್ತು. ಇದಕ್ಕೆ ಅವಕಾಶ ಕೊಡದೆ ಜನತೆಯ ಬೇಡಿಕೆಗಳತ್ತ ಗಮನ ಹರಿಸಿ ಕರ್ನಾಟಕದ ಜನತೆಯ ಪರವಾಗಿ ಕೇಂದ್ರದ ಸರ್ವಾಧಿಕಾರಿ ಹಾಗೂ ಮಲತಾಯಿ ಧೋರಣೆಗಳ ವಿರುದ್ಧ ಹೋರಾಟ ಕೈಗೊಳ್ಳಬೇಕೆಂದು ಒಂಭತ್ತು ಬೇಡಿಕೆಗಳನ್ನಿಟ್ಟು ಒತ್ತಾಯಿಸಿದೆ.

ಮೆರವಣಿಗೆಯ ನೇತೃತ್ವವನ್ನು ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಸದಾನಂದ ಮೋದಿ, ಎಲ್.ವೈ.ಹಂದ್ರಾಳ ಮತ್ತು ವಿಜಯಕುಮಾರ್ ಕಲಾದಗಿ ವಹಿಸಿದ್ದರು. ನಂತರ 4 ಗಂಟೆಯವರೆಗೆ ಬೇಡಿಕೆಗಳನ್ನು ಒತ್ತಾಯಿಸಿ ಧರಣಿ ನಡೆಸಲಾಯಿತು.

ನಾಗರೀಕ ಸೌಲಭ್ಯ ಒತ್ತಾಯಿಸಿ ಸತ್ಯಾಗ್ರಹ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿ.ವೈ.ಎಫ್.ಐ.) ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕು ರಾರಾವಿ ಶಾಖೆಯ ರಾರಾವಿ ಗ್ರಾಮದ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಮುಂದಿರಿಸಿ ರಾರಾವಿ ಮಂಡಳದ ಎದುರು ಜನವರಿ 6ರಿಂದ ಸತ್ಯಾಗ್ರಹವನ್ನು ಕೈಗೊಂಡಿದೆ. ರಾರಾವಿ ಗ್ರಾಮಕ್ಕೆ ಏತ ನೀರಾವರಿ ಒದಗಿಸಬೇಕು, ಬಸ್ ನಿಲ್ದಾಣ, ಹಸಿರುಕಾರ್ಡು ಒದಗಿಸಬೇಕು, ಮನೆ ಇಲ್ಲದ ಹಾಗೂ ಬಿದ್ದು ಹೋಗಿರುವ ಮನೆ ಕಟ್ಟಿಕೊಳ್ಳಲು ಸೌಲಭ್ಯ, ಪಶುವೈದ್ಯ ಶಾಲೆ, ಕುಡಿಯುವ ನೀರಿನ ಸೌಕರ್ಯ, ಬೀದಿ ದೀಪದ ವ್ಯವಸ್ಥೆ ಬೇಡಿಕೆಗಳ ಕುರಿತು ಮಂಡಳ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ ಎಂದು ಡಿ.ವೈ.ಎಫ್.ಐ.ನ ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯ ಕಾ॥ ಎಲ್ಲಪ್ಪನವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬೇಡಿಕೆಗಳನ್ನು ಪಡೆಯುವರೆಗೂ ಸತ್ಯಾಗ್ರಹ ಹಿಂತೆಗೆದುಕೊಳ್ಳುವುದಿಲ್ಲವೆಂದು ಎಚ್ಚರಿಸಿರುವ ಅವರು ನಿರ್ಲಕ್ಷ್ಯ ತೋರಿದೆ ಆದರೆ ಉಗ್ರ ಹೋರಾಟ ನಡೆಸುವುದಾಗಿ ಹೇಳಿದ್ದಾರೆ.

ಡಿ.ವೈ.ಎಫ್.ಐ. ರಾಯಚೂರು ತಾಲ್ಲೂಕು ಸಮ್ಮೇಳನ

ಡಿ.ವೈ.ಎಫ್.ಐ. ರಾಯಚೂರು ತಾಲ್ಲೂಕು ಸಮ್ಮೇಳನ ಕರ್ನಾಟಕ ಸಂಘದಲ್ಲಿ ನಡೆಯಿತು. ಟಾಗೋರ್ ಕಾಲೇಜ್ ಉಪನ್ಯಾಸಕ ಭೀಮರೆಡ್ಡಿಯವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಕೋಮುವಾದ, ಜಾತಿವಾದವನ್ನು ದೂರವಿಡಬೇಕೆಂದು ನುಡಿದರು. ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಸಮಿತಿ ಅಧ್ಯಕ್ಷ ಗಂಗಾಧರ್ ಕುಷ್ಠಗಿ ಗೊಡ್ಡು ಮೌಲ್ಯಗಳು, ಕುರುಡು ಸಂಪ್ರದಾಯಗಳ ವಿರುದ್ಧ ಸಿಡಿದೇಳಬೇಕೆಂದು ಕರೆ ನೀಡಿದರು. ಇನ್ನೊಬ್ಬ ಮುಖ್ಯ ಅತಿಥಿ ಡಿ.ವೈ.ಎಫ್.ಐ. ಜಿಲ್ಲಾ ಸಮಿತಿ ಸದಸ್ಯ ಶರಬಣ್ಣ ನಾಗಲಾಪುರ ಸಭೆಯನ್ನುದ್ದೇಶಿಸಿ ಮಾತನಾಡಿದರು.

5 0 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನ ಸಂಚಾಲಕರಾದ ವೆಂಕಟೇಶ್ ಹೀರಾ ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆಸಿತು. ಚರ್ಚೆಯ ನಂತರ ನೂತನ ಸಮಿತಿಯನ್ನು ಆರಿಸಲಾಯಿತು. ವೆಂಕಟೇಶ್ ಹೀರಾ (ಅಧ್ಯಕ್ಷರು), ಶಿವಮೂರ್ತಿ, ಸಿದ್ಧಲಿಂಗಯ್ಯ (ಉಪಾಧ್ಯಕ್ಷರು), ಸಿದ್ದಪ್ಪ (ಕಾರ್ಯದರ್ಶಿ), ಬಿ. ಬಸವರಾಜ್, ಸತ್ಯನಾರಾಯಣ (ಸಹಕಾರ್ಯದರ್ಶಿಗಳು), ಮುತ್ತಮ್ಮ, ಸಾವಿತ್ರಿ, ಖಾಜಾಪಾಷ, ಅಂಜನಯ್ಯ ಕಾಡಲೂರ್ ಈ ಸಮಿತಿಯ ಸದಸ್ಯರು. ಖಾಲಿ ಶಿಕ್ಷಕ ಹುದ್ದೆಗಳ ಭರ್ತಿ, ಕೊಳಚೆ ಪ್ರದೇಶಗಳಿಗೆ ನಾಗರಿಕ ಸೌಲಭ್ಯ, ತಳ್ಳು ಬಂಡಿ ಮುಂತಾದ ಸಣ್ಣಪುಟ್ಟ ವ್ಯಾಪಾರಸ್ಥರ ಮೇಲಿನ ಪೋಲೀಸ್ ದೌರ್ಜನ್ಯದ ವಿರುದ್ಧ ನಿರ್ಣಯಗಳನ್ನೂ ಅಂಗೀಕರಿಸಲಾಯಿತು. ಪ್ರೀಮಿಯರ್ ಸ್ಟುಡಿಯೋ ಬೆಂಕಿ ಅನಾಹುತದಲ್ಲಿ ಮೃತರಾದವರಿಗೆ ಸಮ್ಮೇಳನ ಸಂತಾಪ ವ್ಯಕ್ತಪಡಿಸಿತು.

ವಾಲಿ ಚನ್ನಪ್ಪನವರಿಗೆ ಶ್ರದ್ಧಾಂಜಲಿ

ಬೆಳಗಾಂ ಜಿಲ್ಲೆಯಲ್ಲಿ ರೈತರನ್ನು ಸಂಘಟಿಸುವಲ್ಲಿ ದಿವಂಗತ ತಲ್ಲೂರು ರಾಮನಗೌಡರ ಜೊತೆ ಪಾತ್ರ ವಹಿಸುತ್ತಿದ್ದ ಶ್ರೀಯುತ ವಾಲಿ ಚೆನ್ನಪ್ಪನವರಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾಂ ಜಿಲ್ಲಾ ಸಮಿತಿ ತನ್ನ ಶ್ರಂದ್ಧಾಂಜಲಿ ಅರ್ಪಿಸುತ್ತಾ ಈ 'ಅಗ್ರಮಾನ್ಯ ಪ್ರಾಮಾಣಿಕ ಹೋರಾಟಗಾರ ಮತ್ತು ರೈತ ಹಿತೈಷಿ'ಯ ನಿಧನಕ್ಕೆ ತನ್ನ ಶೋಕ ವ್ಯಕ್ತಪಡಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ

ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ಮತ್ತೊಮ್ಮೆ ವಿಶ್ವದ ಪ್ರಜಾಪ್ರಭುತ್ವವಾದಿ ಶಕ್ತಿಗಳ ತೀವ್ರ ಭರ್ತ್ಸನೆಗೆ ಒಳಗಾಗಿದ್ದಾರೆ.

ವಿಶ್ವ ಸಂಸ್ಥೆಯ ಮಾನವ ಹಕ್ಕು ಆಯೋಗ ದಕ್ಷಿಣ ಆಫ್ರಿಕಾದ ಆಳರಸರು ನೆರೆಯ ನಮೀಬಿಯಾದಲ್ಲಿ ನಡೆಸುತ್ತಿರುವ ಅತ್ಯಾಚಾರಗಳನ್ನು ತೀವ್ರವಾಗಿ ಖಂಡಿಸಿದೆ. ಈ ಬಗ್ಗೆ ಈಗಾಗಲೇ ಒಂದು ಒಪ್ಪಂದವಾಗಿ ಕ್ಯೂಬಾ ಅಂಗೋಲಾದಿಂದ ತನ್ನ ಪಡೆಗಳನ್ನು ವಾಪಾಸು ಪಡೆಯುತ್ತಿದ್ದರೂ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ನಮೀಬಿಯಾದ ಮೇಲೆ ತಮ್ಮ ಹಕೋಟ ಅಂತ್ಯಗೊಳಿಸಲು ಒಪ್ಪಿದ್ದರೂ, ಆ ಒಪ್ಪಂದವನ್ನು ಉಲ್ಲಂಘಿಸುತ್ತಿರುವುದನ್ನು ಆಯೋಗ ಖಂಡಿಸಿದೆ.

ಜೂನ್ 1986ರಿಂದ ತುರ್ತುಪರಿಸ್ಥಿತಿ ಹೇರಿದಂದಿನಿದ ದಕ್ಷಿಣ ಆಫ್ರಿಕಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ತೀವ್ರವಾಗಿ ಏರಿದುದನ್ನು ಖಂಡಿಸಿ ಆಯೋಗ ಒಂದು ನಿರ್ಣಯ ಅಂಗೀಕರಿಸಿತು. ನಿರ್ಣಯದ ಪರವಾಗಿ 35 ಮತಗಳು, ನಿರ್ಣಯದ ವಿರುದ್ಧ 3 ಮತಗಳು ಬಿದ್ದವು.

ಎಂದಿನಂತೆ ಮೂರನೇ ಜಗತ್ತಿನ ದೇಶಗಳು ಮತ್ತು ಸಮಾಜವಾದೀ ದೇಶಗಳು ಒಂದೆಡೆಯಿದ್ದರೆ ಸಾಮ್ರಾಜ್ಯಶಾಹೀ ದೇಶಗಳು ಇನ್ನೊಂದೆಡೆ. ವಿರೋಧ ಮತ ನೀಡಿದ ದೇಶಗಳು ಯಥಾಪ್ರಕಾರ ಅಮೆರಿಕಾ, ಬ್ರಿಟನ್ ಮತ್ತು ಪ.ಜರ್ಮನಿ. ಇತರ ಐದು ಪಾಶ್ಚಿಮಾತ್ಯ ದೇಶಗಳು ಮತದಾದನಲ್ಲಿ ಭಾಗವಹಿಸಲಿಲ್ಲ.

ಈ ನಿರ್ಣಯ ನೆಲ್ಸನ್ ಮಂಡೇಲಾ ಹಾಗೂ ಇತರ ಎಲ್ಲಾ ರಾಜಕೀಯ ಕೈದಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿತು. ಗರ್ಭಿಣಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಜೈಲಿಗಟ್ಟುವ ಕ್ರಮಗಳನ್ನು ನಿರ್ಣಯ ಬಲವಾಗಿ ಖಂಡಿಸಿತು.

ದಕ್ಷಿಣ ಆಫ್ರಿಕಾದೊಂದಿಗೆ ಮಿಲಿಟರಿ, ವ್ಯಾಪಾರೀ ಸಂಬಂಧ ಮುರಿಯಲು ಹಾಗೂ ವರ್ಣದ್ವೇಷಿಗಳ ಮೇಲೆ ದಿಗ್ಬಂಧನ ಹೇರಬೇಕೆಂದು ಕರೆ ನೀಡುವ ಇನ್ನೊಂದು ನಿರ್ಣಯವೂ 31-8 ಮತಗಳಿಂದ ಅಂಗೀಕಾರಗೊಂಡಿತು. ವಿರೋಧಿಸಿದ ೮ ದೇಶಗಳು ಯಾವುವೆಂಬುದು ಸ್ಪಷ್ಟ.

ಈ ನಡುವೆ ಯುರೋಪಿಯನ್ ಆರ್ಥಿಕ ಸಮುದಾಯ, ಜಪಾನ್ ಮತ್ತು ಕೆನಡಾ ದೇಶಗಳು ದಕ್ಷಿಣ ಆಫ್ರಿಕಾದೊಂದಿಗೆ ತಮ್ಮ ವ್ಯಾಪಾರ-ವಹಿವಾಟನ್ನು ವಿಶ್ವ ಸಾರ್ವಜನಿಕಾಭಿಪ್ರಾಯವನ್ನು ಉಲ್ಲಂಘಿಸಿ ಗುಪ್ತವಾಗಿ ಹೆಚ್ಚಿಸಿರುವ ಬಗ್ಗೆ ವಿಶ್ವಾದ್ಯಂತ ತೀವ್ರ ಆತಂಕ ವ್ಯಕ್ತಪಟ್ಟಿದೆ.

ಗುಪ್ತ ವರದಿಗಳ ಪ್ರಕಾರ ಪಾಶ್ಚಿಮಾತ್ಯ ದೇಶಗಳು ಮತ್ತು ದಕ್ಷಿಣ ಆಫ್ರಿಕಾದ ನಡುವಿನ ವ್ಯಾಪಾರ ವಹಿವಾಟು 7% ಹೆಚ್ಚಿದೆಯೆಂದು ವರದಿಯಾಗಿದೆ. ಪ.ಜರ್ಮನಿ 32%ದಷ್ಟು ಹೆಚ್ಚಿಸಿದೆ. ಜಪಾನ್, ಬ್ರಿಟನ್ ಮತ್ತು ಅಮೆರಿಕಾ ಮೂಲಕ ದಕ್ಷಿಣ ಆಫ್ರಿಕಾದೊಂದಿಗೆ ಪರೋಕ್ಷ ವ್ಯಾಪಾರ ನಡೆಸುತ್ತಿದೆ. ಕೆನಡಾದ ವ್ಯಾಪಾರ 67% ಹೆಚ್ಚಿದೆ.

ಕಿಲಕಿಲ ನಗುವಿನ ಬದಲು.....

ವಿಶ್ವಾದ್ಯಂತ ಶಾಲೆಗಳಲ್ಲಿ ಓದುತ್ತಿರಬೇಕಾದ, ಕಿಲಕಿಲ ನಗುತ್ತಾ ಮೈದಾನಗಳಲ್ಲಿ ಆಟವಾಡುತ್ತಿರಬೇಕಾದ 20 ಕೋಟಿ ಮಕ್ಕಳು ಅತ್ಯಂತ ಕಠಿಣ ದುಡಿಮೆಯಲ್ಲಿ ತೊಡಗಿದ್ದಾರೆ. ಅಂತರ್ರಾಷ್ಟ್ರೀಯ ಶ್ರಮ ಸಂಘಟನೆಯ ಇತ್ತೀಚಿನ ಒಂದು ಅಧ್ಯಯನದಿಂದ ಇದು ತಿಳಿದುಬಂದಿದೆ. ಹೆಚ್ಚಿನ ದೇಶಗಳಲ್ಲಿ ಬಾಲ ಕಾರ್ಮಿಕರ ಬಗ್ಗೆ ಕಾನೂನುಗಳಿದ್ದರೂ ಬಹಳಷ್ಟು ಪಾಲು ಅವು ಪುಸ್ತಕದ ಬದನೆಕಾಯಿಗಳಷ್ಟೆ. ಈ ಕಾನೂನು ಉಲ್ಲಂಘನೆ ಮಾಡುವವರು ಮುಖ್ಯವಾಗಿ ತೀವ್ರ ಸ್ಪರ್ಧೆ ಮತ್ತು ಅಸ್ಥಿರ ಮಾರುಕಟ್ಟೆಯಿರುವ ಲಘು ಉದ್ದಿಮೆಗಳು ಎಂದು ಅಧ್ಯಯನ ಹೇಳುತ್ತದೆ. 'ಚಿಕ್ಕದು ಸುಂದರ' ಎಂಬುದರ ಬಗ್ಗೆ ಒಕ್ಕಣ್ಣು ದೃಷ್ಟಿಯ ಮಧ್ಯಮ ವರ್ಗದ ಕೆಲವು ಬುದ್ಧಿ ಜೀವಿಗಳು ಇದನ್ನು ಗಮನಿಸಬೇಕು. ಬಾಲ ಕಾರ್ಮಿಕ ಸಮಸ್ಯೆಗೆ ಒಂದು ಮುಖ್ಯ ಕಾರಣ ವಯಸ್ಕರ ನಿರುದ್ಯೋಗ, ಅರೆ ಉದ್ಯೋಗ, ಬಡತನ, ಆದ್ದರಿಂದ ವಯಸ್ಕ ಕಾರ್ಮಿಕರ ಉದ್ಯೋಗ, ಆದಾಯ ಹೆಚ್ಚಿಸುವುದು ಈ ರೀತಿಯ ಕಾನೂನು ಉಲ್ಲಂಘನೆಗಳನ್ನು ತಡೆಯುವ ಒಂದು ಮುಖ್ಯ ಕ್ರಮ ಎಂದು ಅಧ್ಯಯನ ಹೇಳುತ್ತದೆ. ಇದು ರಾಜಕೀಯ ಪ್ರಶ್ನೆ ಎಂಬುದನ್ನು ಅಧ್ಯಯನ ಒಪ್ಪಿದೆ.

ಎರಡುವರ್ಷಗಳಲ್ಲಿ ಪುನರ್ ನಿರ್ಮಾಣ ಕಾರ್ಯ

ಸೋವಿಯತ್ ಒಕ್ಕೂಟದ ಆರ್ಮೇನಿಯಾದಲ್ಲಿ ಸಂಭವಿಸಿರುವ ಭೂಕಂಪದಿಂದ ಆಗಿರುವ ನಷ್ಟವು ಸುಮಾರು 10,000 ಮಿಲಿಯ ರೂಬಲ್‌ಗಳಷ್ಟಾಗುವುದು ಎಂಬುದಾಗಿ ಆರ್ಮೇನಿಯಾದ ಯೋಜನಾ ಮಂಡಳಿಯ ಅಧ್ಯಕ್ಷ ಮಕ್ಸಿಜ್ ಮಕ್ರುಟ್ಯಾನ್ ಅವರು ಹೇಳಿದ್ದಾರೆ.

ಸೋವಿಯತ್ ಒಕ್ಕೂಟದ ಎಲ್ಲ ಸೋದರ ಗಣರಾಜ್ಯಗಳು ಮತ್ತು ವಿದೇಶಗಳಿಂದ ನೆರವು ಬಾರದಿರುತ್ತಿದ್ದರೆ ಆರ್ಮೇನಿಯಾ ಗಣರಾಜ್ಯ ಭೂಕಂಪದಿಂದ ಸಂಭವಿಸಿರುವ ಹಾನಿಯನ್ನು ಭರಿಸಿಕೊಳ್ಳಲು ಸಮರ್ಥವಾಗುತ್ತಿದ್ದಿಲ್ಲ ಎಂದು ತಾಸ್ ಪ್ರತಿನಿಧಿಗೆ ನೀಡಿದ ಸಂದರ್ಶನವೊಂದರಲ್ಲಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ಎರಡು ವರ್ಷದೊಳಗಾಗಿ ಪುನರ್ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದೆ ಹಾಗೂ ಹಾನಿಗೊಳಗಾಗಿರುವ ಪ್ರದೇಶಗಳ ಆರ್ಥಿಕ ಸ್ಥಿತಿಯನ್ನು ಪೂರ್ವಸ್ಥಿತಿಗೆ ತರಬೇಕಾಗಿದೆ. ಪುನರ್ ವಸತಿ ಕಲ್ಪಿಸುವ ಕಾರ್ಯಕ್ರಮವು ಮನೆಗಳ ನಿರ್ಮಾಣ, ಉದ್ದಿಮೆಗಳು, ಕೃಷಿ ಉದ್ಯಮ ಸಮುಚ್ಚಯಗಳು ಹಾಗೂ ನಗರ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಜೀವನಾ ಧಾರಕ್ಕೆ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಇತ್ಯಾದಿಗಳನ್ನು ಒಳಗೊಂಡಿದೆ. ಹಾನಿಗೊಳಗಾಗಿರುವ ಎಲ್ಲ ಕೈಗಾರಿಕಾ ಮತ್ತು ಕೃಷಿ ಸಂಬಂಧಿ ಉದ್ಯಮ ಸಂಸ್ಥೆಗಳನ್ನು ಪುನರ್ ನಿರ್ಮಿಸಲಾಗುವುದು. ಆಹಾರ ಉತ್ಪಾದನೆ ವಿದ್ಯುಚ್ಛಕ್ತಿ ಸೌಕರ್ಯ ಕಟ್ಟಡ ನಿರ್ಮಾಣ ಇತ್ಯಾದಿ ಯೋಜನೆಗಳ ಆದ್ಯತೆ ನೀಡಲಾಗುವುದು. ಸೋವಿಯತ್ ಒಕ್ಕೂಟ ಮತ್ತು ವಿದೇಶಗಳ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅನುಭವಗಳನ್ನು ಬಳಸಿಕೊಂಡು ಭೂಕಂಪ ನಿರೋಧಕ ಕಟ್ಟಡಗಳನ್ನು ಈಗ ನಿರ್ಮಿಸಲಾಗುತ್ತಿದೆ. ಒಂದೇ ಅಂತಸ್ತಿನ ಮನೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು.

ಸ್ಪೇನಿನ ಕಾರ್ಮಿಕರಲ್ಲಿ ಅಸಂತೃಪ್ತಿ

ಕಳೆದ ತಿಂಗಳು ಸ್ಪೇನಿನ 1.2 ಕೋಟಿ ಕಾರ್ಮಿಕರಲ್ಲಿ 80ಲಕ್ಷ ಕಾರ್ಮಿಕರು 24ಗಂಟೆಗಳ ಸಾರ್ವತ್ರಿಕ ಮುಷ್ಕರ ನಡೆಸಿ ಸ್ಪೇನಿನ ಸೋಶಲಿಸ್ಟ್ ಸರ್ಕಾರದ ಆರ್ಥಿಕ ಧೋರಣೆಗಳಿಗೆ ತಮ್ಮ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಇದು ಕಳೆದ ಐದು ದಶಕಗಳಲ್ಲಿಯೇ ದೊಡ್ಡ ಮುಷ್ಕರವೆಂದು ಹೇಳಲಾಗಿದೆ. ಈ ಮುಷ್ಕರದಲ್ಲಿ ಕಮ್ಯೂನಿಸ್ಟ್ ನೇತೃತ್ವದ ಯೂನಿಯನ್‌ಗಳು ಮಾತ್ರವಲ್ಲ, ಆಳುವ ಪಕ್ಷದ ಬೆನ್ನೆಲುಬಾಗಿದ ಸೋಶಲಿಸ್. ನೇತತ.ದ ಯೂನಿಯನ್‌ಗಳೂ ಸೇರಿರುವುದು ಗಮನಾರ್ಹ.

ಸ್ಪೇನಿನ ಸೋಶಲಿಸ್ಟ್ ಪ್ರಧಾನಿ ಫೆಲಿಪ್ ಗೊರ್ಝಾಲೆಝು 6ವರ್ಷಗಳ ತನ್ನ ಆಳ್ವಿಕೆಯಿಂದ ಸಂತೃಪ್ತರಾಗಿದ್ದಾರೆ. ಹೌದು, ಉದ್ಯಮಿಗಳೆಲ್ಲಾ ಸಂತುಷ್ಟರಾಗಿದ್ದಾರೆ, ಗೊಂಝಾಲೆಝು ಮಾತಿಗೆ ಚಪ್ಪಾಳೆ ತಟ್ಟುತ್ತಾರೆ ಎಂದು ಸೋಶಲಿಸ್ಟ್ ಕಾರ್ಮಿಕ ಸಂಘಗಳ ಒಬ್ಬ ಮುಖಂಡ ಜೋಸ್ ಸರಾಸಿಬಾರ್ ಹೇಳುತ್ತಾರೆ. ಗೊಂಝಾಲೆಝ್ ಹಿಂದೆ ಹೇಳುತ್ತಿದ್ದ ಸೋಶಲಿಸಂ ಎಲ್ಲಿ ಹೋಯ್ತು ಎಲ್ಲಾ ಎಂದು ಪ್ರಶ್ನಿಸುತ್ತಿದ್ದಾರೆ.

ಕಳೆದ ವರ್ಷದ 5 .8% ಹಣದುಬ್ಬರ ಸರಿದೂಗಿಸಲು ವೇತನ ಏರಿಕೆ, ಹೆಚ್ಚಿನ ಕನಿಷ್ಠ ವೇತನ, ಸ್ಪೇನಿನ 30ಲಕ್ಷ ನಿರುದ್ಯೋಗಿಗಳಿಗೆ ಹೆಚ್ಚಿನ ಸೌಲಭ್ಯ-ಇವು ಸ್ಪೇನಿನ ಬಹುಪಾಲು ಕಾರ್ಮಿಕರ ಬೇಡಿಕೆಗಳು. ಇದನ್ನು ಒಪ್ಪಿದರೆ ಹಣದುಬ್ಬರ ಮತ್ತಷ್ಟು ಹೆಚ್ಚುತ್ತದೆ ಎಂದು ಸೋಶಲಿಸ್ಟ್ ಪ್ರಧಾನಿ ಭಾವಿಸುತ್ತಾರೆ!

ತ್ರಿಪುರಾ; ಕರಾಳ ಶಾಸನದ ಒಂದು ವರ್ಷ

ಹಣ ಮತ್ತು ಸೇನೆಯಬಲದಿಂದ ಅಧಿಕಾರ ಕಸಿದುಕೊಂಡ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಸರ್ಕಾರ ಒಂದು ವರ್ಷ ಪೂರ್ಣಗೊಳಿಸಿದೆ. ಅದರ ವಾರ್ಷಿಕೋತ್ಸವ ಆಚರಿಸಲು ಅದೇಕೋ ಕಾಂಗ್ರೆಸ್(ಐ), ಟಿ.ಯು.ಜೆ.ಎಸ್. ಕೂಟಕ್ಕೆ ಧೈರ್ಯ ಬಂದಂತಿಲ್ಲ. ಮುಖ್ಯಮಂತ್ರಿಗಳು ಕೇವಲ ಒಂದು ಪತ್ರಿಕಾ ಭೇಟಿ ನಡೆಸಿದರು-ಅದೂ ತನ್ನ ಖಾಸಗೀ ನಿವಾಸದಲ್ಲಿ. ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ತನ್ನಲ್ಲಿ ಹೇಳಲು, ನೀಡಲು ಹೊಸದೇನೂ ಇಲ್ಲ ಎಂದರಂತೆ.

ಶ್ರೀಮಾನ್ ಸುಧೀರ್‌ರಂಜನ ಮಜುಂದಾರ್‌ಗೆ ವಿನೀತ ಪರಿಸ್ಥಿತಿ ಏಕೆ ಬಂತು?

ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಕೂಟಕ್ಕೆ ಜನತೆಯ ಬಗ್ಗೆ ಎಂತಹ ಭಯವಿದೆಯೆಂಬುದಕ್ಕೆ ಇದು ಇನ್ನೊಂದು ಉದಾಹರಣೆಯಷ್ಟೆ.

ಈ ಸರ್ಕಾರದ ಸಾಧನೆಗಳೇನು?

ಸಮಾಜದ ಎಲ್ಲಾ ವಿಭಾಗಗಳ ಮೇಲೆ, ಮುಖ್ಯವಾಗಿ ಬುಡಕಟ್ಟು ಜನಗಳ ಮೇಲೆ ತೀವ್ರ ದಮನ. ಬುಡಕಟ್ಟು ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ, ಕೊಲೆ. ಸ್ವಾಯತ್ತ ಜಿಲ್ಲಾ ಮಂಡಳಿಯನ್ನು ನಿರುಪಯುಕ್ತಗೊಳಿಸಲು ಸರ್ವ ಪ್ರಯತ್ನ. ಈ ಮೂಲಕ ಬುಡಕಟ್ಟು ಪ್ರದೇಶಗಳಿಗೆ ಅಭಿವೃದ್ಧಿ ಕೆಲಸಗಳನ್ನು ಸ್ಥಗಿತಗೊಳಿಸುವುದು. ಬುಡಕಟ್ಟು ಪ್ರದೇಶಗಳಲ್ಲಿ ಡಬಲ್ ರೇಶನಿಂಗ್‌ನ ರದ್ಧತಿ.

ಎಲ್ಲಾ ಚುನಾಯಿತ ಸಂಸ್ಥೆಗಳ ಪಂಚಾಯತುಗಳು, ಬ್ಲಾಕ್ ಅಭಿವೃದ್ಧಿ ಸಮಿತಿ ಮುನಿಸಿಪಾಲಿಟಿ, ವಿದ್ಯಾರ್ಥಿ ಮಂಡಳಿ ಸಹಕಾರಿಗಳ ವಿಸರ್ಜನೆ, ಅದರ ಬದಲು ಜನ "ಲೂಟಿ ಸಮಿತಿ"ಗಳು ಎಂದು ಕರೆಯುವ ಸಮಿತಿಗಳ ನೇಮಕ (ದೆಹಲಿಯಲ್ಲಿ ಇವರ ಮಹಾನ್ ನಾಯಕ 'ವಿಕೇಂದ್ರೀಕರಣ'ದ ಆಲಾಪ ಒಂದೇ ಸಮನೆ ಮಾಡುತ್ತಿರುವಾಗ !)

ಸಿ.ಪಿ.ಐ.(ಎಂ)ನ್ನು ಎರಡು ವರ್ಷದೊಳಗೆ ನಿರ್ನಾಮ ಮಾಡುತ್ತೇವೆಂದು ಕೆಲವು ಮಂತ್ರಿಗಳ ಬಹಿರಂಗ ಪ್ರತಿಜ್ಞೆ! ಸರ್ಕಾರೀ ಭಯೋತ್ಪಾದನೆ-ಸಮಾಜಘಾತುಕ ಶಕ್ತಿಗಳ ಮೂಲಕ. ಇದರಿಂದ ಬುಡಕಟ್ಟು, ಸ್ವಾಯತ್ತ ಮಂಡಳಿಯ ಒಬ್ಬ ಸದಸ್ಯರೂ ಸೇರಿದಂತೆ ಸಿ.ಪಿ.ಐ.(ಎಂ)ನ 5 4 ಪ್ರಿಯ ಸಂಗಾತಿಗಳ ಕೊಲೆ. ಪಕ್ಷದ ಮುಖಂಡರ ಮೇಲೆ 90 ಹಲ್ಲೆಗಳು, ನೃಪೇನ್ ಚಕ್ರವರ್ತಿ, ದಶರತ್ ದೇಬ್‌ರವರ ಮೇಲೆ ಕೂಡಾ. 900 ಸಂಗಾತಿಗಳಿಗೆ ಪೋಲೀಸರ ಚಿತ್ರಹಿಂಸೆ. ಆರು ಸಾವಿರಕ್ಕೂ ಹೆಚ್ಚು ಸಂಗಾತಿಗಳ ಮೇಲೆ ಸುಳ್ಳು ಮೊಕದ್ದಮೆಗಳ ಹೊರೆ. ಎರಡು ಸಾವಿರಕ್ಕೂ ಹೆಚ್ಚು ಮಾನಭಂಗದ ದಾವೆಗಳು. 5 00ಕ್ಕೂ ಹೆಚ್ಚು ಮಂದಿ ಮನೆ ಬಿಟ್ಟೋಡ ಬೇಕಾಯಿತು. ಒಂದು ವರ್ಷದಲ್ಲಿ 5 0ಕ್ಕೂ ಹೆಚ್ಚು ಬಾರಿ ಸಿ.ಪಿ.ಐ.(ಎಂ) ದಿನಪತ್ರಿಕೆ 'ದೇಶೇರ್ ಕಥಾ' ಮಾರುವವರ ಮೇಲೆ ಹಲ್ಲೆ.

ಮಂತ್ರಿಗಳಿಗೆ, ಎಂ.ಎಲ್.ಎ.ಗಳಿಗೆ ಸರ್ಕಾರೀ ಖರ್ಚಿನಲ್ಲಿ ಅರಮನೆಗಳು, ಉಗ್ರಗಾಮಿ ಮುಖಂಡರಿಗೆ, ಚುನಾವಣೆ ಸೋತ ಎಂ.ಎಲ್.ಎ.ಗಳಿಗೆ, ಮಂತ್ರಿ ಪದವಿ ಸಿಗದವರಿಗೆ ಕಾರ್ಪೊರೇಷನ್‌ಗಳ ಚೇರ್‌ಮನ್ ಗಿರಿ. ಚುನಾಯಿತ ಸಂಸ್ಥೆಗಳನ್ನು ವಿಸರ್ಜಿಸಿ ಹೇರಿದ 'ಅಭಿವೃದ್ಧಿ ಸಮಿತಿ (ಲೂಟಿ ಸಮಿತಿ) ಗಳ ಮೂಲಕ ಖಜಾನೆಯ ಸೂರೆ. ಕಳೆದ ವರ್ಷ ಇವರು ಎಡರಂಗ ಸರ್ಕಾರದಿಂದ ಪಡೆದ 6.72 ಕೋಟಿ ರೂ.ಗಳ ಖಜಾನೆ ಒಂದೇ ವರ್ಷದಲ್ಲಿ ಬರಿದಾಗಿ ಈಗ ಹತ್ತು ಕೋಟಿ ರೂ.ಗಳ ಓವರ್‌ಡ್ರಾಫ್ಟ್!

ಇಂತಹ ಅಮೋಘ ಸಾಧನೆಗಳಿಂಗಾಗಿ ಕಾಂಗ್ರೆಸ್(ಐ)ನ ಕಟ್ಟಾ ಬೆಂಬಲಿಗ ಪತ್ರಿಕೆ 'ದೈನಿಕ್ ಸಂಬಾದ್' ಕೂಡಾ ತನ್ನ ಪ್ರಚಾರ ಉಳಿಸಿಕೊಳ್ಳಲು ಸರ್ಕಾರದ ಟೀಕೆ ಮಾಡಲೇ ಬೇಕಾದ ಪರಿಸ್ಥಿತಿ.

ಜತೆಗೆ ಕಾಂಗ್ರೆಸ್(ಐ)ನೊಳಗೆ, ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ನಡುವೆ ಕಲಹ. ಇತ್ತೀಚೆಗೆ ಸ್ವಾಯತ್ತ ಜಿಲ್ಲಾ ಮಂಡಳಿಯ ಟಿ.ಯು.ಜೆ.ಎಸ್. ಸದಸ್ಯರು ಒಂದು ಪತ್ರಿಕಾ ಸಮ್ಮೇಳನದಲ್ಲಿ ಸರ್ಕಾರದ ಕುಕೃತ್ಯಗಳನ್ನು ತೀವ್ರವಾಗಿ ಟೀಕಿಸಿದರು.

ಇಂತಹ ಸನ್ನಿವೇಶದಲ್ಲಿ ವಾರ್ಷಿಕೋತ್ಸವ ಆಚರಿಸುವ ಧೈರ್ಯ ಎಲ್ಲಿಂದ ಬರಬೇಕು? ಕಾಂಗ್ರೆ ಹುಚ್ಚು ಪಾತಕಿಗಳ ಬ್ರಿಗೇಡಿಯರ್ ವಾರ್ಷಿಕೋತ್ಸವದ ದಿನ ಸುಸ್ತಾಗಿದ್ದಂತೆ ಪತ್ರಕರ್ತರಿಗೆ ಕಂಡು ಬಂದಿದ್ದರೆ ಆಶ್ಚರ್ಯವೇನು?

ಈ ಒಂದು ವರ್ಷ ತ್ರಿಪುರಾ ಇತಿಹಾಸದ ಕರಾಳ ಅಧ್ಯಾಯ.

ವಿಶ್ವಕಾವ್ಯ ಉತ್ಸವದಲ್ಲಿ

ವಾಗಾರ್ಥ ಎಂದರೆ, ಮಾತಿಗಿರುವ ಅರ್ಥ. ಮಾತು ಕೇವಲ ಪದಗಳ ಜಾಲವಲ್ಲ ಎಂಬುದನ್ನು ಮಧ್ಯಪ್ರದೇಶದ ಭೋಪಾಲದಲ್ಲಿ ನಡೆದ ಅಂತರ್ರಾಷ್ಟ್ರೀಯ ಕವಿಗೋಷ್ಠಿ (ವಾಗಾರ್ಥ) ಎತ್ತಿ ತೋರಿಸಿತ್ತು.

ವಿಶ್ವದ 22 ಕವಿಗಳಿಗೂ ಇದು ಸರಿ ಎನ್ನಿಸಿತು. ಕೂಡಲೇ ಹೊರಗೆ ನಿಂತಿದ್ದ ಪ್ರತಿಭಟನಕಾರರು ಅಮೆರಿಕಾದ ಅಧ್ಯಕ್ಷರಿಗೆ ಬರೆದಿದ್ದ ಮನವಿಗೆ ಎಲ್ಲರೂ ಸಹಿ ಹಾಕಿದರು. ಕಾವ್ಯ ಎಂಬುದು ಮಿಂಚಿನ ಸರಮಾಲೆಯಲ್ಲ, ಪ್ರತಿಭಟನೆಯ ಸೆಳಕು' ಎಂಬುದನ್ನು ತೋರಿಸಿಕೊಟ್ಟರು.

ಅಂತೆಯೇ ಭೋಪಾಲ್‌ನ ಕವಿಗೋಷ್ಠಿ ನಡೆಯುತ್ತಿದ್ದ ಭಾರತ ಭವನದ ಆವರಣದ ಹೊರಗೆ ಸಾವಿರಾರು ಜನ ಕಾರ್ಮಿಕರು ಯೂನಿಯನ್ ಕಾರ್ಬೈಡ್ ವಿರುದ್ಧ ಪ್ರತಿಭಟಿಸುತ್ತಾ ನಿಂತಿದ್ದರು.

ಕೇರಳ ದಿನದಂದು ದೆಹಲಿ ಧರಣಿ

ಫೆಬ್ರುವರಿ 18ರಂದು 5 00ಕ್ಕೂ ಹೆಚ್ಚು ಮಂದಿ ರಾಜೀವ್‌ಗಾಂಧಿಯವರ ನಿವಾಸದೆದುರು ಕೇರಳದ ಎಲ್.ಡಿ.ಎಫ್. ಸರ್ಕಾರದ ವಿರುದ್ಧ ಕೇಂದ್ರದ ಪಕ್ಷಪಾತವನ್ನು ಪ್ರತಿಭಟಿಸಿ ಧರಣಿ ಹೂಡಿದರು. ಪಾಲಿಟ್‌ಬ್ಯೂರೋ ಸದಸ್ಯ ಬಾಲನಂದನ್, ಕೇಂದ್ರ ಸಮಿತಿ ಸದಸ್ಯ ಪ್ರಕಾಶ್ ಕಾರಟ್ ಮತ್ತು ರಾಜ್ಯ ಸಮಿತಿ ಕಾರ್ಯದರ್ಶಿ ಜೋಗೇಂದ್ರ ಶರ್ಮಾ ಧರಣಿಯಲ್ಲಿ ಭಾಗವಹಿಸಿದವರನ್ನು ಉದ್ದೇಶಿಸಿ ಮಾತನಾಡಿದರು.

ಕಾಂಗ್ರೆಸ್(ಐ) ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ನಡುವೆ ತೀವ್ರ ಭಿನ್ನಾಭಿಪ್ರಾಯ ಎದ್ದಾಗ ಬಿಹಾರದಲ್ಲಿ ರಾಜ್ಯಪಾಲರನ್ನು ವಜಾ ಮಾಡಲಾಯಿತು. ಆದರೆ ಕೇರಳದಲ್ಲಿ ಅಂತಹುದೇ ಪರಿಸ್ಥಿತಿ ಉಂಟಾದಾಗ ಏಕೆ ಹಾಗೆ ಮಾಡಲಿಲ್ಲ? ಇದರಲ್ಲಿ ಕೇಂದ್ರದ ಪಕ್ಷಪಾತ ನೀತಿ ಸ್ಪಷ್ಟವಾಗಿ ಕಾಣಬರುತ್ತದೆ ಎಂದು ಭಾಷಣಕಾರರು ನುಡಿದರು. ಇದೇ ರೀತಿ ಇತರ ಹಲವಾರು ವಿಧಗಳಲ್ಲಿ ಪಕ್ಷಪಾತ ನಡೆಸುತ್ತಿರುವುದನ್ನು ವಿವರಿಸಿದರು.

ಮಾ.30ರಂದು ಭೂಸುಧಾರಣಾ ದಿನ

ಫೆಬ್ರುವರಿ 12ರಂದು ಲಕ್ನೌನಲ್ಲಿ ಸೇರಿದ್ದ ಉತ್ತರ ಪ್ರದೇಶ ಕಿಸಾನ್ ಮಂಡಳಿ ಮಾರ್ಚ್ 30ರಂದು ರಾಜ್ಯದಲ್ಲಿ ಭೂಸುಧಾರಣಾ ದಿನ ಆಚರಿಸಲು ನಿರ್ಧರಿಸಿತು. ಮಾರ್ಚ್ 14ರಂದು ಯು.ಪಿ. ವಿಧಾನಸಭೆಯೆದುರು ಯು.ಪಿ. ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆಯಲಿರುವ ಮತ ಪ್ರದರ್ಶನಕ್ಕೆ ಸಕಲ ನೆರವು ನೀಡಲು ಮಂಡಳಿ ನಿರ್ಧರಿಸಿತು. ಫೆಬ್ರುವರಿ 20ರಿಂದ ಮಾರ್ಚ್ 19ರವರೆಗೆ ಒಂದು ತಿಂಗಳು ರೈತ ಸಂಘದ ಸದಸ್ಯತ್ವ ಹೆಚ್ಚಿಸಲು ಮೀಸಲಿಡಲು ಈ ವರ್ಷದೊಳಗೆ 3.25 ಲಕ್ಷ ಸದಸ್ಯತ್ವದ ಗುರಿ ಸಾಧಿಸಲು ನಿರ್ಧರಿಸಲಾಯಿತು.

ಕಿಸಾನ್ ಸಭಾದ 13 ಅಂಶಗಳ ಕಾರ್ಯಕ್ರಮವನ್ನು ಉತ್ತರ ಪ್ರದೇಶದ ಪ್ರತಿಯೊಂದು ಹಳ್ಳಿಗೂ ಒಯ್ದು ರೈತಾಪಿ ವರ್ಗವನ್ನು ಚುಚ್ಚುತ್ತಿರುವ ಸಮಸ್ಯೆಗಳ ಮೇಲೆ ಸಣ್ಣ-ದೊಡ್ಡ ಹೋರಾಟ ನಡೆಸುವುದು ಅಗತ್ಯ ಎಂದು ಭಾವಿಸಲಾಯಿತು.

ರಾಜ್ಯಪಾಲರ ಹೆಚ್ಚುತ್ತಿರುವ ದುರಾಡಳಿತ

ಪಂಜಾಬ್‌ನ ರಾಜ್ಯಪಾಲ ಆಳ್ವಿಕೆ ಕಾನೂನು-ವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವುದಷ್ಟೇ ಅಲ್ಲ, ಜನತೆಯ ಸಂಕಷ್ಟಗಳ ಬಗ್ಗೆ ಅದರ ನಿರ್ಲಕ್ಷ್ಯ ಮೇರೆ ಮೀರುತ್ತಿದೆ. ನೆರೆ ಪೀಡಿತರಿಗೆ ಅದು ಇತ್ತ ಭರವಸೆಗಳೆಲ್ಲಾ ಟೊಳ್ಳಾದವು. ವ್ಯಾಪಕ ಭ್ರಷ್ಟಾಚಾರ ಪರಿಹಾರ ವಿತರಣೆಯ ಪ್ರಧಾನ ಅಂಶವಾಯಿತು. ಇದರತ್ತ ಗಮನ ಸೆಳೆಯಲು, ನ್ಯಾಯಬದ್ಧವಾಗಿ ಪ್ರತಿಭಟಿಸಲು ಫೆಬ್ರುವರಿ 13ರಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕರೆ ನೀಡಿದ್ದ ಧರಣಿ ನಡೆಸಲು ರಾಜ್ಯಪಾಲ ಆಡಳಿತ ಬಿಡಲಿಲ್ಲ. ಸರ್ಕಾರೀ ಡಾಕ್ಟರುಗಳು, ಮಾನ್ಯತೆ ಪಡೆದ ಶಾಲಾ ಶಿಕ್ಷಕರು ಮುಷ್ಕರದಲ್ಲಿದ್ದಾರೆ. ಒಂದು ಲಕ್ಷ ವಿದ್ಯುಚ್ಛಕ್ತಿ ನೌಕರರು ಒಂದು ದಿನದ ಮುಷ್ಕರ ನಡೆಸಿದ್ದಾರೆ. ಜನವರಿ 24ರಂದು ರಸ್ತೆ ಸಾರಿಗೆ ನೌಕರರು ಒಂದು ದಿನದ ಮುಷ್ಕರ ನಡೆಸಿದರು.

ಚುನಾವಣಾ ವರ್ಷದ ಬಜೆಟ್

1ನೇ ಪುಟದಿಂದ

ಕೋಟಿ ರೂ.ಗಳ ಖೋತಾದ ಈಗಿನ ಪರಿಷ್ಕೃತ ಅಂದಾಜು 7940 ಕೋಟಿ ರೂ.ಗಳು ಅಂದರೆ ಕೇವಲ 3.00 ಕೋಟಿ ರೂ. ಹೆಚ್ಚು. ಆದರೆ ಬಜೆಟ್ಟಿನ ಮೊದಲು ಬೆಲೆಯೇರಿಕೆಗಳ ಕ್ರಮದಿಂದ ಒಮ್ಮೆಗೇ 3.00 ಕೋಟಿ ರೂ. ಹೆಚ್ಚಿನ ಆದಾಯ ಪಡೆದಿದ್ದರಿಂದ ಇದು ಸಾಧ್ಯವಾಯಿತು ಎಂಬುದನ್ನು ಜನ ಹೇಗೆ ಮರೆಯಲು ಸಾಧ್ಯ? 1989-90ರಲ್ಲಿ ರೆವಿನ್ಯೂ ಖೋತಾ 1988-89ರ ಪರಿಷ್ಕೃತ ಅಂದಾಜಿಗಿಂತ ಸುಮಾರು 4 ಸಾವಿರ ಕೋಟಿ ರೂ. ಕಡಿಮೆಯಾಗಿ 7012 ಕೋಟಿ ರೂ.ಗೆ ಇಳಿಯುವುದೆಂದು ಅಂದಾಜು ಮಾಡಲಾಗಿದೆ. ಈ ಜಾದೂ ಹೇಗೆ ಸಾಧ್ಯ? ಇದು "ತೆರಿಗೆಯೇತರ ಆದಾಯ"ದಿಂದ ಬರುತ್ತದೆ. ಇದರಲ್ಲಿ ಬಹುಪಾಲು "ಸಾರ್ವಜನಿಕ ಖಾತೆಯಲ್ಲಿಟ್ಟಿರುವ ತೈಲ ಸಂಯೋಜಕ ಸಮಿತಿಯ ಸಂಚಿತ ಖಾತೆ" ಯಿಂದ ಬರುತ್ತದೆ. ಈ ಖಾತೆಯನ್ನು ಏರ್ಪಡಿಸಿರುವುದು ತೈಲಗಳ ಆಂತರಿಕ ಮತ್ತು ಅಂತರ್ರಾಷ್ಟ್ರೀಯ ಬೆಲೆಗಳಲ್ಲಿನ ಏರಿಳಿತಗಳನ್ನು ಸರಿದೂಗಿಸುವ ಉದ್ದೇಶದಿಂದ. ಇದನ್ನು ಹಣಕಾಸು ಮಂತ್ರಿಗಳು ಹೇಗೆ ತಾನೇ ಬಳಸಲು ಸಾಧ್ಯ ಎಂದು ಆರ್ಥಿಕ ಪರಿಣತರು ಪ್ರಶ್ನಿಸಿದ್ದಾರೆ.

ಬಜೆಟ್‌ನ ಇನ್ನೊಂದು ಆತಂಕಕಾರಿ ಅಂಶವೆಂದರೆ ವಿದೇಶೀ ಸಾಲದ ಮೇಲಿನ ಹೆಚ್ಚಿನ ಅವಲಂಬನೆ. ವಿದೇಶೀ ಸಾಲ ಕಳೆದ ವರ್ಷ 3216 ಕೋಟಿ ರೂ.ಗಳಿದ್ದದ್ದು ಈ ಬಾರಿ 3722 ಕೋಟಿ ರೂ.ಗಳಿಗೇರಲಿದೆ. ಇದನ್ನು ಬಹುಪಾಲು ಖಾಸಗೀ ವಿದೇಶೀ ಬ್ಯಾಂಕುಗಳಿಂದ ಅಧಿಕ ಬಡ್ಡಿ ದರದಲ್ಲಿಯೇ ಪಡೆಯಬೇಕಾದ ಸ್ಥಿತಿಯಿದೆ. ಅಂದರೆ ಮುಂದಿನ ವರ್ಷಗಳ ತೀವ್ರ ಬೆಲೆಯೇರಿಕೆಗೆ ಈಗಾಗಲೇ ಅಡಿಗಲ್ಲು ಬಿದ್ದಿದೆ.

ಈ ಬಾರಿಯ ಬಜೆಟ್ಟಿನಲ್ಲಿ ಆದಾಯದ ಮೂಲಗಳಲ್ಲಿ 20%ದಷ್ಟು ಸಾಲವೇ ಇರುತ್ತದೆ (16% ಆಂತರಿಕವಾಗಿ, 40% ವಿದೇಶಗಳಿಂದ) ಖರ್ಚಿನಲ್ಲಿ 18%ದಷ್ಟು ಹೀಗೆ ಹಿಂದಿನ ವರ್ಷಗಳಲ್ಲಿ ಎತ್ತಿದ ಸಾಲದ ಬಡ್ಡಿಯಾಗಿ ಹೋಗುತ್ತದೆ.

ಕರ್ನಾಟಕದ ವಿಜಯನಗರ ಉಕ್ಕು ಸ್ಥಾವರಕ್ಕೆ ಕಳೆದ ವರ್ಷ ನೀಡಿದ್ದ 'ಸಾಂಕೇತಿಕ ಮೊಬಲಗಿ'ನಲ್ಲಿ ಕೂಡ 5 ಲಕ್ಷ ರೂ. ಕಡಿತ ಮಾಡಲಾಗಿದೆ. ಮಂಗಳೂರು ತೈಲಾಗಾರ, ಮಂಗಳೂರು ಬಂದರಿಗೆ ಕೊಟ್ಟಿರುವ ಹಣದಲ್ಲೂ ಕಡಿತ.

ವಿರೋಧ ಪಕ್ಷಗಳ ಬಹಿಷ್ಕಾರ

ಈ ಬಾರಿಯ ಬಜೆಟ್ ಮಂಡನೆಯ ಒಂದು ವಿಶಿಷ್ಟತೆಯೆಂದರೆ ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರ ಸಂಪೂರ್ಣ ಗೈರುಹಾಜರಿ. ಫೆಬ್ರವರಿ 27ರಂದು ಲೋಕಸಭೆಯಲ್ಲಿ ಪ್ರಧಾನ ಮಂತ್ರಿಗಳ ಪ್ರಜಾಪ್ರಭುತ್ವ ವಿರೋಧೀ ವರ್ತನೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದ್ದ ವಿರೋಧ ಪಕ್ಷಗಳ ಸದಸ್ಯರು (ಯಥಾಪ್ರಕಾರ ನ್ಯಾಶನಲ್ ಕಾನ್ಫರೆನ್ಸ್, ಎ.ಐ.ಎ.ಡಿ.ಎಂ.ಕೆ. ಬಿಟ್ಟು) ಪ್ರಧಾನ ಮಂತ್ರಿಗಳು ಇದನ್ನು ಸೂಕ್ತವಾಗಿ ಸರಿಪಡಿಸುವವರೆಗೆ ಸದನಕ್ಕೆ ಬಹಿಷ್ಕಾರ ಹಾಕಲು ನಿರ್ಧರಿಸಿದರು. ಮರುದಿನ ರಾಜ್ಯ ಸಭೆಯಲ್ಲೂ ಪ್ರಧಾನಿಗಳು ಇದನ್ನೇ ಪುನರಾವರ್ತನೆ ಮಾಡಿದರು. ಅಲ್ಲೂ ಸಭಾತ್ಯಾಗವಾಯಿತು.

ವಿರೋಧ ಪಕ್ಷಗಳು ಭಯೋತ್ಪಾದನೆಯನ್ನು ಬೆಂಬಲಿಸುತ್ತವೆ ಎಂಬ ಪ್ರಧಾನಿಗಳ ಹೇಳಿಕೆಯನ್ನು ವಿರೋಧ ಪಕ್ಷಗಳು ಬಲವಾಗಿ ಪ್ರತಿಭಟಿಸಿದಾಗ "ಸಿ.ಪಿ.ಐ.(ಎಂ) ಇದಕ್ಕೆ ಹೊರತು" ಎಂದು ತಿದ್ದಿಕೊಂಡರಷ್ಟೆ. (ಅದು ಅನಿವಾರ್ಯವಾಗಿತ್ತು) ಮರುದಿನ ತಾನು ಇಡೀ ವಿರೋಧ ಪಕ್ಷಗಳನ್ನು ಹಾಗನ್ನಲಿಲ್ಲ, ಒಬ್ಬ ಎಂ.ಪಿ. ಬಗ್ಗೆ ಹೇಳಿದೆ, ಇದರಿಂದ ವಿರೋಧ ಪಕ್ಷಗಳ ಸದಸ್ಯರಿಗೆ ಬೇಸರವಾಗಿದ್ದರೆ ಖೇದ ವ್ಯಕ್ತಪಡಿಸುತ್ತೇನೆ ಎಂದರು. ಇದರಿಂದ ವಿರೋಧ ಪಕ್ಷಗಳಿಗೆ ತೃಪ್ತಿಯಾಗದಿದ್ದರೂ ಬಜೆಟ್ ಅಧಿವೇಶನದಲ್ಲಿ ಜನರನ್ನು ತಟ್ಟುವ ಪ್ರಮುಖ ಪ್ರಶ್ನೆಗಳನ್ನು ಎತ್ತಬೇಕಾಗುವುದರಿಂದ ಗುರುವಾರದಿಂದ ಸದನ ಕಲಾಪಗಳಲ್ಲಿ ಭಾಗವಹಿಸಲು ನಿರ್ಧರಿಸಿದರು.

ಜನರ ಕಣ್ಣಿಗೆ ಮಣ್ಣೆರಚುವ ರೈಲ್ವೆ ಬಜೆಟ್

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಸೆಕ್ರೆಟೇರಿಯೇಟ್ ಸದಸ್ಯರಾದ ಎನ್.ಕೆ.ಉಪಾಧ್ಯಾಯರು ರೈಲ್ವೆ ಬಜೆಟ್ ಕುರಿತು ಪಕ್ಷದ ಪ್ರತಿಕ್ರಿಯೆ ಈ ರೀತಿ ವ್ಯಕ್ತ ಮಾಡಿದ್ದಾರೆ.

ಪ್ರಯಾಣ ದರದಲ್ಲಿ ಯಾವುದೇ ಏರಿಕೆಯಿಲ್ಲದೆ ರೂ. 140ಕೋಟಿ ನಿವ್ವಳ ಆದಾಯ ತೋರಿಸುವ ರೈಲ್ವೆ ಮಂತ್ರಿ ಮಾಧವರಾವ್ ಸಿಂಧ್ಯಾ ಅವರು ಲೋಕಸಭೆಯಲ್ಲಿ ಮಂಡಿಸಿದ ರೈಲ್ವೆ ಬಜೆಟ್ ಜನರ ಕಣ್ಣಿಗೆ ಮಣ್ಣೆರಚುವ ಕುತಂತ್ರವಾಗಿದೆ. ಚುನಾವಣೆಯ ಉದ್ದೇಶದಿಂದ ಪ್ರಯಾಣ ದರದಲ್ಲಿ ಹೆಚ್ಚಳವಿಲ್ಲವೆಂದು ಹೇಳುತ್ತಿರುವಾಗಲೇ ಲಗೇಜ್ ಮತ್ತು ಪಾರ್ಸೆಲ್ ದರವನ್ನು ಶೇ. 11ರಷ್ಟು ಹೆಚ್ಚಿಸಿದ ಪರಿಣಾಮವಾಗಿ ಆಹಾರ ಧಾನ್ಯಗಳನ್ನೊಳಗೊಂಡು ಪ್ರತಿಯೊಂದು ವಸ್ತುವಿನ ಬೆಲೆಹೆಚ್ಚಾಗಿ, ಪ್ರಯಾಣ ದರ ಹೆಚ್ಚಿಸುವುದಿಲ್ಲೆಂಬ ಆಶ್ವಾಸನೆಯನ್ನು ಸುಳ್ಳಾಗಿಸುತ್ತದೆ ಎಂಬ ಅಂಶವನ್ನು ಸಾರ್ವಜನಿಕರು ತಿಳಿಯುವುದು ಅತ್ಯಗತ್ಯ.

ಕರ್ನಾಟಕದ ಮಟ್ಟಿಗಂತೂ ರೈಲ್ವೆ ಬಜೆಟ್ ಅತ್ಯಂತ ನಿರಾಶದಾಯಕವಾಗಿದೆ. ಕರ್ನಾಟಕಕ್ಕೆ ಪ್ರತ್ಯೇಕ ವಲಯದ ಕುರಿತಾಗಲೀ, ಹುಬ್ಬಳ್ಳಿ-ಕಾರವಾರ ರೈಲ್ವೆ ಮಾರ್ಗದ ವಿಷಯದಲ್ಲಾಗಲೀ, ಬೆಂಗಳೂರು-ಮೀರಜ್, ಹುಬ್ಬಳ್ಳಿ-ಸೋಲಾಪುರ ಗೇಜಿನ ಬದಲಾವಣೆಯ ಕುರಿತಾಗಲೀ ಮಂತ್ರಿಗಳು ಚಕಾರವೆತ್ತದೆ ನಮ್ಮ ರಾಜ್ಯಕ್ಕೆ ಅನ್ಯಾಯವೆಸಗಿದ್ದಾರೆ. ಬೆಂಗಳೂರು-ಜೋಲಾರಪೇಟೆ ವಿದ್ಯುದ್ದೀಕರಣಕ್ಕೆ, ಬೆಂಗಳೂರು-ಮೈಸೂರು ಗೇಜ್ ಬದಲಾವಣೆಗೆ ಬೇಕಾಗಿಟ್ಟ ಹಣ ಅತ್ಯಲ್ಪ. ಮಂಗಳೂರು-ಉಡುಪಿ ರೈಲ್ವೆ ಮಾರ್ಗ ರಚನೆಯ ಕಾರ್ಯ ಬರೀ ಚುನಾವಣೆಯ ಸ್ಟಂಟ ಆಗಬಹುದು.

ಸಾರ್ವಜನಿಕರಿಗೂ ಕರ್ನಾಟಕ ರಾಜ್ಯಕ್ಕೂ ಅಪಾರ ಅನ್ಯಾಯವೆಸಗಿದ ಈ ರೈಲ್ವೆ ಬಜೆಟನ್ನು ಸ್ವಾಗತಿಸಿದ ಕಾಂಗ್ರೆಸ್ ಶಾಸಕ ಟಿ.ಎನ್.ನರಸಿಂಹಮೂರ್ತಿಯವರ ಹೇಳಿಕೆ ಖಂಡನೀಯ. ನಮ್ಮ ರಾಜ್ಯದಲ್ಲಿ 20 ಕಾಂಗ್ರೆಸ್ ಲೋಕಸಭಾ ಸದಸ್ಯರಿದ್ದರೂ ಕಳೆದ 4 ವರ್ಷಗಳ ಬಜೆಟ್ಟಿನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದ್ದರೂ ಅದನ್ನು ದೂರೀಕರಿಸಲಿಕ್ಕೆ ಈ ವರ್ಷ ಕೂಡ ಪ್ರಯತ್ನ ಮಾಡದಿರುವುದು ಖಂಡನೀಯ. ನಮ್ಮ ರಾಜ್ಯದಲ್ಲಿ ರೈಲ್ವೆ ಅಭಿವೃದ್ಧಿ ತರಲು ಸಂಯುಕ್ತ ಚಳುವಳಿ ಅತ್ಯಗತ್ಯ.

ಕಾಂಟ್ರ್ಯಾಕ್ಟ್ ಪದ್ಧತಿ ರದ್ದತಿಗಾಗಿ ಹೋರಾಟ

ಕರ್ನಾಟಕ ವಿದ್ಯುತ್ ನಿಗಮದ ಒಡೆತನದ ರಾಜ್ಯದ ರಾಯಚೂರು ಥರ್ಮಲ್ ವಿದ್ಯುತ್ ಘಟಕದಲ್ಲಿ ಕಳೆದ 7ವರ್ಷಗಳಿಂದ ಕಂಟ್ರ್ಯಾಕ್ಟ್ ಪದ್ಧತಿ ಅಡಿ ದುಡಿಯುತ್ತಿರುವ ಒಂದು ಸಾವಿರ ಕಾರ್ಮಿಕರಿಗೆ ಸರಿಯಾದ ವೇತನ ಸೇವಾ ಸೌಲಭ್ಯವಿಲ್ಲದೆ ಕಾಂಟ್ರ್ಯಾಕ್ಟರು ಶೋಷಣೆ ಮಾಡುತ್ತಿದ್ದಾರೆ. 1970ರ ಕರ್ನಾಟಕ ರಾಜ್ಯ ಸರ್ಕಾರ ಕೈಗಾರಿಕೆಗಳಲ್ಲಿ ಕಾಂಟ್ರ್ಯಾಕ್ಟ್ ಪದ್ಧತಿ ನಿಷೇಧಿಸುವ ಕಾಯ್ದೆ ಮಾಡಿದ್ದರೂ ರಾಯಚೂರು ಶಾಖೋತ್ಪನ್ನ ಕೇಂದ್ರದಲ್ಲಿ ಜಾರಿಯಾಗಿಲ್ಲ. ಕಾಂಟ್ರ್ಯಾಕ್ಟ್ ಪದ್ಧತಿ ರದ್ದುಗೊಳಿಸಿ ನೌಕರಿ ಖಾಯಂಗೊಳಿಸಲು ಹಾಗೂ ಕಾರ್ಮಿಕ ಕಾಯ್ದೆ ಸೇವಾ ಸವಲತ್ತುಗಳನ್ನು ಕಟ್ಟುನಿಟ್ಟಾಗಿ ಜ್ಯಾರಿಗೊಳಿಸಬೇಕೆಂದು ಒತ್ತಾಯಿಸಿ ಇಲ್ಲಿನ ಕಾರ್ಮಿಕರು ಸಿ.ಐ.ಟಿ.ಯು. ಸಂಘದ ನೇತೃತ್ವದಲ್ಲಿ ಕಳೆದ ಡಿಸೆಂಬರ್‌ನಿಂದ ಹೋರಾಟ ಪ್ರಾರಂಭಿಸಿ ಫೆಬ್ರವರಿ 4ರಂದು 'ಬೆಂಗಳೂರು ಚಲೋ' ನಡೆಸಿ ಕಾರ್ಮಿಕ ಕಮಿಷನರ್, ಆಡಳಿತ ವರ್ಗದ ಮೇನೆಜಿಂಗ್ ಡೈರೆಕ್ಟರ್‌ರವರಿಗೂ ಮನವಿ ಸಲ್ಲಿಸಿ ಧರಣಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಕಾಂಟ್ರ್ಯಾಕ್ಟ್ ಕಾರ್ಮಿಕರನ್ನು ಖಾಯಂ ಮಾಡಬೇಕು, ದಾಖಲಾತಿ ಇಡಬೇಕು ಪ್ರಾವಿಡೆಂಡ್ ಫಂಡ್ ನೀಡಬೇಕು, ವಿನಾ ಕಾರಣ ವಜಾ ಮಾಡಬಾರದು, ವೈದ್ಯಕೀಯ ಸೌಲಭ್ಯ ನೀಡಬೇಕೆಂಬ ಬೇಡಿಕೆ ಮುಂದಿರಿಸಿ ಇತರೇ ಕಾರ್ಮಿಕ ಬಂಧುಗಳೊಂದಿಗೆ ಮುಂದಿನ ಹಂತದ ಹೋರಾಟಕ್ಕಿಳಿಯುವುದು ಅನಿವಾರ್ಯವೆಂದು ಸಂಘ ಸರ್ಕಾರವನ್ನು ಎಚ್ಚರಿಸುತ್ತದೆ ಎಂದು ಸಂಘದ ಕಾರ್ಯದರ್ಶಿ ಕಾ॥ ಬೀರಪ್ಪ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕುಂದಾಪುರ; ಬೀಡಿ ಕಾರ್ಮಿಕರ ಸಮಾವೇಶ

ಬೀಡಿ ಕೈಗಾರಿಕೆಯಲ್ಲಿ ಕಾಂಟ್ರ್ಯಾಕ್ಟ್ ಪದ್ಧತಿಯ ಪರಿಣಾಮವಾಗಿ ಬೀಡಿ ಕಟ್ಟುವ ಕಾರ್ಮಿಕರು ಕನಿಷ್ಠ ಕೂಲಿ, ತುಟ್ಟಿಭತ್ಯೆ ಮುಂತಾದ ಸೇವಾ ಸೌಲಭ್ಯದಿಂದ ವಂಚಿತರಾಗಿದ್ದು ಈ ಅನಿಷ್ಟ ಪದ್ಧತಿ ರದ್ದಿಗಾಗಿ ಸಂಘಟಿತ ಹೋರಾಟ ನಡೆಸಲು ಸಿ.ಐ.ಟಿ.ಯು.ನಾಯಕರಾದ ಕಾ॥ ಸಿ.ನಾರಾಯಣ, ಶಿವಾನಂದಕೋಡಿಯವರು ಹಾಗೂ ರೈತ ಮುಖಂಡ ಕಾ॥ ಅಬ್ರಹಾಂ ಕರ್ಕಡರವರು ಫೆ. 19ರಂದು ಕುಂದಾಪುರದಲ್ಲಿ ಬೀಡಿ ಕಾರ್ಮಿಕರ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಕರೆ ನೀಡಿದರು. ಕಾ॥ ಕೆ.ಶಂಕರ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಾವಿರ ಬೀಡಿ ಕಟ್ಟಲು 20 ರೂ. ನಿಗಧಿಯಾಗಬೇಕು, ಪಾಯಿಂಟಿಗೆ 5 ಪೈಸೆಯಂತೆ ತುಟ್ಟಿಭತ್ಯೆ ನೀಡಬೇಕು. ಮುಂತಾದ ಬೇಡಿಕೆ ಕುರಿತು ನಿರ್ಣಯ ಅಂಗೀಕರಿಸಲಾಯಿತು. ಈ ಬೇಡಿಕೆಗಳಿಗಾಗಿ ನಡೆಯುವ ರಾಜ್ಯ ವ್ಯಾಪಿ ಚಳುವಳಿ ಯಶಸ್ವಿಗೊಳಿಸಲು ಸಮಾವೇಶ ತೀರ್ಮಾನಿಸಿತು.

ಅಂಗನವಾಡಿ ಸ್ಥಾಪನೆ ಹೋರಾಟಕ್ಕೆ ಜಯ

ಬಂಗಾರುಪೇಟೆ ಬಳಿ ಇರುವ ಕೆರೆಕೋಡು ಗ್ರಾಮ 400 ಸಂಖ್ಯೆ ವಾಸಿಸುವ ಹಿಂದುಳಿದ ಜನತೆಯ ಪ್ರದೇಶದ ಮಕ್ಕಳಿಗೆ ಶಾಲೆಯ ಸೌಲಭ್ಯವಿಲ್ಲವಾಗಿದೆ ಈ ಸಮಸ್ಯೆ ಕುರಿತು ಡಿ.ವೈ.ಎಫ್.ಐ. ಬಂಗಾರಪೇಟೆ ಮಂಡಲ ಪಂಚಾಯ್ತಿ ಜಿಲ್ಲಾ ಪರಿಷತ್‌ಗೆ ಮಾಡಿದ ಮನವಿಗೆ ಪುರಸ್ಕಾರ ಸಿಗದಿದ್ದಾಗ ಬಾಲವಿಕಾಸ ಯೋಜನಾಧಿಕಾರಿಯನ್ನು ಒತ್ತಾಯಿಸಿದ ಪರಿಣಾಮವಾಗಿ ಅಂಗನವಾಡಿ ಕೇಂದ್ರ ಮಂಜೂರು ಮಾಡಲಾಗಿದೆ.

ಜನವರಿ 23ರಂದು ನಡೆದ ಅಂಗನವಾಡಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಬಾಲವಿಕಾಸ ಯೋಜನಾಧಿಕಾರಿ ಶ್ರೀ ಚಂದ್ರಶೇಖರಯ್ಯ, ಉಪ ಅಧಿಕಾರಿ ಶ್ರೀ ನಾಯಕ್, ಮೇಲ್ವಿಚಾರಕ ಮುಕ್ತಾಬಾಯ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಿ.ವೈ.ಎಫ್.ಐ.ನ ಬಂಗಾರಪೇಟೆ ಕಾರ್ಯದರ್ಶಿ ಕಾ॥ ವಿ. ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕೋಲಾರ ಜಿಲ್ಲಾ ಅಧ್ಯಕ್ಷ ಕಾ॥ ಪಿ. ಶ್ರೀನಿವಾಸ್, ಎಲ್.ರಾಮಚಂದ್ರ, ಬಿ.ಕೆ. ನಂದೀಶ್ ಹಾಗೂ ಸಮುದಾಯದ ಅಧ್ಯಕ್ಷ ಸುಧಾಕರ್ ಉಳ್ಳಾಲ್‌ರವರು ಸಭೆಯಲ್ಲಿ ಮಾತನಾಡಿದರು.

1ನೇ ಪುಟದಿಂದ

ಕಾಂಗ್ರೆಯೇತರ ರಾಜ್ಯಗಳಲ್ಲಿ ರಾಜ್ಯಪಾಲರ ಮೂಲಕ ಕಾಂಗ್ರೆಸ್‌ನ ಹಿತಾಸಕ್ತಿಗಳನ್ನು ಬೆಳೆಸಲು ಯತ್ನಿಸಲಾಗುತ್ತಿದೆ. ಕೇರಳ, ಆಂಧ್ರದ ಅನುಭವಗಳು ಎಲ್ಲರಿಗೂ ಗೊತ್ತು. ಇತ್ತೀಚೆಗೆ ಪಶ್ಚಿಮಬಂಗಾಳದ ರಾಜ್ಯಪಾಲರನ್ನು ಬದಲಿಸಿ ಗುಪ್ತಚರ ಇಲಾಖೆ ಮಾಜಿ ಮುಖ್ಯಾಧಿಕಾರಿಗಳನ್ನು ರಾಜ್ಯಪಾಲರಾಗಿ ನೇಮಿಸಲಾಗಿದೆ. ಸರ್ಕಾರಿಯಾ ಆಯೋಗದ ಸೀಮಿತ ಶಿಫಾರಸುಗಳನ್ನು ಕೂಡ ಸರ್ಕಾರ ಒಪ್ಪುವಂತೆ ಕಾಣುತ್ತಿಲ್ಲ.

ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಬೆದರಿಕೆಯ ಬಗ್ಗೆ ಹೇಳುವುದಾದರೆ ರಾಷ್ಟ್ರಪತಿ ಭಾಷಣ ಆ ಬಗ್ಗೆ ಪೂರ್ಣ ಕುರುಡುತನ ತೋರಿದೆ. ಸರ್ಕಾರ ಈ ರಂಗದಲ್ಲಿ ತನ್ನ ದಿವಾಳಿಕೋರತನವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುವುದು ಕಂಡು ಬಂದಿದೆ.

ರಾಷ್ಟ್ರಪತಿ ಭಾಷಣದ ಏಕೈಕ ಉತ್ತಮ ಅಂಶವೆಂದರೆ ಶಾಂತಿ, ಅಲಿಪ್ತತೆ ನಿಶ್ಶಸ್ತ್ರೀಕರಣ ವಿದೇಶಾಂಗ ನೀತಿಯನ್ನು ಕುರಿತಾದದ್ದು.

ಒಟ್ಟಾರೆ ಹೇಳುವುದಾದರೆ ರಾಷ್ಟ್ರಪತಿ ಭಾಷಣ ಸರ್ಕಾರ ದೇಶದ ಸಮಸ್ಯೆಗಳನ್ನು ಎದುರಿಸುವಲ್ಲಿ ತೀವ್ರ ಮುತುವರ್ಜಿ ವಹಿಸುತ್ತಿದೆ ಎಂಬ ಭರವಸೆಯನ್ನು ಜನತೆಯಲ್ಲಿ ಮೂಡಿಸುವಲ್ಲಿ ವಿಫಲವಾಗಿದೆ.

(ಪಿ.ಡಿ.ಸಂಪಾದಕೀಯದಿಂದ)

ಬಳ್ಳಾರಿಯಲ್ಲಿ ಕೇರಳ ದಿನಾಚರಣೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಕೇರಳ ದಿನ ಆಚರಿಸಲು ನೀಡಿದ ಕರೆಯಂತೆ ಬಳ್ಳಾರಿಯ ಜಿಲ್ಲಾಧಿಕಾರಿ ಕಛೇರಿ ಮುಂದೆ ಫೆಬ್ರವರಿ 18ರಂದು ಧರಣಿ ಸತ್ಯಾಗ್ರಹ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಅರ್ಜಿ ಸಲ್ಲಿಸಲಾಯಿತು.

ಕೇರಳದ ರಾಜ್ಯಪಾಲರಾದ ರಾಮ್ ದುಲ್ಹಾರಿ ಸಿನ್ಹಾರವರನ್ನು ವಾಪಸು ಕರೆಸಿಕೊಳ್ಳಿ, ಸರ್ಕಾರಿಯಾ ಕಮಿಷನ್ ಸಲಹೆಯಂತೆ ರಾಜ್ಯಪಾಲರ ನೇಮಕ ಬದಲಾಗಬೇಕು, ಕಾಂಗ್ರೆಯೇತರ ಸರ್ಕಾರಗಳ ಬಗ್ಗೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಬದಲಾಗಬೇಕು, ಕೇಂದ್ರದ ತೆರಿಗಳಲ್ಲಿ ರಾಜ್ಯ ಸರ್ಕಾರಗಳಿಗೆ ಸಲ್ಲಬೇಕಾದ ಪಾಲನ್ನು ನೀಡಬೇಕು ಎಂಬಿತ್ಯಾದಿ ಬೇಡಿಕೆಗಳ ಕುರಿತು ಮನವಿಯಲ್ಲಿ ರಾಷ್ಟ್ರಪತಿಗಳನ್ನು ಒತ್ತಾಯಿಸಲಾಗಿದೆ. ಬಳ್ಳಾರಿ ನಗರದಲ್ಲೆಲ್ಲಾ ಕರಪತ್ರ ವಿತರಿಸಿ ವ್ಯಾಪಕ ಪ್ರಚಾರ ನಡೆಸಿ ಬಹಿರಂಗ ಸಭೆ ನಡೆಸಲಾಯಿತು. ಪಕ್ಷದ ಜಿಲ್ಲಾಕಾರ್ಯದರ್ಶಿ ಕಾ॥ ಪ್ರಸನ್ನಕುಮಾರ್, ಕಾ॥ ಯು.ಬಸವರಾಜ್, ಕಾ॥ ರಘು, ಕಾ॥ ಷಣ್ಮುಖಪ್ಪರವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಎ.ಐ.ಕೆ.ಎಸ್. ಸಮ್ಮೇಳನದ ಸಿದ್ಧತೆ ಆರಂಭ

ಆಂಧ್ರಪ್ರದೇಶದ ಖಮ್ಮಂನಲ್ಲಿ ಏಪ್ರಿಲ್ 25 ರಿಂದ 29ರವರೆಗೆ ನಡೆಯಲಿರುವ ಅಖಿಲ ಭಾರತ ಕಿಸಾನ್ ಸಭಾದ 26ನೇ ಸಮ್ಮೇಳನಕ್ಕೆ ಸಿದ್ಧತೆ ಭರದಿಂದ ಆರಂಭವಾಗಿದೆ. ಸ್ವಾಗತ ಸಮಿತಿಯ ರಚನೆಗೆಂದು ಇದೇ ಫೆಬ್ರವರಿ 12ರಂದು ಒಂದು ಸಭೆ ನಡೆಯಿತು. ಇದರಲ್ಲಿ ಒಂದು ಸಾವಿರ ಜನ ಭಾಗವಹಿಸಿದ್ದರು.

ಎ.ಐ.ಕೆ.ಎಸ್. ಉಪಾಧ್ಯಕ್ಷ ಕಾ॥ ಹರ್ಕಿಷನ್ ಸಿಂಗ್ ಸುರ್ಜಿತ್ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಕಾ॥ ಎಲ್.ಬಿ.ಗಂಗಾಧರ್‌ರಾವ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ತೆಲುಗುದೇಶಂ ಮುಖಂಡ ಹಾಗೂ ಜಿಲ್ಲಾ ಪರಿಷತ್ತು ಅಧ್ಯಕ್ಷ ಶ್ರೀ ಚ. ಕಾಸಯ್ಯಾ ಕೂಡಾ ಸಭೆಯಲ್ಲಿ ಹಾಜರಿದ್ದು ತನ್ನ ಸಹಕಾರದ ಭರವಸೆ ನೀಡಿದರು.

ಸಭೆಯಲ್ಲಿ ರಚಿಸಲಾದ ಸ್ವಾಗತ ಸಮಿತಿಗೆ ಎ.ಐ.ಕೆ.ಎಸ್. ಆಂಧ್ರ ಘಟಕದ ಅಧ್ಯಕ್ಷ ಹಾಗೂ ಸಂಸತ್ ಸದಸ್ಯ ಕಾ॥ ಬಿ.ಎನ್.ರೆಡ್ಡಿ ಅಧ್ಯಕ್ಷರಾಗಿರುತ್ತಾರೆ. ತೆಲುಗುದೇಶಂ ಮುಖಂಡ ಚ. ಕಾಸಯ್ಯಾ, ಕಾ॥ ಕೊರಟಾಲಾ ಸತ್ಯನಾರಾಯಣ, ಕಾ॥ ಎನ್. ಪ್ರಸಾದ್‌ರಾವ್ ಮತ್ತು ಕಾ॥ಪಿ.ರಾಮಯ್ಯ (ಅನುಕ್ರಮವಾಗಿ ಎ.ಐ.ಕೆ.ಎಸ್., ಸಿ.ಐ.ಟಿ.ಯು. ಮತ್ತು ಕೃಷಿ ಕಾರ್ಮಿಕರ ಸಂಘದ ರಾಜ್ಯ ಘಟಕಗಳ ಪ್ರಧಾನ ಕಾರ್ಯದರ್ಶಿಗಳು), ಡಾ॥ ವೈ. ರಾಧಾಕೃಷ್ಣಮೂರ್ತಿ, ಚ.ಲಕ್ಷ್ಮಿನರಸಯ್ಯ, ಆಂಧ್ರ ಪ್ರದೇಶ ಮಹಿಳಾ ಸಂಘಂನ ಅಧ್ಯಕ್ಷೆ ಮಲ್ಲು ಸ್ವರಾಜ್ಯಂ ಸ್ವಾಗತ ಸಮಿತಿಯ ಉಪಾಧ್ಯಕ್ಷರುಗಳು. ಕಾ॥ ಬಿ.ವೆಂಕಟೇಶ್ವರರಾವ್ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು.

ಕಾ॥ ಬಿ.ವೆಂಕಟೇಶ್ವರರಾವ್ ಮನವಿಗೆ ಓಗೊಟ್ಟು 2.4ಲಕ್ಷ ರೂ. ಸಂಗ್ರಹ ಮಾಡುವ ಭರವಸೆ ಸಭೆಯಲ್ಲಿ ಹೊರಹೊಮ್ಮಿತು. ಸಿ.ಪಿ.ಐ.(ಎಂ) ಖಮ್ಮಂ ಪಟ್ಟಣ ಸಮಿತಿಯೊಂದೇ ಒಂದು ಲಕ್ಷ ರೂ. ಸಂಗ್ರಹಿಸಲಿದೆ. ನಗದು ರೂಪದಲ್ಲಿ ಮಾತ್ರವಲ್ಲ, ವಸ್ತುಗಳ (ಅಕ್ಕಿ, ಬೇಳೆ, ಕಟ್ಟಿಗೆ ಇತ್ಯಾದಿ) ರೂಪದಲ್ಲೂ ಭರವಸೆಗಳು ಬಂದವು. ಪ್ರಜಾನಾಟ್ಯ ಮಂಡಳಿ ಸಮ್ಮೇಳನದ ಪ್ರಚಾರ ಕಾರ್ಯದ ಜವಾಬ್ದಾರಿ ವಹಿಸಿಕೊಂಡಿತು.

ಕಾ॥ ಸುರ್ಜಿತ್ ತನ್ನ ಭಾಷಣದಲ್ಲಿ ಕೃಷಿರಂಗದಲ್ಲಿ ಮತ್ತು ಇತರ ಎಲ್ಲಾ ರಂಗಗಳಲ್ಲಿನ ಸ್ಥಿತಿಯನ್ನು ವಿವರಿಸಿದರು. ಸ್ವಾತಂತ್ರ್ಯದ 40ವರ್ಷಗಳ ನಂತರವೂ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಶಾಸನಗಳು ಜ್ಯಾರಿಯಾಗಿಲ್ಲ. 1951ರಿಂದ 76 ಭೂ ಸುಧಾರಣಾ ಶಾಸನಗಳು ಬಂದಿದ್ದರೂ ಮಿಗುತಾಯ ಜಮೀನು ಹಾಗೂ ಬೀಳು ಭೂಮಿಯ ವಿತರಣೆಯಾಗಿಲ್ಲ. 1988ನ್ನು ಭೂಸುಧಾರಣಾ ವರ್ಷವೆಂದು ಘೋಷಿಸಿದರೂ ಭೂಮಿ ಪ್ರಶ್ನೆ ಹಾಗೇ ಉಳಿದಿದೆ. ಆದ್ದರಿಂದ ದೇಶ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಇಂದು ಈ ಸಮ್ಮೇಳನವನ್ನು ಪರ್ಯಾಯವೊಂದನ್ನು ರೂಪಿಸುವ ದೆಸೆಯಲ್ಲಿ ಯಶಸ್ವಿಗೊಳಿಸುವುದು ಅಗತ್ಯ ಎಂದು.

ಖಮ್ಮಂ ಹಲವು ಹೋರಾಟಗಳನ್ನು ಕಂಡ ಪ್ರದೇಶ. ಹಲವಾರು ಸಮ್ಮೇಳನಗಳನ್ನು ಇಲ್ಲಿ ನಡೆಸಲಾಗಿದೆ. ಆದರೆ ಎ.ಐ.ಕೆ.ಎಸ್. ಸಮ್ಮೇಳನ ಇಲ್ಲಿ ನಡೆಯುತ್ತಿರುವುದು 1944ರ ನಂತರ ಇದೇ ಮೊದಲು.

ಇದನ್ನು ಅತ್ಯಂತ ಯಶಸ್ವಿಗೊಳಿಸಲು ಸಂಗಾತಿಗಳು ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ.

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053. Editor: P.Ramachandra Rao Managing Editor N.K.Upadhyaya
Managerial Office: Shobha Lodge Complex, 5th Main Road, Gandhinagar, Bangalore-560009.